
ವಿಮಾನದಾಳಿಸಂರಕ್ಷಣೆ



ಶ್ರೀ. ಟಿ. ಆರ್. ಭಾಗವತ ಬಿ. ಎ.

೬ ಆಣೆ

ವಿಮಾನದಾಳಿ ಸಂರಕ್ಷಣೆ

ಲೇಖಕರು: ಪ್ರಕಾಶಕರು:
ಶ್ರೀ. ಟಿ. ಆರ್. ಭಾಗವತ ಬಿ. ಎ.

ಮುದ್ರಕರು:— ಭಾಲಚಂದ್ರ ಘಾಣೇಕರ
ಪ್ರತಿಭಾ ಮುದ್ರಣಾಲಯ, ಧಾರವಾಡ.

ಜೂನ ೧೫
೧೯೪೨

ಬೆಲೆ ೩ ಆಣೆ

ತಪ್ಪದೆ ಓದಿರಿ

—ಸಚಿತ್ರ ಕಾಮಶಾಸ್ತ್ರದ ಉತ್ತಮವಾದ ಗ್ರಂಥಗಳು—

೧	ಪ್ರೇಮಕಲಾ (ಡಾ. ಗೋಪಾಲಕೃಷ್ಣರು)	.... ೧ ರೂ.
೨	ಪೌರುಷ ,,	.... ೧ ರೂ.
೩	ಸ್ವರತಿ ,,	.... ೧ ರೂ.
೪	ಕಾಮದಹನದ ಭ್ರಾಂತಿ (ಡಾ. ವನವಿಹಾರಿ)	.... ೧೨ ಆಣೆ
೫	ಫಿರಂಗಿ ಪರಮಾರೋಗಗಳ ಸಮಸ್ಯೆ (ಡಾ. ಕೊಣ್ಣೂರ)	.... ೮ ಆಣೆ
೬	ರತಿರಹಸ್ಯ (ಹೊಸ ಪುಸ್ತಕ)	.... ೧ ರೂ.

—ಸಚಿತ್ರ ಸಾಮುದ್ರಿಕ ಶಾಸ್ತ್ರದ ಪುಸ್ತಕಗಳು—

೧	ಕೈಗನ್ನಡಿ (ಕಲಮದಾನಿ ಗುರುರಾಯರು)	.... ೧ ರೂ.
೨	ಹಸ್ತಸಾಮುದ್ರಿಕ ,,	.... ೧ ರೂ.

—ಮನೋಹರವಾದ ಕಥಾಸಂಗ್ರಹಗಳು—

೧	ಪ್ರತಿಬಿಂಬ (ಶ್ರೀ. ಅನಂತ ಕಾಣೇಕರ)	.... ೬ ಆಣೆ
೨	ಸಿಡಿಲು (ಶ್ರೀ. ಭಾಲಚಂದ್ರ ಫಾಣೇಕರ)	.... ೪ ಆಣೆ
೩.	ಪ್ರೇಮಪಥ (ಶರತ ಬಾಬುಗಳು)	.... ೩ ಆಣೆ
೪	ಹೇಮಾಂಗಿನಿ ,,	.... ೩ ಆಣೆ
೫	ಮಂಗಲಸೂತ್ರ ,,	... ೨ ಆಣೆ
೬	ಚಿತ್ರ ,,	.... ೧೦ ಆಣೆ
೭	ಮನೆಯ ಸುಖಸಾಂತಿ (ಟಾಲಸ್ಟಾಯ ಕಾದಂಬರಿ)	.... ೧೦ ಆಣೆ
೮	ಸನ್ಯಾಸಿನಿ (ಐದಂಕಿನ ನಾಟಕ)	.... ೧೦ ಆಣೆ

(ವ್ಹಿ. ಪಿ. ವೆಚ್ಚ ಬೇರೆ)

ದೊರೆಯುವ ವಿಳಾಸ:—ಸಮಾಜ ಪುಸ್ತಕಮಾಲೆ, ಧಾರವಾಡ.

ಮುನ್ನುಡಿ

ಯುದ್ಧವೀಗ ನಮ್ಮ ಬಾಗಿಲಿಗೇ ಬಂದಿದೆ. ಶತ್ರುವು ಆಸಾಮದ ಗಡಿಯಲ್ಲಿ ನಿಂತು ಜಯಘೋಷಮಾಡುತ್ತಿದ್ದಾನೆ. ಬಹುಬೇಗ ನಾವು ಬಾಂಬು ದಾಳಿಗಳನ್ನು ಎದುರಿಸಬೇಕಾದ ಪ್ರಸಂಗ ಬರಬಹುದು. ಅನಂತ ಕಷ್ಟಗಳನ್ನು ಸಹಿಸಬೇಕಾಗಬಹುದು. ಈ ದಾಳಿಗಳನ್ನು ಎದುರಿಸುವ ರೀತಿಯನ್ನು ಜನರಿಗೆ ತಿಳಿಸುವದೇ ಈ ಪುಸ್ತಕದ ಉದ್ದೇಶ.

ಈ ರೀತಿಯ ಯುದ್ಧಸಾಹಿತ್ಯ—ಯುದ್ಧವನ್ನು ಎದುರಿಸಲು ಜನರನ್ನು ಎಚ್ಚರಿಸುವ, ತರಬೇತು ಮಾಡುವ ಪುಸ್ತಕಗಳು ಭಾರತೀಯ ಭಾಷೆಗಳಲ್ಲಿ ಹೆಚ್ಚು ಇಲ್ಲ. ಕನ್ನಡದಲ್ಲಂತೂ ಇಲ್ಲವೇ ಇಲ್ಲ. ಹಲಕೆಲವು ಪತ್ರಿಕೆಗಳಲ್ಲಿ ಲೇಖನಗಳು ಪ್ರಕಟವಾಗುತ್ತವೆಯಾದರೂ ಅವು ಒಂದೆಡೆ ಸಂಕಲಿತವಾಗಿರದ್ದರಿಂದ ಜನತೆಗೆ ಅಷ್ಟು ಪ್ರಯೋಜನವಾಗುವದಿಲ್ಲ. ಈ ಕೊರತೆಯನ್ನು ಕಳೆಯುವದರ ಸಲುವಾಗಿ ಈ ಪುಸ್ತಕ ಬರೆದದ್ದಾಗಿದೆ.

ಈ ಪುಸ್ತಕವನ್ನು ಬರೆಯುವಾಗ್ಗೆ ಆಂಗ್ಲ ಭಾಷೆಯಲ್ಲಿದ್ದ ಅನೇಕ ಗ್ರಂಥಗಳ ಸಹಾಯವನ್ನು ವಿಪುಲವಾಗಿ ಪಡೆದುಕೊಂಡಿದೆ. ಬ್ರಿಟನ್ ಹೋಮ ಆಫೀಸದಿಂದ ಪ್ರಕಟವಾದ ಕೆಲವು ಪುಸ್ತಕಗಳು, ಸಂಯುಕ್ತ ಪ್ರಾಂತದ ಸರಕಾರೀ ಪ್ರಕಟಣೆಗಳು, ಸಹಾಯಕಾರಿಯಾಗಿವೆ.

ಜನತೆಯಲ್ಲಿ ವಿಪುಲವಾಗಿ ಪ್ರಸಾರವಾಗಬೇಕೆಂಬ ಹೇತುವಿನಿಂದ ಪುಸ್ತಕದ ಬೆಲೆಯನ್ನು ಕಡಿಮೆ ಇಡಲಾಗಿದೆ. ಕನ್ನಡಿಗರೆಲ್ಲರೂ ಇದರ ಲಾಭವನ್ನು ಪಡೆಯುವರೆಂದು ನಂಬಿದ್ದೇನೆ.

ಈ ಪುಸ್ತಕವನ್ನು ಪ್ರಕಟಿಸುವದಕ್ಕೆ ಅನೇಕಬಗೆಯಿಂದ ನೆರವಾದ ಮಿತ್ರ ವಸಂತ ಕಾನಿಟಕರರಿಗೆ ನಾನು ಚಿರಋಣಿ.

ಅತ್ಯಲ್ಪ ಸಮಯದಲ್ಲಿ ಅಚ್ಚುಕಟ್ಟಾಗಿ ಮುದ್ರಣ ಮಾಡಿಕೊಟ್ಟ ಶ್ರೀ. ಭಾಲಚಂದ್ರ ಘಾಣೇಕರರಿಗೆ ನನ್ನ ಅಭಿನಂದನೆಗಳು.

ಎಪ್ರಿಲ ೨೩, ೧೯೪೨
ಕಾಲೇಜ ಹಾಸ್ಟೆಲ ಧಾರವಾಡ

ಟಿ. ಆರ್. ಭಾಗವತ

ಪರಿವಿಡಿ

ವಿಮಾನದಾಳಿ ಸಂರಕ್ಷಣೆ

೧. ಎ. ಆರ್. ಪಿ.

ಎ. ಆರ್. ಪಿ. ಅಂದರೇನು ?

ಎ. ಆರ್. ಪಿ. ಎಂದರೆ ಏರ ರೇಡ ಪ್ರಿಕೋಶನ್ ಇಲ್ಲವೆ ಆಕಾಶ ದಾಳಿಯಾದಾಗ್ಗೆ ಎಚ್ಚರಿಕೆ ತೆಗೆದುಕೊಳ್ಳುವದು ಎಂಬರ್ಥ.

ಆಕಾಶದಾಳಿಯು ನವಕಾಲದ ಯುದ್ಧದ ಒಂದು ಮಾದರಿ. ಅದರಲ್ಲಿ ನಾಗರೀಕರ ಮೇಲಾಗುವ ದಾಳಿಯು,--ಈ ಯುದ್ಧದಲ್ಲಿ ಮೂರ್ತಿಮಂತವಾಗಿ ನೃತ್ಯಿಸುವ ಕ್ರೌರ್ಯದೇವತೆಯ ನೃತ್ಯದ ಒಂದು ದೃಶ್ಯ. ದಯಾಮಾಯೆಗಳಿಗೆ ಈ ಯುದ್ಧದಲ್ಲಿ ಎಡೆಯಿಲ್ಲ. ಸಣ್ಣವರು, ದೊಡ್ಡವರು, ಹೆಂಗಸರು, ಮುದುಕರು ಎಂಬ ಭೇದವಿಲ್ಲ. ರಣರಂಗದಲ್ಲಿ ಬಾಂಬು ಮಳೆಗರೆದಷ್ಟೇ ಪಟ್ಟಣಗಳ ಮೇಲೂ ಹಳ್ಳಿಗಳ ಮೇಲೂ ಸುರಿಸಲಾಗುವದು.

ಆದರೆ ರಣರಂಗದಲ್ಲಿಯ ಸೈನಿಕರು ವೈರಿಗಳನ್ನು ಎದುರಿಸಿ ಹೋರಾಡಬಲ್ಲರು. ಆದರೆ ದೇಶದಲ್ಲಿ ಶಾಂತರೀತಿಯಿಂದ ಎದುರಿಸುವರಿಂದ ಅದು ಸಾಧ್ಯವಿಲ್ಲ ಈ ರೀತಿ ವೈರಿದಾಳಿಯನ್ನು ಎದುರಿಸಲು ಅವರಿಗೆ ಶಿಕ್ಷಣ ಕೊಡುವದು ಅತ್ಯವಶ್ಯ. ಈ ರೀತಿ ಶಿಕ್ಷಣ ಕೊಡುವದಕ್ಕೆ ಎ. ಆರ್. ಪಿ. ಎಂಬ ಹೆಸರು.

ವೈರಿವಿಮಾನಗಳು ಬಂದಾಗ ಏನು ಮಾಡಬೇಕು? ಅವುಗಳನ್ನು ಯಾವರೀತಿಯಿಂದ ಎದುರಿಸಬೇಕು? ಬಾಂಬುದಾಳಿಯಿಂದ ರಕ್ಷಿಸಿಕೊಳ್ಳುವದೆಂತು? ಬೆಂಕಿ ಬಿದ್ದಾಗ ಏನು ಮಾಡಬೇಕು? ವಿಷವಾಯು ಪ್ರಯೋಗವಾದಲ್ಲಿ ಯಾವ ರೀತಿ ನಡೆಯಬೇಕು? ಇವೆಲ್ಲವುಗಳನ್ನು ಜನತೆಗೆ ಸರಿಯಾಗಿ ತಿಳಿಸಿ ವೈರಿದಾಳಿಯನ್ನು ಯಶಸ್ವಿಯಾಗಿ ಎದುರಿಸುವದರಲ್ಲಿ ಜನರನ್ನು ತರಬೇತು ಮಾಡುವದೇ ಎ. ಆರ್. ಪಿ. ಸಂಘದವರ ಉದ್ದೇಶ.

ನಿಮ್ಮ ಪ್ರಾಣ, ನಿಮ್ಮ ವಿತ್ತ, ನಿಮ್ಮ ಮನೆ, ನಿಮ್ಮ ದನಕರುಗಳು ಇವುಗಳನ್ನೆಲ್ಲ ಬಾಂಬುದಾಳಿಯಿಂದ ರಕ್ಷಿಸಿಕೊಳ್ಳುವ ರೀತಿಯನ್ನು ಹೇಳಿಕೊಡುವವರು ಎ. ಆರ್. ಪಿ. ಸಂಘದವರು.

ಬಾಂಬುದಾಳಿಯಿಂದ ಒಂದು ವೇಳೆ ನಿಮಗೆ ಅಪಾಯ ಸಂಭವಿಸಿದಲ್ಲಿ ನಿಮ್ಮ ಸಹಾಯಕ್ಕಾಗಿ ಧಾವಿಸುವವರು ಎ. ಆರ್. ಪಿ. ಸಂಘದವರು.

ಒಟ್ಟಿನಲ್ಲಿ ಆಕಾಶದಾಳಿಯ ಕಾಲದಲ್ಲಿ ನಿಮಗೆ ಆಪ್ತಾಲೋಚನೆಯನ್ನೀಯುವವರು, ನಿಮ್ಮನ್ನು ರಕ್ಷಿಸುವವರು, ನಿಮಗೆ ಸಹಾಯ ಮಾಡುವವರು, ನಿಮ್ಮ ಉಪಚಾರವನ್ನು ಮಾಡುವವರು ಎ. ಆರ್. ಪಿ. ಸಂಘದವರು.

ಎ. ಆರ್. ಪಿ. ಯ ಆವಶ್ಯಕತೆ.

ಯುದ್ಧವು ಮನೆಯ ಬಾಗಿಲಿಗೆ ಬಂದಾಗಲೂ—ನಮ್ಮೀ ಪವಿತ್ರ ಭಾರತ ಭೂಮಿಯಲ್ಲಿಯೇ ಕೊಕೊನಾಡ, ವಿಝಗಪಟ್ಟಣ, ಕೋಲಂಬೋ ಮುಂತಾದೆಡೆಗಳಲ್ಲಿ ಪೌರರ ರಕ್ತವು ಭೂಮಿಯಲ್ಲಿ ಇಂಗಿದಾಗಲೂ ಕೂಡ ನಮ್ಮ ಜನರು ಯುದ್ಧದ ಬಗ್ಗೆ, ತಮ್ಮ ಮೇಲಾಗುವ ದಾಳಿಯ ಬಗ್ಗೆ ಜಾಗ್ರತೆ ವಹಿಸದಿರುವದು ತೀರ ವಿಷಾದಕರವಾದ ಸಂಗತಿ.

ನಮ್ಮಲ್ಲಿ ಅನೇಕ ಜನರ ಕಡೆ ನೋಡಿ. ಅವರು 'ಯುದ್ಧವು ಮತ್ತೊಂದು ಗೃಹದಲ್ಲೋ ಇಲ್ಲವೇ ಖಂಡದಲ್ಲೋ ನಡೆಯುತ್ತಿದೆ. ನಮಗೂ ಅದಕ್ಕೂ ಸಂಬಂಧವೇ ಇಲ್ಲ' ಎಂದು ನಿರ್ಲಿಪ್ತರಾಗಿ ಸಿನೇಮಾ ನೋಡುತ್ತಿರುವವರಂತೆ ಈ ಯುದ್ಧವನ್ನು ನೋಡುತ್ತಿದ್ದಾರೆಯೇ ಹೊರತು ನಾಳೆಗೇನೇ ಯುದ್ಧ ನಮ್ಮೂರಿಗೆ ಬರಬಹುದು—ರಾತ್ರಿ ನಾವು ಸುಖದಿಂದ ಮಲಗಿರುವಾಗಲೇ ನಮ್ಮ ಮೇಲೆ ವೈರಿಬಾಂಬುಗಳು ಬೀಳಬಹುದು ಎಂಬ ಭಾವನೆಯು ಲವಲೇಶವಾದರೂ ಅವರಲ್ಲಿ ಇರುವದಿಲ್ಲ. ಇದಕ್ಕೆ ರಾಜಕೀಯ ಕಾರಣಗಳಿಗಿಂತಲೂ ನಮ್ಮ ಜನರ ನಿರ್ಲಕ್ಷ್ಯತೆಯೇ ಹೆಚ್ಚು ಕಾರಣವೆಂದು ಹೇಳಬೇಕು. ರಾಜಕೀಯ ಕಾರಣಗಳೇನೇ ಇರಲಿ—ನಾವು ನಮ್ಮ ಧನ, ಪ್ರಾಣ, ಮಕ್ಕಳುಮರಿಗಳು, ಮನೆಮಠಗಳನ್ನೆಲ್ಲ ಕಾಪಾಡಿಕೊಳ್ಳಬೇಕಷ್ಟೇ. ಈ ರೀತಿಯ ರಕ್ಷಣೋಪಾಯಗಳನ್ನು ತಿಳಿಸುವದಕ್ಕೆ—ಅದರಲ್ಲಿ ಜನರನ್ನು ತರಬೇತು ಮಾಡುವದಕ್ಕೆ ಎ. ಆರ್. ಪಿ. ಸಂಘವು ಅತ್ಯಗತ್ಯ.

"ಇಷ್ಟು ಅವಸರವೇಕೆ ? ಯುದ್ಧವು ಇಲ್ಲಿಗೇನೇ ಬಂದಾಗ ನೋಡಿಕೊಳ್ಳುವ" ಎನ್ನುವ ಜನರೂ ಅದೆಷ್ಟೋ ನಮ್ಮಲ್ಲಿ ಇದ್ದಾರೆ. ಜಪಾನಿಗಳಿನ್ನೂ ಭಾರತದ ಕಡೆಗೆ ಹೊರಟಂತಿಲ್ಲ : ಒಂದು ವೇಳೆ ಹೊರಟಿದ್ದರೂ ದಾಳಿ ಪೂರ್ವ ತೀರದ ಮೇಲಾಗಬೇಕೇ ಹೊರತು ಆದರೆ ಪಶ್ಚಿಮ ತೀರಕ್ಕೆ ಬರಲು ಇನ್ನೂ ತಡಬೇಕು. ಒಂದು ವೇಳೆ ಅವರು ಬಂದರೂ ಮಿಲಿಟರಿ ಸ್ಥಳಗಳ ಮೇಲೆ ದಾಳಿ ಮಾಡುವರೇ ಹೊರತು ನಿರಪರಾಧಿ ನಾಗರೀಕರನ್ನು ಕೊಂದು ಅವರಿಗಾಗಬೇಕಾದುದೇನು ?" ಎಂಬುದೇ ಅವರ ವಾದ. ಸರಿಯಾಗಿ ವಿಚಾರಿಸಿದರೆ ಈ ವಾದದಲ್ಲಿ ಎನೂ ಹುರುಳಿಲ್ಲವೆಂದು ಕಂಡುಬರುವದು.

(೧) ಅಂತರ್‌ರಾಷ್ಟ್ರೀಯ ಪರಿಸ್ಥಿತಿಯು ದಿನದಿನಕ್ಕೆ ಬದಲಾಗುತ್ತಿದೆ. ಮೂರೇ ತಿಂಗಳ ಹಿಂದೆ ಜಪಾನಿಗಳು ಇನ್ನೂ ಸಯಾಮದ ಗಡಿಯಲ್ಲಿಯೇ ಇದ್ದರು. ಆದರೆ ಅವರೀಗ ಮಲಯ, ಸಿಂಗಾ

ಪುರ, ಬ್ರಹ್ಮದೇಶಗಳನ್ನೆಲ್ಲ ಆಕ್ರಮಿಸಿಬಿಟ್ಟಿದ್ದಾರೆ. ಇನ್ನು ಮೂರು ತಿಂಗಳಲ್ಲಿ ಏನಾಗುವದೋ ಯಾರು ಬಲ್ಲರು. ಹೀಗೆ ಕ್ಷಣಕ್ಷಣಕ್ಕೆ ಬದಲಾಗುವ ಯುದ್ಧಗತಿಯನ್ನು ಎದುರಿಸುವದರ ಸಲುವಾಗಿ ನಾವು ಈಗಿನಿಂದಲೇ ತರಬೇತಾಗಬೇಕು.

(೨) ಇತ್ತೀಚಿಗೆ ವಿಮಾನಗಳ ಓಟದ ಪರಿಮಿತಿ ಬೆಳೆಯುತ್ತಿದೆ. ಅಮೇರಿಕನ್ "ಪ್ಲಾಯಿಂಗ ಫೋರ್ಟ್ರೆಸ್" ಎಂಬ ವಿಮಾನವು ಒಂದೇ ಬಾರಿಗೆ ೪೦೦೦ ಮೈಲು ಹಾರಬಲ್ಲದು. ಅಮೆರಿಕನ್‌ರೇ ತಯಾರಿಸಿದ ಮತ್ತೊಂದು ವಿಮಾನವು ೭೫೦೦ ಮೈಲು ಎಲ್ಲೂ ನಿಲ್ಲದೆ ಹಾರಬಹುದಂತೆ. ನಮ್ಮ ದುರ್ದೈವದಿಂದ ವೈರಿಗಳೂ ಇಂತಹ ವಿಮಾನಗಳನ್ನು ನಿರ್ಮಿಸಿದರೆ—ಮಲಯದಿಂದ ಏಕೆ – ಜಪಾನದಿಂದಲೇ ಅವರು ನಮ್ಮ ಭಾರತದ ಮೇಲೆ ವಿಮಾನದಾಳಿ ಮಾಡಬಲ್ಲರು.

ಇದಲ್ಲದೆ ಹತ್ತಿರದಲ್ಲಿ ವೈರಿಗಳ ವೈಮಾನಿಕ ಕೇಂದ್ರಗಳಿಲ್ಲದಿದ್ದರೂ, ವಿಮಾನವಾಹಕಗಳ ಮೂಲಕ ಅವರು ನಮ್ಮ ತೀರದ ಮೇಲೆ ಬಾಂಬುದಾಳಿ ಮಾಡಬಹುದು. ವಿಮಾನವಾಹಕಗಳೆಂದರೆ ವಿಮಾನಗಳನ್ನು ಹೊತ್ತುಕೊಂಡು ತಿರುಗುವ ಹಡಗುಗಳು. ಇಂತಹ ಹಡಗೊಂದು ನಮ್ಮ ಕಾವಲು ಹಡಗುಗಳ ಕಣ್ಣುತಪ್ಪಿಸಿ ತೀರದ ಸಮೀಪಕ್ಕೆ ಬಂದರೆ ಅದರಲ್ಲಿಯ ವಿಮಾನಗಳು ನಮ್ಮ ತೀರದ ಪಟ್ಟಣಗಳ ಮೇಲೆ ನಿರಾತಂಕವಾಗಿ ದಾಳಿ ಮಾಡಬಲ್ಲವು. ಕೊಕೊನಾಡ, ಸಿಲೋನಗಳ ಮೇಲೆ ಈ ರೀತಿಯ ದಾಳಿಯೇ ಆಯಿತು.

ಈಗ, ಒಂದು ವೈರಿ ವಿಮಾನವಾಹಕ ಹಡಗು ಹೇಗೋ ನುಸುಳಿಕೊಂಡು ಪಶ್ಚಿಮ ತೀರಕ್ಕೆ—ಮುಂಬೈ, ಗೋವೆಗಳ ಕಡೆಗೆ ಬಂದರೆ ಕರ್ನಾಟಕದಲ್ಲಿ ವಿಮಾನ ಹಲ್ಲೆಯಾಗುವದು ಅಶಕ್ಯವೇ ? ಹೇಳಿ.

(೩) ನಿರರ್ಥಕವಾಗಿ ಪೌರರ ಮೇಲೆ ದಾಳಿಮಾಡಲೇಕೆ ಎಂದು ಹೇಳುವವರು ಈಗ ಜಪಾನಿಗಳು ಚೀನಾದಲ್ಲಿ ಇಲ್ಲವೆ ಜರ್ಮನರು ರಶಿ

ಯಾ ಇಂಗ್ಲಂಡುಗಳಲ್ಲಿ ನಡಸಿರುವ ಅನಾಹುತಗಳನ್ನು ನೋಡಬೇಕು. ಮಿಲಿಟರಿ ಸ್ಥಳಗಳ ಮೇಲೆ ಹಲ್ಲೆ ಮಾಡುವದಂತೂ ಸರಿಯೇ. ಆದರೆ ನಾಗರೀಕರ ಮೇಲೆ ಹಲ್ಲೆ ಮಾಡುವದರಲ್ಲೂ ಉದ್ದೇಶವಿದೆ. ಆ ಉದ್ದೇಶವೆಂದರೆ ಜನರಲ್ಲಿ ಗಾಬರಿಯನ್ನುಂಟುಮಾಡುವದು. ವಿಮಾನ ದಾಳಿಯನ್ನು ಅರಿಯದ ಒಂದು ಪಟ್ಟಣದ ಮೇಲೆ ದಾಳಿಯಾಯಿತೆಂದು ಇಟ್ಟುಕೊಳ್ಳಿ. ಆದರ ಪರಿಣಾಮವೇನಾಗುವದು ? ಜನರು ಹುಚ್ಚರಂತೆ ಮನೆ ಮಠ ಬಿಟ್ಟು ಓಡುವರು. ಸಾಗು ಮಾಡಿದ ಹೊಲಗಳು ತೋಟಗಳನ್ನು ಕಡೆಗಾಣಿಸಿ ಓಡುವರು. ಅಂಗಡಿಗಳು ಬಂದಾಗುವವು. ವ್ಯಾಪಾರ ಉದ್ಯೋಗಗಳು ಕಟ್ಟಾಗುವವು. ಸ್ವಲ್ಪದರಲ್ಲಿ ಪಟ್ಟಣವು ಸ್ಮಶಾನದಂತಾಗುವದು. ಓಡಿಹೋಗವ ಜನಗಳು ದಾರಿಯುದ್ದಕ್ಕೂ ಭೀತಿಯನ್ನು ಹರವುತ್ತ ಹೋಗುವರು. ಇದರಿಂದ ದೇಶದ ತುಂಬೆಲ್ಲ ಭಯ ಹರಡುವದು. ಎತ್ತ ನೋಡಿದತ್ತ ಅರಾಜಕತೆಯುಂಟಾಗುವದು. ಇಂತಹ ಹೊತ್ತಿನಲ್ಲಿ ಜನರನ್ನು ತಡೆಯುವದು, ಶಾಂತತೆಯನ್ನು ಕಾಯುವದು ಸರಕಾರಕ್ಕೂ ಅಸಾಧ್ಯವಾಗುವದು. ವೈರಿಗೆ ಬೇಕಾದದ್ದೂ ಇಷ್ಟೇ. ದೇಶದಲ್ಲೆಲ್ಲ ಗೊಂದಲವೆದ್ದರೆ ಆ ದೇಶವು ಯುದ್ಧವನ್ನು ಮುಂದುವರಿಸುವದು ಹೇಗೆ ತಾನೆ ಸಾಧ್ಯವಾದೀತು ?

ಫ್ರಾನ್ಸ ಬೆಲ್ಜಮುಗಳ ಕತೆಯನ್ನು ನೀವು ಕೇಳಿರಬಹುದು. ನಾಗರೀಕರ ಮೇಲೆ ದಾಳಿಯಾದದ್ದು ಅದೇ ಮೊದಲನೇ ಸಲ. ಜನಸಮೂಹವೆಲ್ಲ ಹೆದರಿ ಎದ್ದುಬಿಟ್ಟಿತು. ಎತ್ತ ನೋಡಿದತ್ತ ಅವ್ಯವಸ್ಥೆಯೇ. ಎಲ್ಲರೂ ಕಣ್ಣುಮುಚ್ಚಿ ಓಡುವವರೇ. ಇಡೀ ರಸ್ತೆಯೆಲ್ಲ ಓಡುವ ಜನರಿಂದ ತುಂಬಿದ್ದರಿಂದ ಮಿಲಿಟರಿ ಸನ್ನಾಹಗಳು ಓಡಾಡುವದಕ್ಕೂ ತಡೆಯುಂಟಾಯಿತು. ಸೈನ್ಯವನ್ನು ಸಾಗಿಸುವದಕ್ಕೂ ಸ್ಥಳವಿರಲಿಲ್ಲ. ಜನರ ಹಿಂದಿನಿಂದಲೇ ಜರ್ಮನರು ನುಗ್ಗಿದರು. ಅಸ್ತವ್ಯಸ್ತವಾಗಿ ಓಡುತ್ತಿರುವ ಜನಜಂಗುಳಿಯೇ ವೈರಿಗಳಿಗೆ ಢಾಲಿನಂತೆ ಸಹಾಯವಾಯಿತು. ಫ್ರಾನ್ಸ ಬೆಲ್ಜಮ ಸೈನಿಕರಿಗೆ ಅವರ ಜನರೇ ಮುಳುವಾದರು. ಬೇಕಾದಷ್ಟು ಮಿಲಿಟರಿ ಸನ್ನಾಹವಿದ್ದರೂ ಜನತೆ ಹೆದ

ರಿ ಹುಚ್ಚೆದ್ದು ಬಿಟ್ಟರೆ ಏನು ಮಾಡುವದಕ್ಕೂ ಸಾಧ್ಯವಿಲ್ಲ.

ಈ ರೀತಿ ಜನತೆಯಲ್ಲಿ ಗಾಬರಿಯನ್ನೆಬ್ಬಿಸುವದೇ ವೈರಿಯ ಉದ್ದೇಶ. ಆದರಿಂದಲೇ ಅವನು ನಾಗರೀಕರ ಮೇಲೆ ದಾಳಿಮಾಡುವನು. ಮಿಲಿಟರಿ ಸ್ಥಳಗಳ ಮೇಲೆ ದಾಳಿಮಾಡುವದರಿಂದ ಆಗುವ ಪ್ರತ್ಯಕ್ಷ ಲಾಭಕ್ಕಿಂತಲೂ ನಾಗರೀಕರ ಮೇಲೆ ದಾಳಿ ಮಾಡುವದರಿಂದಾಗುವ ಅಪ್ರತ್ಯಕ್ಷ ಲಾಭವೇ ಹೆಚ್ಚಿನದೆಂದು ಮಿಲಿಟರಿ ತಜ್ಞರು ಹೇಳುತ್ತಾರೆ.

ಕಳೆದ ವರುಷ ಲಂಡನದ ಮೇಲೆ ಭಯಂಕರ ಹಲ್ಲೆಯಾಯಿತಲ್ಲ. ಮಿಲಿಟರಿ ಕೇಂದ್ರಗಳನ್ನು, ಕಾರಖಾನೆಗಳನ್ನು, ನಾಶಮಾಡಬೇಕೆಂದಷ್ಟೇ ವೈರಿಯ ಉದ್ದೇಶವಿರಲಿಲ್ಲ. ಇಷ್ಟೇ ಅಲ್ಲ. ಇವುಗಳಿಗಾದ ಹಾನಿಯೂ ಅತ್ಯಲ್ಪ. ಆದರೆ ಜನರ ಮೇಲೆ ದಾಳಿಮಾಡಿ ಅವರ ನೈತಿಕ ಬಲ(Morale)ವನ್ನು ಕುಗ್ಗಿಸುವದೇ ವೈರಿಯ ಉದ್ದೇಶವಾಗಿದ್ದಿತು. ಆದರೆ ಲಂಡನದ ಜನರು ಧೃತಿಗೆಡಲಿಲ್ಲ. ಗಾಬರಿ ಪಡಲೂ ಇಲ್ಲ. ವೈರಿವಿಮಾನಗಳು ಬಂದೊಡನೆಯೇ ಶಾಂತರೀತಿಯಿಂದ ಆಶ್ರಯಗಳಲ್ಲಿ ಸೇರಿ ಅವು ಹೋದೊಡನೆಯೇ ಏನೂ ಆಗದಿದ್ದವರಂತೆ ಹೊರಗೆ ಬಂದು ಬಿಡುತ್ತಿದ್ದರು. ಆದರಿಂದಲೇ ವೈರಿಯ ಉದ್ದೇಶವು ನೆರವೇರಲಿಲ್ಲ.

ನಾವೂ ವೈರಿಯ ಉದ್ದೇಶವನ್ನು ಅರಿತುಕೊಂಡು ಜನರು ಧೃತಿಗೆಡದಂತೆ, ಗಾಬರಿಗೆಡದಂತೆ—ದೇಶದಲ್ಲಿ ಅರಾಜಕತೆಯುಂಟಾಗದಂತೆ ನೋಡಿಕೊಂಡರೆ ವೈರಿಯ ಮೂಗಿಗೆ ತುಪ್ಪವನ್ನು ಹಚ್ಚಿದಂತಾಗುವದು.

ಆದರಿಂದ ನಾಗರೀಕರ ಮೇಲೆ ದಾಳಿಯಾಗುವದಿಲ್ಲವೆಂದು ಭಾವಿಸುವದು ಶುದ್ಧ ತಪ್ಪು. ಇಂತಹ ದಾಳಿಯ ಉದ್ದೇಶಗಳನ್ನು ಜನರಿಗೆ

ತಿಳಿಸಿ, ದಾಳಿಯಾದಾಗ್ಗೆ ಅವರು ಯಾವರೀತಿಯಿಂದ ಆಚರಿಸಬೇಕೆಂದು ತಿಳಿಸುವದಕ್ಕೆ ಎ. ಆರ್. ಪಿ. ಯು ಅವಶ್ಯ.

ದಾಳಿಯನ್ನು ಎದುರಿಸಲು ತಕ್ಕಂತೆ ಜನರನ್ನು ತಿದ್ದುವದು ಅತಿ ಪ್ರಯಾಸಕರವಾದ ಕೆಲಸ. ಪ್ರತ್ಯಕ್ಷ ಅನುಭವವಾದ ಹೊರತು ಜನರು ಬುದ್ಧಿ ಕಲಿಯುವಂತಿಲ್ಲ! ಹಲ್ಲೆಯಿಂದ ಸಾವಿರಾರು ಜನರು ಸತ್ತ ಮೇಲೆಯೇ ರಂಗೂನದ ಜನರಿಗೆ ಬುದ್ಧಿ ಬಂದದ್ದು. ವಿಮಾನದಾಳಿಯಲ್ಲಿ ಧೃತಿಯಿಂದ ನಡೆಯುವದನ್ನು ಕಲಿಯುವದಕ್ಕೆ ಬ್ರಿಟಿಷರಿಗೆ ಎರಡು ವರುಷಗಳಿಗೆ ಮೇಲ್ಪಟ್ಟು ವೇಳೆ ತಗಲಿತು. ಆದರೂ ಅವರು ಪ್ರವೀಣರಾಗಿದ್ದಾರೆಂದು ಹೇಳಲು ಸಾಧ್ಯವಿಲ್ಲ. ಒಂದೇ ಸವನೆ ಐದು ವರುಷ ಯುದ್ಧ ದಾಳಿಗಳು ನಡೆಯುತ್ತಿದ್ದದ್ದರಿಂದಲೇ ಚೈನಾದ ಜನರು ಇಂತಹ ದಾಳಿಗಳನ್ನು ಎದುರಿಸುವದರಲ್ಲಿ ಪ್ರವೀಣರಾದರು.

ಆದರಿಂದ ನಮ್ಮ ಜನರಿಗೂ ಪಾಠ ಕಲಿಸುವದಕ್ಕೆ ಬಹಳ ಸಮಯ ಬೇಕು. ನಮ್ಮಲ್ಲಿ ಅನೇಕರು ವಿಮಾನಗಳನ್ನು ನೋಡಿಲ್ಲ. ಬಾಂಬನ್ನು ಕಂಡಿಲ್ಲ. ಸಿನೇಮಾಗಳಲ್ಲಲ್ಲದೆ ವಿಮಾನದಾಳಿಗಳನ್ನು ಕಂಡವರಿಲ್ಲ. ಇಂಥವರಿಗೆ ವಿಮಾನದಾಳಿಯ ಪಾಠಗಳನ್ನು ಕಲಿಸುವದು ಆದೆಷ್ಟು ಪ್ರಯಾಸಕರವಾದ ಕೆಲಸ ! ಇದಲ್ಲದೆ ಅಂತರ್ರಾಷ್ಟ್ರೀಯ ಪರಿಸ್ಥಿತಿಯು ಅತಿವೇಗದಿಂದ ಬದಲಾಗುತ್ತಿರುವದರಿಂದ ಯುದ್ಧವು ನಾಳೆಯೇ ನಮ್ಮ ಪಟ್ಟಣಕ್ಕೆ ಬರಬಹುದು. ಆದರಿಂದ ನಮಗಿದ್ದ ಅತ್ಯಲ್ಪ ವೇಳೆಯಲ್ಲಿ ಸಾಧ್ಯವಿದ್ದಷ್ಟು ಹೆಚ್ಚು ಕಲಿಯುವದು ನಮ್ಮಲ್ಲಿ ಪ್ರತಿಯೊಬ್ಬರ ಆದ್ಯ ಕರ್ತವ್ಯ. ಆದುದರಿಂದಲೇ ಎ. ಆರ್. ಪಿ. ಸಂಘಗಳನ್ನು ಸ್ಥಾಪಿಸಿರುವದು. ಈ ಸಂಘಗಳ ಮಹತ್ವವನ್ನು ಅರಿತುಕೊಂಡು ಪ್ರತಿಯೊಬ್ಬ ನಾಗರೀಕನೂ ಇವುಗಳಿಗೆ ಸಹಾಯ ಮಾಡಬೇಕು. ಮತ್ತು ಇವುಗಳೊಂದಿಗೆ ಸಹಕರಿಸಬೇಕು.

---

೨. ಹಲ್ಲೆಯ ಕ್ರಮ.

ಸಮುದ್ರ ತೀರದ ಪಟ್ಟಣಗಳ ಮೇಲೆ ಯುದ್ಧ ಹಡಗುಗಳ ಮೂಲಕ ದಾಳಿಯಾಗುವ ಸಂಭವ ಹೆಚ್ಚು. ಕಳೆದ ಯುದ್ಧದಲ್ಲಿ ಮದ್ರಾಸದ ಮೇಲೆ 'ಎಮ್ಡನ್' ದ ದಾಳಿಯಾಗಲಿಲ್ಲವೇ ? ಹಾಗೆ ಈಗಿನ ಯುದ್ಧ ಹಡಗುಗಳ ಗುಂಡುಗಳು ೧೫—೨೦ ಮೈಲು ದೂರ ಹೋಗಬಲ್ಲವು. ಆದರಿಂದ ಹಡಗು ದಂಡೆಯಿಂದ ೧೫—೨೦ ಮೈಲು ದೂರದಿಂದಲೇ ಬಾಂಬುಗಳನ್ನು ಚಲ್ಲಬಹುದು. ಕಾರವಾರ, ಭಟಕಳ, ಮಂಗಳೂರು ಮೊದಲಾದ ಬಂದರಗಳು ಈ ರೀತಿಯ ಹಲ್ಲೆಗೆ ಗುರಿಯಾಗುವ ಸಂಭವವಿದೆ.

ಎರಡನೇಯದು ಆಕಾಶ ದಾಳಿ. ವೈರಿಕೇಂದ್ರದಿಂದಲೋ, ಇಲ್ಲವೆ ವಿಮಾನ ವಾಹಕ ಹಡಗುಗಳಿಂದಲೋ ವಿಮಾನಗಳು ಬಂದು ಪಟ್ಟಣಗಳ ಮೇಲೆ ಬಾಂಬುಗಳನ್ನು ಚಲ್ಲುವದು. ಆಕಾಶದಾಳಿಯಲ್ಲಿ ನಾಲ್ಕು ತರಹಗಳುಂಟು.

(ಅ) ಬಾಂಬುದಾಳಿ:

(೧) ಸಿಡಿಯುವ ಬಾಂಬುಗಳು(High explosive bombs)

ಉಕ್ಕಿನ ಹೊದಿಕೆಯುಳ್ಳ ಈ ಬಾಂಬುಗಳು ನೋಡಲು ದೊಡ್ಡ ಮೀನದಂತೆ ಕಾಣುವವು. ಒಳಗೆ ಅತಿ ಸ್ಫೋಟದಾಯಕವಾದ ಮದ್ದನ್ನು ತುಂಬಿರುತ್ತಾರೆ. ಈ ಬಾಂಬು ಆಕಾಶದಿಂದ ಕೆಳಗೆ ಬಿದ್ದೊಡನೆಯೇ ಭೂಮಿಯಲ್ಲಿ ಸ್ವಲ್ಪ ತೂರಿಕೊಂಡು ಭಯಂಕರ ಸಪ್ಪಳ

ದೊಂದಿಗೆ ಸ್ಫೋಟವಾಗುತ್ತದೆ. ಈ ಬಾಂಬಿನಿಂದಾಗುವ ಅನಾಹುತ ಮುಂದೆ ಹೇಳಿದೆ.

(೨) ಬೆಂಕಿ ಬಾಂಬುಗಳು(Incendiary bombs)

ಈ ಬಾಂಬುಗಳಲ್ಲಿ ಬಹು ಭಾಗ ಬೆಂಕಿ ಹೊತ್ತುಕೊಳ್ಳಬಲ್ಲ ಮೇಗ್ನೀಷಿಯಮ್, ಫೋಸ್ಫರಸ್, ಪೆಟ್ರೋಲ ಮುಂತಾದ ಪದಾರ್ಥಗಳನ್ನು ಉಪಯೋಗಿಸುತ್ತಾರೆ. ಅಸಂಖ್ಯಾತ ಬೆಂಕಿಗಳನ್ನು ಹಚ್ಚಿ ಪಟ್ಟಣಗಳನ್ನು ನಾಶಮಾಡುವದೇ ಈ ಬಾಂಬುಗಳ ಉದ್ದೇಶ.

(೩) ವಿಷವಾಯು ಬಾಂಬುಗಳು(Gas bombs)

ವಿಷವಾಯುವನ್ನು ಬಾಂಬುಗಳ ಮೂಲಕವಾಗಲೀ ಇಲ್ಲವೇ ತುಂತುರುಗಳ ಮೂಲಕವಾಗಲೀ ಉಪಯೋಗಿಸಬಹುದು. ವಿಷವಾಯುವಿದ್ದ ಬಾಂಬುಗಳ ಹೊದಿಕೆ ತೆಳ್ಳಗಿರುವದು. ಮತ್ತು ಬಾಂಬು ಬಿದ್ದೊಡನೆಯೇ ಸಣ್ಣ ಸ್ಫೋಟವಾಗಿ ಈ ಹೊದಿಕೆ ಒಡೆದು ಹೋಗುವದು. ಮತ್ತು ವಿಷವಾಯುವು ಹೊರಬಿದ್ದು ಹವೆಯಲ್ಲಿ ಹರಡುವದು. ತುಂತುರಗಳ ಮೂಲಕ ವಿಷವನ್ನು ಹರವಬೇಕಾಗಿದ್ದರೆ ವಿಮಾನದಲ್ಲಿ ಒಂದು ಹೌದಿನಲ್ಲಿ ವಿಷದ್ರವವನ್ನು ತುಂಬಿಕೊಂಡು ಒಂದು ಮಳೆಯಾಗುವದಿಲ್ಲವೇ ಹಾಗೆ ಸಿಂಪಡಿಸುವರು.

ಈ ಎಲ್ಲ ತರದ ದಾಳಿಯ ಬಗ್ಗೆ ಮುಂದೆ ಸವಿಸ್ತರವಾಗಿ ಬರೆದಿದೆ.

(ಬ) (೪) ಮಶಿನಗನ್ನುಗಳಿಂದ ಹೊಡೆಯುವದು.

ಒಂದೆರಡು ಬಾಂಬುಗಳು ಪಟ್ಟಣದ ಮೇಲೆ ಬಿದ್ದೊಡನೆಯೇ ಜನರು ಗಾಬರಿಯಾಗಿ ದಿಕ್ಕಾಪಾಲಾಗಿ ಓಡಲಾರಂಭಿಸಿದರೆ ವೈರಿಗಳು ವಿಮಾನದಲ್ಲಿಯ ಮಶಿನ್‌ಗನ್ನುಗಳಿಂದ ಜನರ ಮೇಲೆ ಗುಂಡಿನ ಮಳೆ ಸುರಿಸುವರು. ಈ ರೀತಿ ಗುಂಡುಗಳಿಂದ ಹೊಡೆಯಬೇಕಾದರೆ ವಿಮಾನಗಳು ತೀರ ಕೆಳಗೆ ಬರಬೇಕಾಗುವದು. ಕೆಳಗಿನಿಂದ ವಿಮಾನ ವಿರೋಧಕ ಗುಂಡುಗಳ ವಿರೋಧವಿಲ್ಲದಿದ್ದರೆ ವೈರಿ ವಿಮಾನಗಳು ಈ ರೀತಿ ಕೆಳಗೆ ಇಳಿಯಬಲ್ಲವು. ಜನರು ಓಡಾಡುವದನ್ನು ಬಿಟ್ಟು ಆಶ್ರಯಸ್ಥಾನಗಳಲ್ಲಿ ಅಡಗಿಕೊಂಡರೆ ಈ ರೀತಿ ಮಶಿನ್‌ಗನ್ನುಗಳಿಂದ

ಹೊಡೆಯುವದು ಸಾಧ್ಯವಿಲ್ಲ.

ಇವು ನಾಲ್ಕು ದಾಳಿಯ ರೀತಿ. ಇವುಗಳನ್ನು ವಿಶದೀಕರಿಸಿ ಈ ರೀತಿಯ ದಾಳಿಯಲ್ಲಿ ನಾಗರೀಕರು ಏನು ಮಾಡಬೇಕೆಂಬದನ್ನು ಮುಂದೆ ವಿವರಿಸಲಾಗುವದು.

---

೩ ಎ. ಆರ್. ಪಿ. ಸಂಘಟನೆ
ಮತ್ತು
ನಾಗರೀಕರ ಕರ್ತವ್ಯ

ವಿಮಾನ ದಾಳಿಯಿಂದಾಗುವ ಅನುಹುತಗಳನ್ನು ತಪ್ಪಿಸುವದಕ್ಕೆ ಮತ್ತು ಸರಿಪಡಿಸುವದಕ್ಕೆ ಜನರ ಸಂಘಟನೆ ಮಾಡುವದು ಸಾಧಾರಣ ಕೆಲಸವಲ್ಲ. ವಿಮಾನ ದಾಳಿಯ ಅನಾಹುತವನ್ನು ನೀವು ದಿನಾಲು ವೃತ್ತ ಪತ್ರಿಕೆಗಳಲ್ಲಿ ಓದುತ್ತಿರುವಿರಿ. ಬಾಂಬಿನ ಹೊಡತದಿಂದ ಅಸಂಖ್ಯಾತ ಮನೆಗಳು ಬೀಳಬಹುದು. ಅನೇಕರು ಜೀವಂತ ಬಿದ್ದ ಮನೆಗಳೊಳಗೆ ಸಿಕ್ಕು ಬೀಳಬಹುದು. ಬೆಂಕಿಬಾಂಬುಗಳಿಂದ ನೂರಾರು ಮನೆಗಳಿಗೆ ಬೆಂಕಿಗಳು ಹತ್ತಬಹುದು ಬಾಂಬಿನ ಚೂರುಗಳ ಪೆಟ್ಟಿನಿಂದ ಜನರಿಗೆ ಪ್ರಾಣಾಂತಿಕ ಅಪಾಯಗಳು ಒದಗಬಹುದು. ಬಿದ್ದ ಮನೆಗಳಿಂದ ರಸ್ತೆಗಳು ಕಟ್ಟಾಗಿ ಓಡಾಡಲಿಕ್ಕೆ ಆತಂಕವಾಗಬಹುದು. ಇಲೆಕ್ಟ್ರಿಕ್ ಹೌಸಿಗೆ ಬಾಂಬು ಬಿದ್ದು ದೀಪವಿಲ್ಲದೆ ಜನರು ರಾತ್ರಿ ಕಳೆಯಬೇಕಾಗಬಹುದು. ನೀರಿನ ಪಾಯಿಪುಗಳಿಗೆ ಹೊಡತ ಬಿದ್ದು ಕುಡಿಯುವ ನೀರು ಸಿಕ್ಕದೇ ಹೋಗಬಹುದು. ಇವೆಲ್ಲ ಸಂತಿಗಳನ್ನು ಅನುಲಕ್ಷಿಸಿ ಇವುಗಳನ್ನು ಎದುರಿಸುವದಕ್ಕಾಗಿ ಸಾಧ್ಯವಿದ್ದಷ್ಟು ಮಟ್ಟಿಗೆ ಈ ಕೆಳಗಿನ ವ್ಯವಸ್ಥೆಗನ್ನು ಮಾಡಲಾಗುವದು.

೧ ವಿಭಾಗಗಳು:— ಬಾಂಬುದಾಳಿ ಕಾಲದಲ್ಲಿ ವ್ಯವಸ್ಥೆ ಇಡಲು ಅನುಕೂಲವಾಗಲೆಂದು ಇಡೀ ಪಟ್ಟಣವನ್ನು ಕೆಲವು ವಿಭಾಗಗಳನ್ನಾಗಿ ವಿಂಗಡಿಸಲಾಗುವದು ಜನವಾಸ ಮತ್ತು ಮನೆಗಳ ಸಂಖ್ಯೆ ಇವುಗಳನ್ನು ಲಕ್ಷ್ಯದಲ್ಲಿಟ್ಟುಕೊಂಡೇ ಈ ವಿಭಾಗಗನ್ನು ಮಾಡಲಾಗುವದು.

೨ ವಾರ್ಡನ್: - ಪ್ರತಿಯೊಂದು ವಿಭಾಗಕ್ಕೆ ಒಬ್ಬ ಎ. ಆರ್. ಪಿ ಅಧಿಕಾರಿಯಿರುವನು. ಅವನಿಗೆ ವಾರ್ಡನ್ ಎಂಬ ಹೆಸರು. ವಿಮಾನದಾಳಿ ಕಾಲದಲ್ಲಿ ತನ್ನ ವಿಭಾಗದಲ್ಲಿ ವ್ಯವಸ್ಥೆಯನ್ನು ಕಾಯುವದು ವಾರ್ಡನನ ಕೆಲಸ. ವಿಮಾನ ದಾಳಿಯು ನಡೆದಾಗ್ಗೆ ಜನರು ಅಸ್ತವ್ಯಸ್ತ ರೀತಿಯಿಂದ ನಡೆಯದಂತೆ ಅವನು ಎಚ್ಚರಿಕೆ ತೆಗೆದುಕೊಳ್ಳುವನು. ಅಪರಿಚಿತ ಜನರನ್ನು ಆಶ್ರಯ ಸ್ಥಳಕ್ಕೆ ದಾಟಿಸುವನು. ದೀಪವ್ಯವಸ್ಥೆಯನ್ನು ಕಾಯುವನು ಮೋಟಾರು, ಟಾಂಗಾ ಮುಂತಾದ ವಾಹನಗಳು ರಸ್ತೆಯ ಮೇಲೆ ತ್ಯಜಿಸಲ್ಪಡದಂತೆ ನೋಡಿಕೊಳ್ಳುವನು ವಿಮಾನ ದಾಳಿಯಿಂದ ಮನೆಯಲ್ಲಿ ಯಾರಾದರೂ ಹುಗಿದು ಬಿದ್ದರೆ ಅಗೆಯುವವರಿಗೆ ತತ್‌ಕ್ಷಣ ತಿಳಿಸುವನು ಬೆಂಕಿ ಬಿದ್ದಿದ್ದರೆ, ಬೆಂಕಿ ಆರಿಸುವವರಿಗೆ ಹೇಳಿಕಳಿಸುವನು. ಯಾರಿಗಾದರೂ ಪ್ರಾಣಾಂತಿಕ ಗಾಯಗಳಾಗಿದ್ದರೆ ಆಸ್ಪತ್ರೆಗೆ ತತ್‌ಕ್ಷಣ ಸುದ್ದಿ ತಿಳಿಸುವನು. ಸ್ವಲ್ಪದರಲ್ಲಿ ವಿಮಾನ ದಾಳಿ ಕಾಲದಲ್ಲಿ ಯಾವನೇ ಅನಾಹುತವಾದರೂ ಅದನ್ನು ನಿವಾರಿಸಲು ಅವನು ಪ್ರಯತ್ನ ಮಾಡುವನು. ಉಳಿದ ಸಮಯದಲ್ಲಿ ಜನರಿಗೆ ವಿಮಾನ ದಾಳಿಯ ಬಗ್ಗೆ ಸವಿಸ್ತಾರ ಮಾಹಿತಿ ಕೊಡುವದು ಅವನ ಕೆಲಸ. ಅದರಿಂದ ನಾಗರೀಕನ ಕರ್ತವ್ಯ ಇಷ್ಟು:—

ಅ) ನೀವು ಯಾವ ವಿಭಾಗದಲ್ಲಿರುವಿರೆಂದು ಮೊದಲು ನೋಡಿಕೊಳ್ಳಿರಿ.

ಬ) ಆ ವಿಭಾಗದ ವಾರ್ಡನ್ ಯಾರೆಂದೂ, ಅವನ ಸ್ಥಳ (Warden post)ವಾವುದೆಂದೂ ತಿಳಿದುಕೊಳ್ಳಿ. ವಾರ್ಡನನು

ಇರುವಸ್ಥಳವನ್ನು ನೀವು ಖಂಡಿತ ಅರಿತುಕೊಂಡಿರಬೇಕು. ಅಂದರೆ ಅಪಾಯ ಕಾಲದಲ್ಲಿ ತತ್ಕ್ಷಣ ಅವನನ್ನು ಸಮೀಪಿಸಲು ಅನುಕೂಲವಾಗುವದು.

ಕ) ನಿಮಗೆ ಸಮಯವಿದ್ದಾಗ ವಾರ್ಡನನ್ನು ಭೆಟ್ಟಿಯಾಗಿ ವಿಮಾನದಾಳಿಯ ಬಗ್ಗೆ ಸವಿಸ್ತರ ಸಂಗತಿಯನ್ನು ಅರಿತು ಕೊಳ್ಳಿರಿ ವಾರ್ಡನನು ನಿಮಗೆ ಸಹಾಯ ಮಾಡಲೆಂದೇ ನೇಮಿಸಲ್ಪಟ್ಟಿರುವನು. ಅವನೊಡನೆ ಸಹಕರಿಸುವದು ನಿಮ್ಮ ಕರ್ತವ್ಯ.

ಡ) ವಿಮಾನದಾಳಿಯು ನಡೆದಾಗ್ಗೆ ವಾರ್ಡನನು ತನ್ನ ಸ್ಥಳದಲ್ಲಿಯೇ ಇರುವನು. ವಿಮಾನದಾಳಿಯು ಮುಗಿದ ನಂತರ ಶಾಂತತೆಯಿಂದ ಹೋಗಿ ನಿಮ್ಮಲ್ಲೇನಾದರೂ ಅಪಾಯ ಸಂಭವಿಸಿದ್ದರೆ—ಯಾರಿಗಾದರೂ ಘಾಯಗಳಾಗಿದ್ದರೆ, ಬೆಂಕಿ ಬಿದ್ದಿದ್ದರೆ, ಮನೆ ಬೀಳುವದಕ್ಕಾಗಿದ್ದರೆ— ಅವನಿಗೆ ತಿಳಿಸಿ. ವಿಮಾನ ದಾಳಿ ನಡೆದಾಗಲೇ ಆತುರ ಪಡಬೇಡಿ. ಅದರಿಂದ ನಿಮಗೆ ಖಂಡಿತ ಅಪಾಯವುಂಟು.

ಇ) ವಾರ್ಡನ್‌ನ ಸಹಾಯ ಅತ್ಯಾವಶ್ಯವಿದ್ದರೆ ಮಾತ್ರ ತೆಗದುಕೊಳ್ಳಿ. ಏಕಂದರೆ ನಿಮಗಿಂತಲೂ ಅಪಾಯಕ್ಕೊಳಗಾದವರಿಗೆ ಅವನು ಸಹಾಯ ಮಾಡಬೇಕಾಗಬಹುದು.

ಫ) ಸಾಧ್ಯವಿದ್ದಷ್ಟು ಸುಳ್ಳು ಸುದ್ದಿ ಅಥವಾ ಹಾರಿಕೆ ಸುದ್ದಿಗಳನ್ನು ಹೇಳಬೇಡಿರಿ. ಉದಾಹರಣೆಗಾಗಿ ನಿಮ್ಮಲ್ಲಿ ಒಬ್ಬನು ವಿಮಾನದಾಳಿ ಕಾಲದಲ್ಲಿ ಮತ್ತೊಂದೆಡೆಯಲ್ಲಿದ್ದರೆ ಅವನು ಕಳೆದಿರುವನೆಂದು ವಾರ್ಡನನಿಗೆ ಒಮ್ಮೆಲೇ ತಿಳಿಸಬೇಡಿ. ಏಕಂದರೆ ವಾರ್ಡನನಿಗೆ ಉಳಿದ ಮಹತ್ವದ ಕೆಲಸಗಳು ಇರುತ್ತವೆ. ನೀವು ಸ್ವಲ್ಪ ತಾಳ್ಮೆಯಿಂದಿದ್ದರೆ ನಿಮ್ಮವನು ತಿರುಗಿ ಬರಬಹುದು.

ಗ) ಮುಖ್ಯವಾಗಿ ನಿಮ್ಮಂತೆಯೆ ಉಳಿದವರಿಗೂ ವಾರ್ಡನನ

ಸಹಾಯ ಅತ್ಯವಶ್ಯವೆಂಬುದನ್ನು ಸದಾ ನೆನಪಿನಲ್ಲಿಡಿ.

೩ ವಾರ್ಡನನ ಸಹಾಯಕರು:—

ಪ್ರತಿಯೊಂದು ವಿಭಾಗದ ವಾರ್ಡನನ ಕೈಕೆಳಗೆ ಅವನಿಗೆ ಸಹಾಯಮಾಡಲಿಕ್ಕೆಂದು ಹಲವರು ಕೊಡಲ್ಪಡುವರು. ಪ್ರಸಂಗ ಬಿದ್ದಾಗ್ಗೆ ಇವರ ಮೂಲಕ ವಾರ್ಡನನು ಅವಸರದಿಂದ ಕೆಲಸ ಸಾಗಿಸುವನು ನಾಗರಿಕರಲ್ಲಿ ಸಾಯಕಲ ಸವಾರಿ ಬಲ್ಲವರು ವಾರ್ಡನನ ಮದ್ಪತಿಗೆ ಬಂದಷ್ಟು ಒಳಿತು. ಟೆಲಿಫೋನು ವ್ಯವಸ್ಥೆ ಇಲ್ಲದಿದ್ದರೆ, ಇದ್ದ ವ್ಯವಸ್ಥೆ ಬಾಂಬುದಾಳಿಯಿಂದ ಹಾಳಾದರೆ, ಈ ಸಾಯಕಲ್ಲ ಸವಾರರ ಮೂಲಕ ಆಸ್ಪತ್ರಿ ಮೊಂತಾದ ಕಡೆಗಳಲ್ಲಿ ತೀವ್ರ ಸುದ್ದಿ ಮುಟ್ಟಿಸಲು ವಾರ್ಡನನಿಗೆ ಅನುಕುಲ ವಾಗುವದು.

೪ ಬೆಂಕಿಯನ್ನು ನಂದಿಸುವದು:— ಆಧುನಿಕ ಸಾಮುಗ್ರಿಗಳನ್ನೊಳಗೊಂಡ ಬೆಂಕಿ ನಂದಿಸುವವರ ಅನೇಕ ಗುಂಪುಗಳನ್ನು ಕಟ್ಟಲಾಗುವದು. ವಾರ್ಡನನಿಗೆ ಕರೆಬಂದಕೂಡಲೇ ಇವರು ಬೆಂಕಿ ಬಿದ್ದ ಸ್ಥಳಕ್ಕೆ ಹೊರಡುವರು. ಸಣ್ಣ ಪುಟ್ಟ ಬೆಂಕಿ ಬಿದ್ದರೆ ನಾಗರೀಕರು ಅದನ್ನು ಅವರೇ ಆರಿಸಬೇಕೇ ಹೊರತು ದಳದವರನ್ನು ಕರೆಯಬಾರದು. ಯಾಕಂದರೆ ಉಳಿದೆಡೆ ಅವರ ಸಹಾಯ ಬೇಕಾಗಬಹುದು.

೫ ಪ್ರಥಮ ಚಿಕಿತ್ಸೆ ಕೇಂದ್ರಗಳು:— ಪಟ್ಟಣದಲ್ಲಿಯ ಡಾಕ್ಟರರಿಗೆಲ್ಲ ಪ್ರಥಮ ಚಿಕಿತ್ಸೆಯಲ್ಲಿ ನೆರವಾಗಲು ಕೇಳಿಕೊಳ್ಳಲಾಗುವದು. ಪಟ್ಟಣದಲ್ಲಿ ಅಲ್ಲಲ್ಲಿ ಚಿಕಿತ್ಸಾಕೇಂದ್ರಗಳನ್ನು ಸ್ಥಾಪಿಸಲಾಗುವದು. ಈ ಕೇಂದ್ರಗಳು ಎಲ್ಲೆಲ್ಲಿ ಇರುತ್ತವೆಂದು ಪ್ರತಿಯೊಬ್ಬನು ಮೊದಲೇ ಅರಿತಿರಬೇಕು. ವಾರ್ಡನನಿಗೆ ಸುದ್ದಿ ಕೊಟ್ಟರೆ ಈ ಕೇಂದ್ರದಿಂದ ವಾಹಕಗಳು (ಅಂಬುಲೆನ್ಸ) ಹೊರಟು ಬರುವವು. ನಡೆಯಬರಲು ಸಾಧ್ಯವಿದ್ದವರು ಸ್ವತಃ ಬಂದು ಚಿಕಿತ್ಸೆ ಪಡೆದು ಹೋಗಬೇಕು ವೃಥಾ ಅಂಬುಲನ್ಸ ದಳದವರಿಗೆ ತ್ರಾಸು ಕೊಡಬಾರದು.

೬ ಅಗೆಯುವವರು: ಪಾರು ಮಾಡುವವರು:—

(Rescue Squads)

ಇವರು ತಮ್ಮ ಸಾಮುಗ್ರಿಗಳೊಂದಿಗೆ ವಿಮಾನ ದಾಳಿ ಕಾಲದಲ್ಲಿ ಸಿದ್ಧರಾಗಿರುವರು. ದಾಳಿ ಮುಗಿದ ಕೂಡಲೇ ಮನೆಯಡಿಯಲ್ಲಿ ಯಾರಾದರೂ ಸಿಕ್ಕಿದ್ದರೆ ಅವರನ್ನು ಅಗೆದು ಪಾರುಮಾಡುವದು ಇವರ ಕೆಲಸ.

೭ ಮನೆ ಕೆಡವುವವರು(Demolishing Squads):—
ಭಾಂಬು ದಾಳಿಯಿಂದ ಪೂರ್ಣ ಬೀಳದೆ ಅರ್ಧ ಮಾತ್ರ ಬಿದ್ದ ಮನೆಗಳಿಂದ ಅಕ್ಕಪಕ್ಕದವರಿಗೆ ಅಪಾಯವುಂಟು. ಅದರಿಂದ ಇಂತಹ ಮನೆಗಳನ್ನು ಕೆಡಹುವದು ಇವರ ಕೆಲಸ.

೮ ರಿಲೀಫ ವರ್ಕರ್ಸ (ದುಃಖಪರಿಹಾರ ದಳ):—

ಬಾಂಬು ದಾಳಿಯ ಕಾಲದಲ್ಲಿ ಮನೆಗಳು ಬಿದ್ದು ನಿರಾಶ್ರಿತರಾದವರಿಗೆ ಸಹಾಯ ಮಾಡುವದು ಇವರ ಕೆಲಸ. ಊಟ, ಉಡಿಗೆ, ವಸತಿ ಮುಂತಾದವುಗಳ ಸಹಾಯುವನ್ನು ಇವರು ಮಾಡುವರು.

ಇವೆಲ್ಲ ವಿಮಾನ ದಾಳಿಯಾದ ಮೇಲೆ ಮಾಡುವ ಉಪಶಮನ ಕಾರ್ಯಗಳೆಂದು ಎಲ್ಲರೂ ನೆನಪಿನಲ್ಲಿಡಬೇಕು. ದಾಳಿ ನಡೆದಿರುವಾಗ ಏನನ್ನೂ ಮಾಡಲು ಸಾಧ್ಯವಿಲ್ಲ.

ಇನ್ನೊಂದು ನೆನಪಿನಲ್ಲಿಡಬೇಕಾದ ಸಂಗತಿಯೆಂದರೆ ಮೇಲೆ ಹೇಳಿದ ವ್ಯವಸ್ಥೆಗಳ ಸಹಾಯವನ್ನು ಅತ್ಯವಶ್ಯವಿದ್ದರೆ ಮಾತ್ರ ತೆಗೆದುಕೊಳ್ಳಬೇಕು. ಏಕಂದರೆ ಈ ರೀತಿಯ ವ್ಯವಸ್ಥೆಗಳು ಮರ್ಯಾದಿತ (Limited)ವಾಗಿ ಮಾಡಲ್ಪಡುವವೇ ಹೊರತು ಸಂಪೂರ್ಣ ಅನಿಯಮಿತ ವ್ಯವಸ್ಥೆಯಿಡುವದು ಸುತರಾಂ ಸಾಧ್ಯವಿಲ್ಲ. ಇಡೀ ಪಟ್ಟಣದ ಜನರಿಗೆ ಒಂದಿಲ್ಲೊಂದು ಸಹಾಯವನ್ನು ಕೊಡಲು ಅದೆಷ್ಟೋ ಸಾವಿರ ಜನ ಬೇಕಾಗಬಹುದು. ಆದರೆ ಇಷ್ಟು ಜನ ಶಿಕ್ಷಿತಜನರನ್ನು

ತರುವದು ಸಾಧ್ಯವೇ ?

ಆದರಿಂದ ಅತ್ಯವಶ್ಯವಿದ್ದಲ್ಲಿ ಮಾತ್ರ ವಾರ್ಡನನ ಸಹಾಯವನ್ನೂ, ಉಳಿದ ವ್ಯವಸ್ಥೆಗಳ ಸಹಾಯವನ್ನೂ ಕೇಳಿ. ನಿಮಂತೆಯೇ ಉಳಿದವರೂ, —ನಿಮಗಿಂತಲೂ ಹೆಚ್ಚು ಕಷ್ಟಕ್ಕೊಳಗಾದವರು— ಈ ಸಹಾಯವು ಅತ್ಯಗತ್ಯವಾದ ಸ್ಥಿತಿಯಲ್ಲಿ ಇರಬಹುದೆಂಬ ಸಂಗತಿಯನ್ನು ಸದಾ ನೆನಪಿನಲ್ಲಿಟ್ಟುಕೊಳ್ಳಿ. ಇದರಿಂದಲೇ ನೀವು ಎಷ್ಟೋ ಸಹಾಯ ಮಾಡಿದಂತಾಗುವದು. ಒಬ್ಬ ಡಾಕ್ಟರನ ಸಹಾಯವನ್ನು ಉಳಿಸಿದರೆ ಉಳಿದವರಿಗೆ ಒಬ್ಬ ಹೆಚ್ಚು ಡಾಕ್ಟರನನ್ನು ನೀವು ಕೊಟ್ಟಂತಾಗುವದು.

---

೪ ಎಚ್ಚರಿಕೆ ಕೊಡುವ ಕ್ರಮ.

ಬಾಂಬುಗಳು ಬೀಳುವ ಪೂರ್ವದಲ್ಲಿಯೇ ವೈರಿ ವಿಮಾನಗಳು ಬರಹತ್ತಿರುವ ಸುದ್ದಿ ಜನರಿಗೆ ತಿಳಯಬೇಕಾದುದು ಅವಶ್ಯ ಏಕಂದರೆ ಎಚ್ಚರಿಕೆಯಾದೊಡನೆಯೇ ಶೆಲ್ಲರುಗಳನ್ನು ಸೇರಲು ಮಕ್ಕಳುಮರಿಗಳನ್ನು ಆಶ್ರಯ ಸ್ಥಾನಕ್ಕೆ ಸಾಗಿಸಲು ಕೆಲವು ಸಮಯ ಬೇಕಷ್ಟೇ. ಆದರಿಂದ ಬಾಂಬುಗಳು ಪಟ್ಟಣದ ಮೇಲೆ ಬೀಳುವದಕ್ಕಿಂತ ಕನಿಷ್ಠ ಐದು ಮಿನೀಟುಗಳ ಮೊದಲಾದರೂ ಎಚ್ಚರಿಕೆ ಕೊಡಲ್ಪಡುವದು.

ಯಾವಾಗ ಎಚ್ಚರಿಕೆ ಕೊಡಬೇಕೆಂದು ನಿರ್ಧರಿಸುವದು ಎ. ಆರ್. ಪಿ. ಅಧಿಕಾರಿಗಳ ಕೆಲಸ. ಎಲ್ಲೋ ನೂರು ಮೈಲು ದೂರದಲ್ಲಿ ಒಂದು ವೈರಿವಿಮಾನವು ಕಣ್ಣಿಗೆ ಕಂಡುಬಿಟ್ಟಲ್ಲಿ ಕೂಡಲೇ

ಸುತ್ತಲೂ ಇರುವ ಪಟ್ಟಣಗಳಿಗೆಲ್ಲ ಒಮ್ಮೆಲೇ ಎಚ್ಚರಿಕೆ ಕೊಟ್ಟು ಜನರನ್ನು ಗಾಬರಿಗೊಳಿಸಿ ಪಟ್ಟಣಗಳ ವ್ಯವಹಾರಗಳನ್ನೆಲ್ಲ ಕೆಲವು ವೇಳೆ ಬಂದು ಇಡುವದು ಸೂಕ್ತವಲ್ಲ ತಾನೇ ಅದರಿಂದಲೇ ಒಂದು ಪಟ್ಟಣದ ಕಡೆಗೆಯೇ ವಿಮಾನಗಳು ಬರುತ್ತಿವೆ—ಅದರ ಮೇಲೆ ದಾಳಿ ಮಾಡುವದೇ ಅವುಗಳ ಉದ್ದೇಶ ಎಂದು ಖಾತ್ರಿಯಾದ ಕೂಡಲೇ ಜನರಿಗೆ ಎಚ್ಚರಿಕೆ ಕೊಡಲ್ಪಡುವದು.

ಉದಾಹರಣೆಗಾಗಿ ಕಾರವಾರದ ಕಡೆಯಿಂದ ಒಂದು ವಿಮಾನು ಹೊರಟಿದೆಯೆಂದು ತಿಳಿದುಕೊಳ್ಳಿ. ಅದರ ಮೊದಲನೇ ಗುರಿ ಕಾರವಾರ ಬಂದರ. ಆದರೆ ಅದು ಕಾರವಾರ ದಾಟಿ ಹೊರಟೊಡನೆಯೇ ಅದರ ಗುರಿ ಹುಬ್ಬಳ್ಳಿಯೋ ಧಾರವಾಡವೋ ಇರುವದೆಂದು ಖಾತ್ರಿಯಾಗುವದು. ಏಕಂದರೆ ಈ ದಿಕ್ಕಿನಲ್ಲಿ ಮತ್ತಾವ ದೊಡ್ಡ ಕೇಂದ್ರಗಳು ಇಲ್ಲ. ಹೀಗೆ ಒಂದು ವಿಮಾನು ಹೊರಟಿದೆಯೆಂದು ಅಲ್ಲಿಯ ಅಧಿಕಾರಿಗಳಿಂದ ಹುಬ್ಬಳ್ಳಿ, ಧಾರವಾಡ, ಗದಗು ಮುಂತಾದ ಪಟ್ಟಣಗಳ ಅಧಿಕಾರಿಗಳಿಗೆ ಸುದ್ದಿ ಬರುವದು. ದುರ್ದೈವದಿಂದ ಹುಬ್ಬಳ್ಳಿಗೆ ವಿಮಾನದಿಂದ ಬರಲು ಹೆಚ್ಚು ವೇಳೆ ಬೇಡ. ೨೫೦ ಮೈಲು ವೇಗದಿಂದ ಕ್ರಮಿಸುವ ವಿಮಾನು ಅರ್ಧ ತಾಸಿನಲ್ಲಿಯೇ ಹುಬ್ಬಳ್ಳಿಗೆ ಬರಬಲ್ಲದು. ಅದರಿಂದ ಹುಬ್ಬಳ್ಳಿಯ ಅಧಿಕಾರಿಗಳಿಗೆ ಉಭಯ ಸಂಕಟವಾಗುವದು. ಆದರೆ ಅದು ಅರ್ಧ ರಸ್ತೆ ಕ್ರಮಿಸಿ ಬಂದಾಗಲೂ ಹುಬ್ಬಳ್ಳಿಯ ಕಡೆಗೇ ಬರುತ್ತಿದ್ದರೆ ಹುಬ್ಬಳ್ಳಿಯಲ್ಲಿ ದಾಳಿಯ ಎಚ್ಚರಿಕೆ ಕೊಡಲ್ಪಡುವದು. ಹುಬ್ಬಳ್ಳಿಯಲ್ಲಿ ಎಚ್ಚರಿಕೆ ಕೊಟ್ಟರೆ ಧಾರವಾಡಕ್ಕೂ ಎಚ್ಚರಿಕೆ ಕೊಡಬೇಕು. ಏಕಂದರೆ ಇವೆರಡುಗಳ ಅಂತರ ತೀರ ಕಡಿಮೆ. ಹುಬ್ಬಳ್ಳಿಗೆ ಬಾಂಬು ಹಾಕಲೆಂದು ಬಂದ ವಿಮಾನು ಧಾರವಾಡಕ್ಕೆ ಕೆಲವೇ ನಿಮಿಷಗಳಲ್ಲಿ ಬರಬಹುದು. ಆದರೆ ಗದಗು ಹಾವೇರಿಗಳ ಸ್ಥಿತಿ ಹಾಗಲ್ಲ. ಹುಬ್ಬಳ್ಳಿಯ ಮೇಲೆ ದಾಳಿ ನಡೆದಿರುವ ಸಂಗತಿ ಈ ಪಟ್ಟಣಗಳ ಅಧಿಕಾರಿಗಳಿಗೆ ತಿಳಿಸಿರುತ್ತದೆ ಆದರೆ ಈ ಪಟ್ಟಣಗಳ ಕಡೆಗೆ ವಿಮಾನು ಹೋಗದಿದ್ದರೆ ಅಲ್ಲಿ ದಾಳಿಯ ಎಚ್ಚರಿಕೆ ಕೊಡಲ್ಪಡು

ವದಿಲ್ಲ. ಆದರಿಂದ ದಾಳಿಯ ಎಚ್ಚರಿಕೆ ಕೊಡುವ ಜವಾಬದಾರಿಯು ಎ. ಆರ್. ಪಿ. ಅಧಿಕಾರಿಗಳದು. ವಿಮಾನದಾಳಿಯಾಗುವ ಸುದ್ದಿ ಅವರಿಗೆ ಎಷ್ಟೋ ಮೊದಲೇ ತಿಳಿದಿದ್ದರೂ, ದಾಳಿ ಖಂಡಿತ ಆಗುವ ದೆಂದು ತಿಳಿಯುವವರೆಗೆ ಅವರು ಜನತೆಗೆ ಎಚ್ಚರಿಕೆ ಕೊಡುವದಿಲ್ಲ.

ಎಚ್ಚರಿಕೆ ಕೊಡುವ ಕ್ರಮ.

ಜನತೆಗೆ ಎಚ್ಚರಿಕೆ ಕೊಡುವದಕ್ಕೆಂದು ಫ್ಯಾಕ್ಟರಿಯ ಭುಂಗಾ ಗಳು, ಸರೀನುಗಳು, ವ್ಹಿಸಲ್ಲುಗಳು ಮುಂತಾದ ಸಾಧನಗಳನ್ನು ಉಪಯೋಗಿಸುವದುಂಟು. ಫಾಕ್ಟರಿ ಮತ್ತು ವಿದ್ಯುದ್ದೀಪಗಳು ಇಲ್ಲದ ಸ್ಥಳಗಳಲ್ಲಿ ವ್ಹಿಸಲ್ಲುಗಳ ಹೊರತು ಮತ್ತೊಂದು ಗತಿಯಿಲ್ಲ. ಆದರೆ ಧಾರ ವಾಡ, ಹುಬ್ಬಳ್ಳಿ, ಗದಗು, ಬೆಳಗಾವಿ ಮೊದಲಾದ ಸ್ಥಳಗಳಲ್ಲಿ ಭುಂಗಾಗ ಳನ್ನು ಇಲ್ಲವೆ ಸರೀನುಗಳನ್ನು ಉಪಯೋಗಿಸಬಹುದು. ಒಟ್ಟಿನಲ್ಲಿ ಪಟ್ಟ ಣದ ಪ್ರತಿಯೊಂದು ಮನೆಯಲ್ಲಿ ಕೇಳಿಸಬಲ್ಲ ಸಾಧನಗಳನ್ನೇ ಉಪಯೋ ಗಿಸುವರು ಇಂತಹ ಸಾಧನಗಳು ಇಲ್ಲದ ಸ್ಥಳದಲ್ಲಿ ಎ. ಆರ್. ಪಿ. ವಾರ್ಡನ-ಗಳು ಇಲ್ಲವೇ ಪೋಲಿಸರು ಸಾಯಕಲ್ಲುಗಳ ಮೇಲೆ ತಿರು ಗಾಡುತ್ತ ಜನರಿಗೆ ಎಚ್ಚರಿಕೆ ಕೊಡುವರು. ಅಂತೂ ಯಾವ ಕ್ರಮ ದಲ್ಲಿ ಎಚ್ಚರಿಕೆ ಕೊಡುವದೆಂದು ಜನತೆಗೆ ಮೊದಲೇ ತಿಳಿಸಲಾಗು ವದು.

ಸಿರಿನುಗಳು ಇಲ್ಲವೆ ಭುಂಗಾಗಳ ಮೂಲಕ ಎಚ್ಚರಿಕೆ ಕೊಡುವ ಕ್ರಮ:—

೧ ವೈರಿ ವಿಮಾನಗಳು ಬಂದವು. ಎಚ್ಚರಿಕೆ

ಭುಂಗಾ ಇಲ್ಲವೆ ಸರೀನು ತಾರ ಸ್ವರದಲ್ಲಿ ಏರಿಳಿತಗಳೊಂದಿಗೆ ಕೂಗಲು ಮೊದಲು ಮಾಡುವದು. ಆಳುವಾಗ ಧ್ವನಿಯಾಗುವದಿಲ್ಲವೇ

ಹಾಗೆ. ಧ್ವನಿಯು ಕೆಲವು ವೇಳೆ ಉಚ್ಚಸ್ವರದಲ್ಲಿದ್ದು ನಂತರ ಕೆಲವು ನಿಮಿಷ ನೀಚಸ್ವರದಲ್ಲಿರುತ್ತದೆ ಭುಂಗಾ ಈ ರೀತಿ ಏರಿಳಿತಗಳೊಂದಿಗೆ ಕೂಗಲು ಮೊದಲು ಮಾಡಿದರೆ ವೈರಿವಿಮಾನು ಬಂದಿತೆಂದು ತಿಳಿದು ಕೊಳ್ಳಬೇಕು.

೨ ವೈರಿ ವಿಮಾನಗಳು ಹೋದವು. All clear.

ಒಂದೇ ತಾರ(Pitch)ವುಳ್ಳ ಧ್ವನಿಯು ಮಾಡಲ್ಪಡುವದು. ಕೂ೯ ೯ ೯ ೯ ಎಂದು.

ವಿಷ ವಾಯು ಪ್ರಯೋಗವಾದಾಗ್ಗೆ ಇಂತಹದೇ ಎಚ್ಚರಿಕೆ ಕೊಡಬೇಕೆಂದು ನಿರ್ಧರಿಸಿರುವದಿಲ್ಲ. ಆದರೆ ವಿಷವಾಯು ಪ್ರಯೋಗ ವಾಗಿದೆಯೆಂದು ಸಂಶಯ ಬಂದಕೂಡಲೇ ವಾರ್ಡನನು ಇಲ್ಲವೆ ಅವನ ಸಹಾಯಕರು ಬೀದಿತುಂಬೆಲ್ಲ ಓಡಾಡಿ ವಿಷ ವಾಯು ಪ್ರಯೋಗವಾ ಗಿವೆಯೆಂದು ಜನರಿಗೆ ತಿಳಿಸುವರು.

ವೈರಿ ವಿಮಾನುಗಳು ಹೋದಮೇಲೆ (ವಿಷವಾಯು ಪ್ರಯೋಗ ವಾಗಿದ್ದಲ್ಲಿ ಅದನ್ನು ತಡೆಯಲು ತಕ್ಕ ಉಪಾಯಗಳನ್ನು ಕೈಕೊಂಡ ಮೇಲೆ) ಆಲ್ ಕ್ಲಿಯರ್ ಎಚ್ಚರಿಕೆ ಕೊಡಲ್ಪಡುವದು.

ಎಚ್ಚರಿಕೆಯಾದಕೂಡಲೇ ಏನು ಮಾಡಬೇಕು ?

ಎಚ್ಚರಿಕೆಯಾದ ಮೇಲೆ ನಿಮಗೆ ಸಮಯ ದೊರಕುವದಿಲ್ಲ. ಐದು ಮಿನೀಟುಗಳಲ್ಲಿ— ಕೆಲವೊಮ್ಮೆ ಎರಡೇ ಮಿನೀಟುಗಳಲ್ಲಿ — ಬಾಂಬು ಮಳೆಬರಲು ಆರಂಭವಾಗಬಹುದು. ಅದರಿಂದ ಇಷ್ಟು ಅತ್ಯಲ್ಪ ಸಮಯದಲ್ಲಿ ನೀವು ಆಶ್ರಯ ಸ್ಥಾನ ಸೇರಬೇಕು

೨ ಎಚ್ಚರಿಕೆ ಕೊಡಲ್ಪಟ್ಟ ಕೂಡಲೇ ಗಾಬರಿಯಾಗಬೇಡಿರಿ.

ಗಾಬರಿಯಿಂದ ಯಾವ ಕೆಲಸವೂ ಆಗುವದಿಲ್ಲವೆಂದು ನೆನಪಿನಲ್ಲಿಡಿ. ನೀವು ಶಾಂತತೆಯಿಂದ ಆಚರಿಸಿದರೆ ಸಕಾಲದಲ್ಲಿ ನಿಮ್ಮ ಮಕ್ಕಳುಮರಿಗಳೊಂದಿಗೆ ಆಶ್ರಯಸ್ಥಾನಗಳಲ್ಲಿ ಇರಬಲ್ಲಿರಿ. ಇಲ್ಲದಿದ್ದರೆ ಅತ್ತಿಂದಿತ್ತ ಓಡಾಡಿಯೇ ನಿಮ್ಮ ವೇಳೆ ಹೋಗುವದು. ಹಾಗಾಗದಂತೆ ಎಚ್ಚರಿಕೆ ವಹಿಸಿರಿ

೩ ಎಚ್ಚರಿಕೆ ಕೊಡಲ್ಪಟ್ಟ ಕೂಡಲೇ ನೀವು ಮೊದಲು ನಿಮ್ಮ ಮನೆಯ ದೀಪಗಳನ್ನು ಆರಿಸಬೇಕು. ಎಚ್ಚರಿಕೆ ಕೊಟ್ಟಿರುವಾಗ ವೈರಿಯು ಇನ್ನೂ ಅದೆಷ್ಟೋ ಮೈಲು ದೂರದಲ್ಲಿರುವನು. ಅಲ್ಲಿಂದ ಅವನಿಗೆ ನಿಮ್ಮ ಪಟ್ಟಣದ ಒಂದು ದೀಪ ಕಂಡರೂ ಸರಿಯೇ. ಅವನಿಗೆ ಸಹಾಯವಾದಂತಾಗಿ ಅವನು ನೇರವಾಗಿ ನಿಮ್ಮ ಪಟ್ಟಣಕ್ಕೆ ಬರುವನು ಆದರೆ ಒಂದೂ ದೀಪ ಕಾಣದಿದ್ದರೆ ಕತ್ತಲಲ್ಲಿ ನಿಮ್ಮ ಪಟ್ಟಣದ ಸುಳಿವು ಹತ್ತಲಾರದು. ಅದರಿಂದ ವೈರಿಯು ಎಲ್ಲೆಲ್ಲೋ ಕುರುಡುಗುರಿಯಿಂದ ಬಾಂಬು ಸುರಿದು ಹೋಗುಗ ಸಂಭವವಿದೆ. ಆದರಿಂದ ನಿಮ್ಮ ದೀಪಗಳನ್ನೆಲ್ಲ ತತ್‌ಕ್ಷಣ ಆರಿಸಿಬಿಡಿ. ಬೀದಿಯಲ್ಲಿ ಮೋಟಾರನಲ್ಲಿರುವವರು ತತ್‌ಕ್ಷಣ ದೀಪ ಆರಿಸಿ ಮೋಟಾರು ಪಕ್ಕಕ್ಕೆ ತೆಗೆದುಕೊಳ್ಳಬೇಕು. ಈ ರೀತಿ ಇಡೀ ಪಟ್ಟಣದಲ್ಲಿ ಕಗ್ಗತ್ತಲೆಯಾದರೆ ಅದರಷ್ಟು ಉತ್ತಮ ರಕ್ಷಣೆ ಮತ್ತೊಂದಿಲ್ಲ.

೪ ವಿಮಾನ ದಾಳಿಯ ಎಚ್ಚರಿಕೆಯಾದ ಕೂಡಲೇ ಬಾಂಬು ಹೊಡತಗಳಿಂದ ತಪ್ಪಿಸಿಕೊಳ್ಳಲು ಏನು ಮಾಡಬೇಕೆಂಬುದನ್ನು ಮುಂದೆ ಹೇಳಿದೆ. ಪ್ರತಿಯೊಬ್ಬರು ಮುಂದೆ ಹೇಳಿದ ನಿಯಮಗಳನ್ನು ಚಾಚೂ ತಪ್ಪದೆ ಆಚರಿಸಿದರೆ ಬಾಂಬು ದಾಳಿಯಿಂದ ಯಾವ ಭಯವೂ ಇಲ್ಲ.

೫ ವಿಮಾನದಾಳಿ:— ಸಿಡಿಮದ್ದಿನ ಬಾಂಬುಗಳು:

ಮೊದಲೇ ಹೇಳಿದಂತೆ ಸಿಡಿಯುವ ಬಾಂಬುಗಳನ್ನು ಉಕ್ಕಿನ ಕವಚಗಳಲ್ಲಿ ಸ್ಫೋಟಕ ಮದ್ದನ್ನು ತುಂಬಿ ತಯಾರಿಸುವರು. ಈ ಬಾಂಬುಗಳ ಭಾರ ೨೫ ಪೌಂಡಿನಿಂದ ೨೦೦೦ ಪೌಂಡುಗಳ ವರೆಗೂ ಇರುವದು. ಈ ಕವಚದಲ್ಲಿ ಒಂದು ಪ್ಯೂಸ್—ಬೆಂಕಿ ಹತ್ತಿಕೊಳ್ಳುವ ಸಾಧನವಿರುತ್ತದೆ. ಇದರ ಪರಿಣಾಮವಾಗಿ ಬಾಂಬು ನೆಲಕ್ಕೆ ಬೀಳು ವಾಗಲೇ ಹಾರುವದಿಲ್ಲ. ಆದರೆ ನೆಲಕ್ಕೆ ಬಿದ್ದು ಕೊಂಚ ಹೊತ್ತಿನ ಮೇಲೆ— ಕೆಲವು ಸೆಕೆಂಡುಗಳ ಮೇಲೆ ಸಿಡಿಯುತ್ತದೆ. ಈ ಭಯಂಕರ ಸ್ಫೋಟದಿಂದಾಗುವ ಪರಿಣಾಮುಗಳನ್ನು ಈ ರೀತಿ ಕೊಡಬಹುದು.

(೧) ಭಯಂಕರ ಸಪ್ಪಳ:—ಒಂದೇ ಸವನೆ ಬಾಂಬು ಬೀಳಲಾ ರಂಭಿಸಿದರೆ ಭಯಂಕರ ಸಹಿಸಲಸಾಧ್ಯವಾದ ಸಪ್ಪಳಗಳುಂಟಾಗಿ ಕಿವಿ ಪಟಲಗಳು ಒಡೆಯುವ ಸಂಭವವಿರುತ್ತದೆ. ಕೆಲವರ ಮಿದುಳುಗಳಿಗೆ ಈ ಸಪ್ಪಳಗಳಿಂದ ಆಘಾತಗಳಾದ ಉದಾಹರಣೆಗಳೂ ಉಂಟು. ನರ ಶಕ್ತಿ ಕುಂದಿದವರು ಈ ತರದ ಸಪ್ಪಳಗಳನ್ನು ಸಹಿಸಲಾರರು.

(೨) ಬಾಂಬಿನ ಚೂರುಗಳು(Splinters):—

ಬಾಂಬು ಕೆಳಗೆ ಬಿದ್ದೊಡನೆಯೇ ಸ್ಫೋಟವಾಗುತ್ತದೆಂದು ಹಿಂದೆ ಹೇಳಿದೆ. ಈ ಸ್ಫೋಟವಾದ ರಭಸಕ್ಕೆ ಬಾಂಬಿನ ಚೂರುಗಳು— ಬಾಂಬಿನಲ್ಲಿದ್ದ ಕಾಜು ಮೊದಲಾದ ಹದನ ಪದಾರ್ಥಗಳ ಚೂರುಗಳು ಬಾಂಬು ಬಿದ್ದ ಸ್ಥಳದಿಂದ ಸುತ್ತಲೂ ಅತಿ ವೇಗದಿಂದ ಪಸರಿಸುತ್ತವೆ. ಈ ಚೂರುಗಳು ಅತಿ ಹದನವಾಗಿದ್ದು ಒಂದು ಇಂಚಿನಷ್ಟು ದೊಡ್ಡವಿರು ತ್ತವೆ. ಇವುಗಳ ವೇಗವು ಒಂದು ನಿಮಿಷಕ್ಕೆ ೭೦೦೦ ಫೂಟಿನಷ್ಟು—

ಅಂದರೆ ನಿಮಿಷಕ್ಕೆ ಹೆಚ್ಚು ಕಡಿಮೆ ಒಂದೂವರೆ ಮೈಲಿನಷ್ಟು ಇರುವದು. ಇಷ್ಟು ಹದನವಾಗಿದ್ದ ಚೂರುಗಳು ಇಷ್ಟು ವೇಗದಿಂದ ಬರುತ್ತಿದ್ದರೆ ಅವುಗಳ ದಾರಿಯಲ್ಲಿ ಸಿಕ್ಕ ಮನುಷ್ಯನ ಗತಿಯೇನಾದೀತೆಂಬುದನ್ನು ಊಹಿಸಿಕೊಳ್ಳಿ.

ಈ ಚೂರುಗಳು ಪಸರಿಸುವ ಪರಿಮಿತಿಯು ೩೦೦ ಯಾರ್ಡಿನಿಂದ ೧೫೦೦ ಯಾರ್ಡುಗಳ ವರೆಗೆ ಇರುತ್ತದೆ. ಅಂದರೆ ೨೫ ಪೌಂಡಿನ ಒಂದು ಬಾಂಬು ಒಂದೆಡೆ ಸ್ಫೋಟವಾದರೆ ಆ ಸ್ಥಳದಿಂದ ೩೦೦ ಯಾರ್ಡು ದೂರದಲ್ಲಿರುವವರೆಲ್ಲರೂ ಅಪಾಯಕ್ಕೆ ಒಳಗಾಗುವ ಸ್ಥಿತಿಯಲ್ಲಿರುವರು. ಆದರಿಂದ ಬಾಂಬು ಅಷ್ಟು ದೂರ ಬಿದ್ದರೆ, ನನಗೇನೂ ಆಗಲಾರದು ಎಂಬ ಭಾವನೆ ಶುದ್ಧ ತಪ್ಪು.

ಈ ಬಾಂಬಿನ ಚೂರುಗಳು ಇದೇ ದಿಕ್ಕಿನಲ್ಲಿ ಹಾರುತ್ತವೆಂದು ಹೇಳುವದು ಸಾಧ್ಯವಿಲ್ಲ. ಬಹುಶಃ ಬಾಂಬು ಬಿದ್ದ ಸ್ಥಳದಿಂದ ವರ್ತುಲಾಕಾರವಾಗಿ ಪಸರಿಸುವವು. ಆದರೆ ಅವುಗಳ ಹಾದಿಯಲ್ಲಿ ಗೋಡೆ ಮುಂತಾದವು ಅಡ್ಡ ಬಂದರೆ ಅವು ತಡೆಯಲ್ಪಡಬಹುದು. ಇಲ್ಲವೆ ಗೋಡೆಗೆ ಬಡಿದು ಪರಿವರ್ತನವಾಗಿ ಉಳಿದ ಯಾವದೇ ದಿಕ್ಕಿನಲ್ಲಿ ಧಾವಿಸಬಹುದು.

ಈ ಬಾಂಬು ಚೂರುಗಳು ನೆಲಕ್ಕೆ ತಾಗಿ ಹಾರುವದಿಲ್ಲ. ಆದರೆ ನೆಲದಿಂದ ಒಂದೆರಡು ಫೂಟಿನಷ್ಟು ಎತ್ತರದಲ್ಲಿ ಹಾರುವವು. ಅದರಿಂದ ಭೂಮಿಯ ಮೇಲೆ ಬಿದ್ದುಕೊಂಡ ಮನುಷ್ಯನಿಗೆ ಈ ಚೂರುಗಳಿಂದ ಅಪಾಯ ಕಡಿಮೆ.

ಈ ಬಾಂಬಿನ ಚೂರುಗಳಿಂದ ಆಗುವಷ್ಟು ಪ್ರಾಣಹಾನಿ ಮತ್ತಾವದರಿಂದಲೂ ಆಗುವದಿಲ್ಲ. ಒಂದೊಂದು ಬಾಂಬಿನಿಂದ ಸಾವಿರಾರು ಇಂತಹ ಚೂರುಗಳು ಹಾರುತ್ತವೆ. ಅದರಿಂದ ಜನರ ಗುಂಪಿನಲ್ಲಿ ಒಂದು ಬಾಂಬು ಬಿದ್ದರೆ ಸಾವಿರಾರು ಜನರಿಗೆ ಅಪಾಯವಾಗುವ

ಸಂಭವವಿರುತ್ತದೆ. ಆದರಿಂದ ಈ ಚೂರುಗಳಿಂದ ನಿಮ್ಮ ರಕ್ಷಣೆ ಮಾಡಿಕೊಳ್ಳುವದು ನಿಮ್ಮ ಕರ್ತವ್ಯ. ಇದರ ವಿವರ ಮುಂದೆ ಕೊಟ್ಟಿದೆ.

(೩) ಗಾಳಿಯ ಒತ್ತಡ (Blasts) :—

ಬಾಂಬು ಬಿದ್ದರೆ ಮನೆಗಳು ಬೀಳುವದನ್ನು ನಾವು ನೋಡುತ್ತೇವೆ. ಆದರೆ ಯಾವದೇ ಮನೆಯ ಮೇಲೆ ನೇರವಾಗಿ ಬಾಂಬು ಬೀಳದಿದ್ದರೂ ಅದು ನೆಲಕ್ಕೆ ಕುಸಿಯುತ್ತದೆ. ಬಾಂಬಿನ ಚೂರುಗಳಿಂದ ಮನೆ ಮುರಿದು ಬೀಳುವದು ಸಾಧ್ಯವಿಲ್ಲ ತಾನೆ. ಅಂದಮೇಲೆ ಮನೆ ಏಕೆ ಕುಸಿಯಬೇಕು ?

ಮನೆ ಕುಸಿದು ಬೀಳುವದಕ್ಕೆ ಕಾರಣವಾದದ್ದು ಗಾಳಿಯ ಒತ್ತಡ(Air Blasts). ಈ ಒತ್ತಡಗಳು ಈ ರೀತಿ ಉದಯವಾಗುತ್ತವೆ.

ಒಂದು ಸ್ಥಳದಲ್ಲಿ ಬಿದ್ದ ಬಾಂಬು ಸ್ಫೋಟವಾದೊಡನೆಯೇ ಸ್ಫೋಟದ ರಭಸಕ್ಕೆ ಆ ಸ್ಥಳದ ಗಾಳಿಯು ಸುತ್ತಲೂ ಒತ್ತಲ್ಪಡುತ್ತದೆ. ಇದರಿಂದ ಹವೆಯಲ್ಲಿ ಒತ್ತಡಗಳು ಉತ್ಪನ್ನವಾಗುತ್ತವೆ. ಈ ಒತ್ತಡಗಳು ಅತಿ ವೇಗದಿಂದ ಸುತ್ತಲೂ ವ್ಯಾಪಿಸುತ್ತವೆ ಆದರೆ ಇದೇ ಸಮಯಕ್ಕೆ ಬಾಂಬು ಬಿದ್ದ ಸ್ಥಳದಲ್ಲಿ ನಿರ್ವಾತ ಪ್ರದೇಶ (Vaccuum) ಉತ್ಪನ್ನವಾಗಿರುವದಷ್ಟೇ. ಇದನ್ನು ತುಂಬುವದಕ್ಕಾಗಿ ದೂರ ವ್ಯಾಪಿಸಿದ್ದ ಈ ಗಾಳಿಯ ಒತ್ತಡಗಳು ಅಷ್ಟೇ ವೇಗದಿಂದ ತಿರುಗಿ ಆ ಸ್ಥಳಕ್ಕೆ ಬರುತ್ತವೆ. ಈ ರೀತಿ ಹವೆಯಲ್ಲಿ ಎರಡು ಬಗೆಯ ಒತ್ತಡಗಳು ಉತ್ಪನ್ನವಾಗುತ್ತವೆ.

ಈ ಒತ್ತಡಗಳ ಪರಿಣಾಮವು ಈ ರೀತಿಯದು. ನಿಮ್ಮ ಮನೆಯಿಂದ ದೂರ ಒಂದು ಬಾಂಬು ಬಿದ್ದಿತೆಂದು ಇಟ್ಟುಕೊಳ್ಳಿ.

ತತ್ಕ್ಷಣ ಗಾಳಿಯಲ್ಲಿ ಒತ್ತಡಗಳು ಉತ್ಪನ್ನವಾಗಿ ಸುತ್ತಲೂ ವೇಗ ದಿಂದ ಪಸರಿಸುತ್ತವೆ. ಈ ಒತ್ತಡಗಳ ವೇಗ ನಿಮಿಷಕ್ಕೆ ಎರಡು ಮೈಲಿನಿಂದ ನಾಲ್ಕು ಮೈಲುಗಳ ವರೆಗೆ ಇರುತ್ತದೆ! ಅದರಿಂದ ನೀವು ಕಣ್ಣು ಮುಚ್ಚಿ ತೆರೆಯುವದರೊಳಗೆ ಅವು ನಿಮ್ಮ ಮನೆಗೆ ಬಂದು ಬಿಡುತ್ತವೆ. ಮೊದಲು ಅವು ನಿಮ್ಮ ಮನೆಯ ಗೋಡೆಗೆ ಅಪ್ಪಳಿಸು ತ್ತವೆ. ಸಾಧಾರಣವಾದ ಗೋಡೆಯು ಇಷ್ಟು ವೇಗದಿಂದ ಬಂದ ಒತ್ತಡಗಳ ಬಡಿತಕ್ಕೆ ತಡೆಯಲಾರದು. ಅದರಿಂದ ನಿಮ್ಮ ಗೋಡೆಗೆ ಪುನಃ ವಿರುದ್ಧ ದಿಕ್ಕಿನಿಂದ ಭಯಂಕರ ಹೊಡತ ಬೀಳುತ್ತದೆ. ಮೊದಲೇ ಶಿಥಿಲವಾದ ಗೋಡೆಯು ಈ ಎರಡನೆಯ ಹೊಡತವನ್ನು ತಾಳಲಾರದೆ ಹೊರಗಡೆ ಬೀಳುತ್ತದೆ. ಇಷ್ಟೆಲ್ಲ ಆಗುವದು ಕೆಲವೇ ನಿಮಿಷಗಳಲ್ಲಿ. ಯಾಕಂದರೆ ಹವೆಯಲ್ಲಿ ಒತ್ತಡವು ಬಹಳ ವೇಳೆ ಇರುವದಿಲ್ಲ.

ಈ ರೀತಿ ಒತ್ತಡಗಳು ತಮ್ಮ ದಾರಿಯಲ್ಲಿ ಬಂದದ್ದೆಲ್ಲವನ್ನೂ ನಾಶಮಾಡಿಬಿಡುತ್ತವೆ. ಒಂದು ವೇಳೆ ಮನುಷ್ಯ ಪ್ರಾಣಿ ಈ ಒತ್ತಡ ದಲ್ಲಿ ಸಿಕ್ಕರಂತೂ ಅವನ ಗತಿ ದೇವರೇ ಕಂಡು ಕೊಳ್ಳಬೇಕು. ಈ ಒತ್ತಡದ ಪರಿಣಾಮವಾಗಿ ಅವನ ಹೃದಯ ಇಲ್ಲವೆ ಮಿದುಳಿನ ಮೇಲೆ ಭಯಂಕರ ಭಾರ ಬೀಳಬಹುದು. ಅದರಿಂದ ಅವನು ತತ್ಕ್ಷಣ ಸತ್ತು ಹೋಗುವನು. ಹೀಗೆ ಸತ್ತರೆ ಅದೆಷ್ಟೋ ವಾಸಿ. ಆದರೆ ಕೆಲ ವು ಬಾರಿ ಅನೇಕ ವಿಚಿತ್ರ ಪರಿಣಾಮಗಳುಂಟಾಗುವವು. ಒಮ್ಮೊಮ್ಮೆ ಮನುಷ್ಯನ ಅಂಗಾಂಗಗಳು ತಿರುಪಿ ಹೋಗುವವು. ಇಂಗ್ಲಂಡನಲ್ಲಿ ಒಬ್ಬನಿಗೆ ಹೃದಯ ಜಠರಗಳೆರಡೂ ಸ್ಥಳಾಂತರಿಸಿದವಂತೆ. ಕೆಲವೊಮ್ಮೆ ಮನುಷ್ಯನು ಬರೀ ಗಿರಕಿಗಳನ್ನು ಹೊಡೆಯಬಹುದು. ಕೆಲವೊಮ್ಮೆ ತಲೆ ಕೆಳಗಾಗಿ ಲಾಗಗಳನ್ನು ಹಾಕಬಹುದು. ಅಂತೂ ಈ ಒತ್ತಡಗ ಳನ್ನು ಆದಷ್ಟು ತಪ್ಪಿಸಬೇಕು. ಅದರ ವಿವರ ಮುಂದೆ ಹೇಳಿದೆ.

(೪) ಭೂಮಿಯಲ್ಲಿ ಕಂಪನಗಳು:—

ಕೆಲವೊಮ್ಮೆ ಬಾಂಬು ನೆಲದಲ್ಲಿ ಕೆಲವು ಅಂತರ ಸೇರಿ ನಂತರ

ಸ್ಫೋಟವಾಗುವದು. ಈ ಸ್ಫೋಟದ ರಭಸಕ್ಕೆ ಭೂಮಿಯು ಅದರುವದು. ಭೂಕಂಪವಾದಾಗ ಆಗುವಂತೆ ಭೂಮಿಯಲ್ಲಿ ಅಸಾಧ್ಯವಾದ ಕಂಪನಗಳುಂಟಾಗುವವು. ಈ ಕಂಪನಗಳ ಪರಿಣಾಮವೆಂದರೆ ಮನೆಗಳು ಕುಸಿದು ಬೀಳುವವು. ತಳವೇ ಅದರಿದ ಮೇಲೆ ಇಮಾರತು ನಿಲ್ಲುವದೆಂತು ? ತಾರುಕಂಬ, ವಿದ್ಯುತ್‌ಸ್ತಂಭಗಳೆಲ್ಲ ನೆಲಕ್ಕೆ ಬೀಳುವ ಸಂಭವ ಹೆಚ್ಚು. ಮರಗಳೂ ಬುಡಮೇಲಾಗುವವು. ನೆಲದ ಮೇಲೆ ಬಿದ್ದ ಮನುಷ್ಯನಿಗೆ ಈ ಕಂಪನಗಳಿಂದ ಆಘಾತಗಳೂ ಆಗುವ ಸಂಭವವುಂಟು. ಅದರಿಂದಲೇ ಈ ಕಂಪನಗಳಿಂದ ಹಲ್ಲುಗಳು ಗಟ್ಟಿಯಾಗಿ ಕೂಡಿಕೊಳ್ಳಬಾರದೆಂದೂ, ಹೃದಯದ ಮೇಲೆ ಪರಿಣಾಮವಾಗದಿರಲೆಂದೂ, ಕಿವಿಯ ಪಟಲಗಳು ಹರಿಯಬಾರದೆಂದೂ ನೆಲದ ಮೇಲೆ ಬಿದ್ದ ಮನುಷ್ಯನು ಬಾಯಲ್ಲಿ ಒಂದು ರಬ್ಬರದ ಚೂರನ್ನು ಇಟ್ಟುಕೊಳ್ಳಬೇಕೆಂದು ಹೇಳುವದು.

ಆದರೆ ಒತ್ತಡಗಳಿಂದ ಆಗುವಷ್ಟು ಅಪಾಯ, ಹಾನಿ ಈ ಕಂಪನಗಳಿಂದ ಆಗುವದಿಲ್ಲ.

ಬಾಂಬಿನಿಂದ ರಕ್ಷಣೆ:—

ಬಾಂಬಿನಿಂದ ರಕ್ಷಣೆಯೆಂದರೆ (೧) ಬಾಂಬಿನ ಚೂರುಗಳು (೨) ಹವೆಯ ಒತ್ತಡ ಇವೆರಡರಿಂದ ರಕ್ಷಣೆಯೆಂದು ನಿಮಗೆ ಗೊತ್ತಾಯಿತಷ್ಟೇ. ಈ ರೀತಿಯ ರಕ್ಷಣೋಪಾಯಗಳು ಅನೇಷ್ಟೋ ಇವೆ. ಸಾರ್ವಜನಿಕ ಆಶ್ರಯ ಸ್ಥಾನಗಳು, ಟ್ರೆಂಚುಗಳು, ಮುಂತಾದವುಗಳು ಈ ರಕ್ಷಣೋಪಾಯುಗಳು. ಆದರೆ ಇವುಗಳನ್ನು ಸರಕಾರಗಳು ಒದಗಿಸಬೇಕೇ ವಿನಾ ಪ್ರತಿಯೊಬ್ಬ ವ್ಯಕ್ತಿಯಿಂದ ಇಂತಹ ಆಶ್ರಯಸ್ಥಾನಗಳನ್ನು ನಿರ್ಮಿಸುವದು ಸಾಧ್ಯವಿಲ್ಲ. ಆದರೆ ಇಂತಹ ಸಾರ್ವಜನಿಕ ಆಶ್ರಯ ಸ್ಥಾನಗಳನ್ನು ಪ್ರತಿಯೊಂದು ಪಟ್ಟಣಕ್ಕೆ ಕಟ್ಟಿಸುವದೂ ಸರಕಾರದಿಂದ ಅಸಾಧ್ಯವಾದ ಮಾತೆಂಬುದನ್ನು ಪ್ರಜೆಗಳು ಮರೆಯಕೂಡದು. ಏಕಂದರೆ ಅದಕ್ಕೆ ಅದೆಷ್ಟೋ ಹಣ

ವೆಚ್ಚವಾಗುವದು. ಒಂದು ವೇಳೆ ಒಂದೆರಡನ್ನು ಕಟ್ಟಿಸಿದರೂ ಅವು ಗಳನ್ನು ಅತ್ಯವಶ್ಯವಿದ್ದವರು— ಸ್ವತಂತ್ರ ಆಶ್ರಯಸ್ಥಾನಗಳನ್ನು ಏರ್ಪಡಿಸಿಕೊಳ್ಳಲು ಅಶಕ್ತರಾದವರು—ಉಪಯೋಗಿಸಬೇಕೇ ವಿನಹಾ ಇಡೀ ಪಟ್ಟಣವೆಲ್ಲವೂ ಸಾರ್ವಜನಿಕ ಆಶ್ರಯ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಬಾರದು ಪ್ರತಿಯೊಬ್ಬ ನಾಗರಿಕನೂ ಸ್ವತಂತ್ರ ಆಶ್ರಯಸ್ಥಾನಗಳನ್ನು ಕಲ್ಪಿಸಿಕೊಳ್ಳಲು ಸಾಧ್ಯವಿದೆ. ಟ್ರೆಂಚುಗಳ ವಿಷಯ ಪರಿಶಿಷ್ಟದಲ್ಲಿ ಹೇಳಿದೆ. ಆದರೆ ಇಲ್ಲಿ ಮನೆಯಲ್ಲಿಯೆ ನಿರ್ಮಿಸಿಕೊಳ್ಳಬಹುದಾದ ಆಶ್ರಯ ಸ್ಥಾನವನ್ನು ಕುರಿತು ಹೇಳುವೆ.

ನಿಮ್ಮದೊಂದು ಪಕ್ಕಾ ಮನೆಯೆಂದು ತಿಳಿದುಕೊಳ್ಳುವಾ. (ಒಂದು- ಒಂದೂಕಾಲು ಫೂಟು ದಪ್ಪವಾದ ಇಟ್ಟಂಗಿ ಗೋಡೆಗಳಿದ್ದ ಮನೆ ಪಕ್ಕಾ ಮನೆಯೆಂದು ತಿಳಿದುಕೊಳ್ಳಬೇಕು. ಇದಕ್ಕೂ ತೆಳ್ಳಗಿನ ಮಣ್ಣಿನ ಗೋಡೆಯಿದ್ದ ಮನೆ ಕಚ್ಚಾ ಮನೆ. ಕಚ್ಚಾ ಮನೆ ಬಾಂಬು ದಾಳಿಯ ಕಾಲದಲ್ಲಿ ತೀರ ನಿರುಪಯೋಗಿ. ಆದರಿಂದ ಕಚ್ಚಾ ಮನೆಯವರು ಸಾರ್ವಜನಿಕ ಆಶ್ರಯಸ್ಥಾನಗಳಲ್ಲೋ, ಇಲ್ಲವೇ ಪಕ್ಕಾ ಮನೆಗಳಲ್ಲೋ ಹೋಗಿ ಸೇರಿಕೊಳ್ಳಬೇಕು.) ಬಾಂಬು ಚೂರುಗಳ ಹೊಡತ ಎರಡು ರೀತಿಯಲ್ಲಿ ಬರಬಹುದು ಮೊದಲನೇಯದು ಬಾಜುವಿನಿಂದ, ಎರಡನೇಯದು ಮೇಲಿಂದ ಅಂದರೆ ಬಾಂಬು ಚೂರುಗಳು ಮೇಲಕ್ಕೆ ಹಾರಿ, ನಂತರ ಅತಿ ವೇಗದಿಂದ ಕೆಳಗೆ ಬರುವವು ಇವೆರಡರಿಂದಲೂ ರಕ್ಷಣೆಯಾಗುವಂತೆ ನಾವು ಆಶ್ರಯ ಸ್ಥಾನವನ್ನು ಕಲ್ಪಿಸಬೇಕು. ನಿಮ್ಮ ಮನೆಯ ನಟ್ಟನಡುವೆ ಅಂದರೆ ಮಧ್ಯದಲ್ಲಿ ಇರುವ ಒಂದು ಕೋಣೆಯನ್ನು ಆರಿಸಿಕೊಳ್ಳಿ. ಅಂದರೆ ಆ ಕೋಣೆಗೆ ಬರುವಾಗ್ಗೆ ಒಂದೆರಡು ಗೋಡೆಗಳನ್ನು ಹಾಯ್ದು ಬರಬೇಕು.— ಕೋಣೆಯ ನಾಲ್ಕೂ ಮಗ್ಗಲೂ ಕೆಲವು ಗೋಡೆಗಳಿರಬೇಕು. ಇದರಿಂದ ಒತ್ತಡಗಳಿಂದ ರಕ್ಷಣೆಯಾಗುವದು. ಗಾಳಿಯ ಒತ್ತಡವೊಂದು ಬಂದಿತೆಂದು ಇಟ್ಟುಕೊಳ್ಳೋಣ. ಅದು ಹೊರಗಿನ ಗೋಡೆಯನ್ನು ದಾಟಿ ಬರುವಾಗ ಹೊರಗಿನ ಗೋಡೆಗೆ ಸ್ವಲ್ಪ ಧಕ್ಕೆಯಾಗಬಹುದು. ಆದರೆ

ಇದೇ ಸಮಯಕ್ಕೆ ಒತ್ತಡದ ಶಕ್ತಿಯೂ ಸ್ವಲ್ಪ ಕುಂದುವುದು. ಹೀಗೆ ಅಡ್ಡವಿದ್ದ ಗೋಡೆಗಳನ್ನು ದಾಟಿಬರುವಾಗ್ಗೆ ಒತ್ತಡದ ಶಕ್ತಿಯು ಕಡಿಮೆಯಾಗುವದರಿಂದ ಒತ್ತಡವು ನಿಮ್ಮ ಆಶ್ರಯ ಕೋಣೆಯನ್ನು ಮುಟ್ಟಿದರೂ ನಿಮ್ಮ ಕೋಣೆ ಭದ್ರವಾಗಿರುವದು. ಹೀಗೆ ಹೊರಗಿನ ಗೊಡೆಗಳು ಬಿದ್ದರೂ ಕೋಣೆಯ ಗೋಡೆ ಭದ್ರವಾಗಿರುವದು.

ಎರಡು ಮನೆಗಳು ಒಂದಕ್ಕೊಂದು ಹತ್ತಿದ್ದರೆ ಮಧ್ಯಗೋಡೆಗೆ ಹೊಂದಿದ್ದ ಕೋಣೆಯನ್ನು ಆರಿಸಿಕೊಳ್ಳಿ. ಆ ಗೋಡೆಯನ್ನು ಎರಡೂ ಕಡೆಯಿಂದ ಬಲಪಡಿಸಿದರೆ ಎರಡೂ ಮನೆಯವರಿಗೂ ಅನುಕೂಲವಾಗುವದು.

ಚಾಳದಲ್ಲಿದ್ದವರು ನಡುವಿನ ಮನೆಗಳನ್ನು ಆಶ್ರಯಸ್ಥಾನಗಳನ್ನಾಗಿ ಉಪಯೋಗಿಸಬಹುದು. ಚಾಳದ ನಡುವಿನ ಮನೆಯನ್ನು ಖಾಲಿ ಇಟ್ಟು ದಾಳಿಕಾಲದಲ್ಲಿ ಎಲ್ಲರೂ ಅಲ್ಲಿ ಒಂದು ಸೇರುವಂತೆ ವ್ಯವಸ್ಥೆ ಇಡಬೇಕು. ಈ ನಡುವಿನ ಮನೆಯ ಎಡ ಮತ್ತು ಒಲಗಳಲ್ಲಿ ಆದೆಷ್ಟೋ ಗೋಡೆಗಳು ಒಂದಾದ ಮೇಲೊಂದು ಇರುವದರಿಂದ ಈ ಭಾಗಗಳಿಂದ ಒತ್ತಡದ ಭಯವಿಲ್ಲ ಎದುರಿಗಿನ ಮತ್ತು ಹಿಂದಿನ ಗೋಡೆಗಳನ್ನು ಭದ್ರಪಡಿಸಿದರಾಯಿತು. ಚಾಳದಲ್ಲಿದ್ದವರಿಗೆ ಉತ್ತಮ ಆಶ್ರಯಸ್ಥಾನವಾಯಿತು.

ಕೋಣೆಯನ್ನು ಆರಿಸಿಕೊಂಡಮೇಲೆ ಕೋಣೆ ಸಾಕಷ್ಟು ಭದ್ರವಿಲ್ಲವೆಂದು ನಿಮಗೆ ಅನಿಸಿದರೆ ಕೋಣೆಯ ಗೋಡೆಗೆ ಸ್ವಲ್ಪ ದೂರದಲ್ಲಿ ಮತ್ತೊಂದು ಗೋಡೆಯನ್ನು ಹಾಕಿಕೊಳ್ಳಲು ಅಡ್ಡಿಯಿಲ್ಲ. ಈ ಗೋಡೆ ಒಂದೇ ಇಟ್ಟಂಗಿಯಿಂದ ಕಟ್ಟಿದರೂ ಸಾಕು. ಈ ರೀತಿ ಎರಡು ಗೋಡೆಗಳಿದ್ದರೆ ಕೋಣೆಯು ಭದ್ರವಾಗುವದು.

ಕೋಣೆ ಚನ್ನಾಗಿ ಹವೆಯಾಡುವಂತಿರಬೇಕು. ದಾಳಿಕಾಲದಲ್ಲ ಅದರಲ್ಲಿ ಮನೆಯವರೆಲ್ಲರೂ ಕೂಡ್ರುವದರಿಂದ ಉಸುರಾಡಿಸಲು ಅನುಕೂಲವಾಗುವಂತೆ ಹವೆಯ ಓಡಾಟವಿರಬೇಕು.

ಕೋಣೆಗೆ ಬಾಗಿಲು ಕಿಡಕಿಗಳಿದ್ದರೆ, ಅವುಗಳನ್ನು ಮುಚ್ಚುವ ಪ್ರಯತ್ನ ಮಾಡಬೇಡಿ. ಹೀಗೆ ಮುಚ್ಚಿಬಿಟ್ಟರೆ ಬೆಳಕು, ಗಾಳಿಗಳಿಗೆ ಅಭಾವವಾಗುವದು. ಆದರೆ ಬಾಗಿಲು ಅಥವಾ ಕಿಡಕಿಯಿಂದ ೨ ಅಥವಾ ೩ ಫೂಟು ದೂರದಲ್ಲಿ ಒಂದು ಅಡ್ಡ ಗೋಡೆ ಹಾಕಿ. ಒಂದು ವೇಳೆ ಗಾಳಿಯ ಒತ್ತಡ ಬಾಗಿಲು ಮೂಲಕ ಬಂದರೆ ಈ ಗೋಡೆ ಅದನ್ನು ತಡೆಯುವದು.

ಇಷ್ಟು ಆಜುಬಾಜುವಿನ ಭದ್ರತೆಯಾಯಿತು. ಇನ್ನು ಮೇಲಿನ ಭದ್ರತೆ.

ಕೋಣೆಯ ಛಾವಣಿ (Roof) ಸಾಕಷ್ಟು ಭದ್ರವಾಗಿರಬೇಕು. ನಿಮ್ಮದು ಎರಡಂತಸ್ತಿನ ಮನೆಯಾಗಿದ್ದದೆ ಛಾವಣಿ ಮತ್ತಿಷ್ಟು ಭದ್ರವಾಗಿರಬೇಕಾದದ್ದು ಅತ್ಯವಶ್ಯ. ಏಕಂದರೆ ಬಾಂಬುದಾಳಿಯಿಂದ ಒಂದು ವೇಳೆ ಮೇಲ್ಭಾಗ ಬಿದ್ದರೂ ಕೋಣೆಯ ಛಾವಣಿ ಈ ಮುರಿದು ಬಿದ್ದ ಭಾಗದ ಭಾರವನ್ನು ಹೊರಲು ಸಾಕಷ್ಟು ಗಟ್ಟಿಯಾಗಿರಬೇಕು. ಇಲ್ಲದಿದ್ದರೆ ಎಲ್ಲರಿಗೂ ಕೋಣೆಯೇ ಸಮಾಧಿಯಾದೀತು. ನಿಮ್ಮ ಮನೆಗೆ ಮಾಳಿಗೆ ಇಲ್ಲದಿದ್ದರೆ, ನಿಮ್ಮ ನೆರೆಹೊರೆಯ ಮನೆಗಳು ನಿಮ್ಮ ಮನೆಗಿಂತಲೂ ಎತ್ತರವಿದ್ದರೆ ನಿಮ್ಮ ಛಾವಣಿಯ ಬಗ್ಗೆ ಅದಷ್ಟು ಕಾಳಜಿ ವಹಿಸಿ. ಏಕಂದರೆ ಈ ಎತ್ತರವಿದ್ದ ಮನೆಗಳು ನಿಮ್ಮ ಛಾವಣಿಯ ಮೇಲೆ ಬೀಳುವ ಸಂಭವವಿದೆ ಆದ್ದರಿಂದ ನಿಮ್ಮ ಕೋಣೆಯ ಛಾವಣಿ ಭದ್ರವಿದ್ದಷ್ಟು ಒಳ್ಳೆಯದು. ಶಕ್ಯವಿದ್ದರೆ ಈ ಆಶ್ರಯಕೋಣೆಯಲ್ಲಿ ಕಬ್ಬಿಣದ ತೊಲೆಗಳನ್ನು ಸೇರಿಸಿ ಅದರ ಮೇಲೆ ಝಿಂಕ ಶೀಟನ್ನೋ ಇಲ್ಲವೆ ಒಂದು ಫೂಟು ದಪ್ಪ ಗಚ್ಚನ್ನೋ ಹಾಕಿಬಿಡಿ. ಅದರಿಂದ ಒಂದು ವೇಳೆ ಬಾಂಬು ಚೂರುಗಳು, ಮಶಿನ್ನುಗನ್ನು ಗುಂಡುಗಳು ಇಲ್ಲವೆ ಆಜುಬಾಜುವಿನ ಇಮಾರತುಗಳು ಮೇಲೆ ಬಿದ್ದರೂ ಛಾವಣಿ ತಡೆಯಬಲ್ಲದು ಅಂತಸ್ತಿನ ಮನೆಯಿದ್ದವರಿಗೆ ಈ ರೀತಿ ಕಬ್ಬಿಣದ ತೊಲೆಗಳನ್ನು ಹೊಸತಾಗಿ ಸೇರಿಸಲು ಸಾಧ್ಯವಿಲ್ಲ.

ಆಂಥವರು ಕೋಣೆಯೊಳಗೆ ಛಾವಣಿಯಿಂದ ಕೊಂಚ ಅಂತರದಲ್ಲಿ ಹೊಸದೊಂದು ಭದ್ರವಾದ ಛಾವಣಿ ಹಾಕಿಕೊಳ್ಳಿರಿ. ಇದರಿಂದ ಮೇಲಿನ ಛಾವಣಿ ಬಿದ್ದರೂ ಎರಡನೇ ಛಾವಣಿ ಇರುವದರಿಂದ ಅಪಾಯವಿಲ್ಲ

ಇಷ್ಟು ವ್ಯವಸ್ಥೆಯನ್ನು ನೀವು ಮಾಡಿಕೊಂಡರೆ ನಿಮ್ಮ ಮನೆ ಯಲ್ಲೊಂದು ಆಶ್ರಯಸ್ಥಾನ ಸಿದ್ಧವಾದಂತಾಯಿತು. ಪ್ರತಿಯೊಬ್ಬ ನಾಗರೀಕನೂ ತನ್ನ ಮನೆಯಲ್ಲಿ ಒಂದು ಭದ್ರವಾದ ಕೋಣೆಯನ್ನು ಆರಿಸಿ ಮೇಲೆ ಹೇಳಿದಂತೆ ವ್ಯವಸ್ಥೆ ಮಾಡುವದು ಚೆನ್ನ. ಇದರಿಂದ ಸಾರ್ವಜನಿಕ ಆಶ್ರಯ ಸ್ಥಾನಗಳ ವ್ಯವಸ್ಥೆಯೇ ಅನವಶ್ಯಕವಾಗುವದು.

ಮನೆಯವರೆಲ್ಲರೂ ಒಂದೇ ಕೋಣೆಯಲ್ಲಿ ಕೂಡುವದಕ್ಕಿಂತ ಎರಡು ಕೋಣೆಗಳನ್ನು ಮಾಡಿ ಎರಡು ಗುಂಪುಗಳಾಗಿ ಕೂಡುವದು ಒಳ್ಳೆಯದು. ಏಕಂದರೆ ಒಂದು ಕೋಣೆಗೆ ಅಪಾಯ ಒದಗಿದರೂ ಮತ್ತೊಂದು ಕೋಣೆಯವರಾದರೂ ಸುರಕ್ಷಿತವಿರುವರು

ಕೋಣೆಯಲ್ಲಿ ಕೆಲವು ಅತ್ಯವಶ್ಯವಾದ ಸಾಮಾನುಗಳನ್ನು ಇಡುವದು ಒಳ್ಳೆಯದು ಅವು:—

ಒಂದು ದಿವಸ ಸಾಕಾಗುವಷ್ಟು ಊಟಸಾಮಗ್ರಿ, ನೀರು, ಸಣ್ಣ ಮಕ್ಕಳಿಗೆ ಬೇಕಾಗುವ ಹಾಲು ಮೊದಲಾದವುಗಳು. ಒಂದು ವೇಳೆ ವಿಮಾನದಾಳಿ ಬಹಳ ಹೊತ್ತು ನಡೆದರೆ ಇಲ್ಲವೆ ಮನೆ ಮುರಿದು ಬಿದ್ದು ನೀವು ಒಳಗೆ ಸಿಕ್ಕುಬಿದ್ದರೆ ಇವು ಅತ್ಯವಶ್ಯ. ನೀರು, ಅನ್ನ ಮುಂತಾ ದವುಗಳನ್ನು ಸದಾ ಇಟ್ಟದ್ದು ದಿನಾಲು ಅವುಗಳನ್ನು ಬದಲು ಮಾಡು ತ್ತಿರಿ. ಅನ್ನಕ್ಕಿಂತ ಬಹಳ ದಿವಸ ಬಾಳುವ ಉಂಡೆ, ಚೂಡ, ಬಿಸ್ಕೀಟು ಬ್ರೆಡ್ಡು ಮುಂತಾದ ತಿಂಡಿ ಸಾಮಾನುಗಳನ್ನು ಇಟ್ಟುಕೊಂಡಿರುವದು ಛಲೋದು.

ಒಂದು ಕೊಡಲಿ ಮತ್ತು ಕುಠಾರಿ. ಒಂದು ವೇಳೆ ನೀವು

ಒಳಗೆ ಸಿಕ್ಕುಬಿದ್ದರೆ ಪಾರಾಗಲು ಇವು ಅವಶ್ಯ.

ಬೆಂಕಿ ಹೊತ್ತಿಸುವ ಸಾಧನಗಳು. ಒಂದು ಬ್ಯಾಟರಿ, ಮೇಣ ಬತ್ತಿ ಮತ್ತು ಕಡ್ಡಿಯ ಪೆಟ್ಟಿಗೆ. ವಿದ್ಯುತ್‌ದೀಪಗಳ ಮೇಲೆ ಅವ ಲಂಬಿಸಬೇಡಿ. ಏಕಂದರೆ ಬಾಂಬು ಹೊಡತದಿಂದ ಅವು ಹೆಚ್ಚು ಕಡಿಮೆಯಾಗುವ ಸಂಭವವುಂಟು.

ಬೇಜಾರು ಬಂದರೆ ವೇಳೆಕಳೆಯಲು ಕೆಲವು ಸಾಧನಗಳು:—

ಪುಸ್ತಕ. ಗ್ರಾಮೋಫೋನು ಮುಂತಾದವುಗಳು.

ಒಟ್ಟಿನಲ್ಲಿ ನಿಮಗೆ ಯಾವದು ಅತ್ಯವಶ್ಯವೆನಿಸುತ್ತದೆಯೋ ಅದೆಲ್ಲವನ್ನೂ ಇಟ್ಟುಕೊಳ್ಳಿ. ಆದರೆ ಅನ್ಯಥಾ ಕೋಣೆಯ ತುಂಬ ಸಾಮಾನು ಹರವಬೇಡಿ. ಆ ಕೋಣೆ ಮನುಷ್ಯರಿಗಾಗಿ ಏರ್ಪಡಿಸಿದ್ದು ಸಾಮಾನಿಗಾಗಿ ಅಲ್ಲ.

ಈ ರೀತಿ ಸುಸಜ್ಜಿತವಾದ ಕೋಣೆಯೊಂದಿದ್ದರೆ ವಿಮಾನದಾಳಿ ಯಾವಾಗ ಆದರೂ ನೀವು ಭಯಪಡಬೇಕಾದ ಕಾರಣವಿಲ್ಲ.

ಇಲ್ಲಿ ಒಂದು ಮಾತನ್ನು ಒತ್ತಿ ಹೇಳುವದು ಅವಶ್ಯ. ಮೇಲೆ ಹೇಳಿದ್ದೆಲ್ಲ ರಕ್ಷಣೋಪಾಯಗಳು ಮಾತ್ರ ಅವು ಬಾಂಬಿನ ಮಳೆ ಯನ್ನು ತಡೆಯಲಾರವು. ಬಾಂಬು ಬಿದ್ದರೆ ಅವುಗಳಿಂದಾಗುವ ಹಾನಿಗಳನ್ನು ತಡೆಯಲು, ಕಡಿಮೆ ಮಾಡಲು ಇಷ್ಟೆಲ್ಲ ಉಪಾಯ. ಆದರೆ ಬಾಂಬು ನೇರವಾಗಿ ನಿಮ್ಮ ಕೋಣೆಯ ಮೇಲೆಯೇ ಬಿದ್ದರೆ ನಿಮ್ಮನ್ನು ಯಾರೂ ಉಳಿಸಲಾರರು. ಆದರೆ ಈ ರೀತಿ ನೇರವಾಗಿ ಬಾಂಬು ಬೀಳುವದು ತೀರ ಕಡಿಮೆ. ಅದರಿಂದ ನೀವು ಧೈರ್ಯ ಗೆಡುವ ಕಾರಣವಿಲ್ಲ !

ಮೇಲೆ ಹೇಳಿದಂತೆ ಸುಸಜ್ಜಿತವಾದ ಕೋಣೆಯನ್ನು ಇನ್ನು

ಮುಂದೆ ನಿಮ್ಮ 'ಆಶ್ರಯಸ್ಥಾನ' ಎಂದು ಕರೆಯೋಣ.

ಈ ಪುಸ್ತಕ ಓದಿದೊಡನೆಯೇ ಈ ಪ್ರಕಾರದ ಆಶ್ರಯಸ್ಥಾನಗಳನ್ನು ಕಟ್ಟಿಕೊಳ್ಳುವದು ನಿಮ್ಮ ಆದ್ಯ ಕರ್ತವ್ಯ.

ಎರಡನೇಯದಾಗಿ ಬಾಂಬಿನ ಚೂರುಗಳಿಗಿಂತ ದೊಡ್ಡ ಶತ್ರುವೆಂದರೆ ಕಾಜು. ಬಾಂಬು ಬಿದ್ದ ರಭಸಕ್ಕೆ ಮತ್ತು ಗಾಳಿಯ ಒತ್ತಡಕ್ಕೆ ಕಿಡಕಿಗೆ ತಗಲಿಸಿದ ಕಾಜು ನೂರಾರು ಚೂರುಗಳಾಗಿ ಒಡೆದು ಅತಿ ವೇಗದಿಂದ ಸುತ್ತಲೂ ಪಸರಿಸುವವು. ಈ ಗಾಜಿನ ಚೂರುಗಳು ಬಾಂಬಿದ ಚೂರುಗಳಿಗಿಂತಲೂ ಭಯಂಕರ. ಒಂದು ಕ್ಷಣದಲ್ಲಿ ಮನುಷ್ಯನ ಮೈಯನ್ನು ಭೇದಿಸಿಬಿಡುವವು. ಆದರಿಂದ ನಿಮ್ಮ ಮನೆಯ ಯಾವ ಭಾಗದಲ್ಲಿ ಗಾಜನ್ನು ಹಾಕಿದ್ದರೂ ಅದನ್ನು ಕೂಡಲೇ ತೆಗೆದುಬಿಡಿ. ತೆಗೆಯಲು ಸಾಧ್ಯವಿಲ್ಲದಿದ್ದರೆ ಕಾಜಿನ ಚೂರುಗಳು ಹಾರದಂತೆ ಅದರ ಮೇಲೆ ಒಂದು ಇಂಚು ದಪ್ಪ ತಂತಿಯ ಹೊದಿಕೆ(Wire gauge) ಯನ್ನು ಹಾಕಿ. ಈ ಹೊದಿಕೆ ಎರಡೂ ಮಗ್ಗಲೂ ಇರಬೇಕು ಅಥವಾ ಕಾಜುಗಳನ್ನು ರಕ್ಷಿಸುವದಕ್ಕೆಂದು ಕಟ್ಟಿಗೆಯ ಹೊದಿಕೆಯನ್ನು ಮಾಡಿಸಿ. ಬಾಂಬುದಾಳಿಯ ಎಚ್ಚರಿಕೆ ಕೊಟ್ಟೊಡನೆಯೇ ಈ ಹೊದಿಕೆಗಳನ್ನು ಕಾಜಿನ ಮೇಲೆ ಕೂಡಿಸಿದರಾಯಿತು. ಆದರೆ ಎಲ್ಲ ಕಾಜುಗಳನ್ನು ತೆಗೆಯುವದೇ ಸರ್ವೋತ್ತಮ.

ಇವೆರಡು ಎಚ್ಚರಿಕೆಗಳನ್ನು ಪಾಲಿಸಿದರೆ ನಿಮ್ಮ ಮನೆ ಬಾಂಬುದಾಳಿ ತಡೆಯುವದಕ್ಕೆ ಸಾಧಾರಣವಾಗಿ ಸಿದ್ಧವಾದಂತಾಯಿತು.

ಬಾಂಬುದಾಳಿ ನಡೆದಾಗ್ಗೆ ನೀವು ಪಾಲಿಸಬೇಕಾದ ನಿಯಮಗಳು:

ನೀವು ಮನೆಯಲ್ಲಿದ್ದರೆ:—

(೧) ಬಾಂಬುದಾಳಿ ಎಚ್ಚರಿಕೆ ಕೊಟ್ಟಕೂಡಲೇ ಗಾಬರಿಯಾಗಬೇಡಿ. ಗಾಬರಿ ಹೆದರಿಕೆಗಳೇ ನಿಮ್ಮ ನಿಜವಾದ ವೈರಿಗಳು.

ಶಾಂತತೆಯಿಂದ ಕೆಲಸಮಾಡಿದರೆ ಆಗುವಷ್ಟು ಕೆಲಸ ಗಾಬರಿಯಿಂದ ಆಗುವದಿಲ್ಲ. ಎಚ್ಚರಿಕೆ ಕೊಟ್ಟಮೇಲೆ ನಿಮಗೆ ಐದು ಮಿನಿಟು ಗಳಿಗೆ ಮೇಲ್ಪಟ್ಟು ವೇಳೆ ಸಿಕ್ಕುವದು. ಇಷ್ಟು ಸಮಯದಲ್ಲಿ ನೀವು ನಿಮ್ಮ ಮನೆಯವರೆಲ್ಲರನ್ನೂ ಆಶ್ರಯದ ಕೋಣೆಗೆ ಸಾಗಿಸಬಲ್ಲಿರಿ.

(೨) ನೀವು ಕೋಣೆಯನ್ನು ಕಟ್ಟಿಕೊಂಡಿರದಿದ್ದರೆ ಶಾಂತ ರೀತಿಯಿಂದ ಅತಿ ಸಮೀಪದ ಆಶ್ರಯಸ್ಥಾನಕ್ಕೆ ಹೋಗಿ ಆದರೆ ಬಾಂಬುದಾಳಿ ಸುರುವಾಗಿದ್ದರೆ ಮಾತ್ರ ಸುತರಾಂ ಹೊರಗೆ ಬೀಳಬೇಡಿ· ಮನೆ ಎಂತಹದೇ ಇರಲಿ. ಬೈಲಿಗಿಂತಲೂ ಉತ್ತಮ. ಹೊರಗೆ ಹೋದರೆ ಬಾಂಬಿನ ಚೂರುಗಳ ಭಯ, ಒತ್ತಡಗಳ ಭಯ ಉಂಟು ಆದರಿಂದ ಹೊರಗೆ ಹೋಗುವ ಸಾಹಸ ಮಾಡಬೇಡಿ

(೩) ಬಾಂಬುದಾಳಿ ನಡೆದ ಕಾಲಕ್ಕೆ ಸುತರಾಂ ಹೊರಗೆ ನೋಡಬೇಡಿ ಬಾಂಬಿನ ಚೂರುಗಳು ನಿಮ್ಮ ಕಿಡಕಿಗಳೊಳಗಿಂದ ಹಾರಿಬರುವ ಸಂಭವ ಹೆಚ್ಚು ಆದರಿಂದು ಹೊರಗೆ ನೋಡುವ ಸಾಹಸಕ್ಕೆ ಕೈಹಾಕಬಾರದು.

ಎಚ್ಚರಿಕೆ ಕೊಟ್ಟಕೂಡಲೆ ಕಿಡಕಿಗೆ ಕಾಜುಗಳಿದ್ದರೆ ಅದಕ್ಕೆ ಹೊದಿಕೆಯನ್ನು ಹಾಕಿ ಕಿಡಕಿಯ ಬಾಗಿಲನ್ನು ತೆರೆದಿಡಬೇಕು. ಆದರೆ ಕಿಡಕಿಯ ಮೇಲೆ ಒಂದು ಪರದೆ ಬಿಟ್ಟರೆ ಒಳಿತು. ಇದು ಬಾಂಬಿನ ಚೂರುಗಳನ್ನು ತಡೆಯುವದಿಲ್ಲವಾದರೂ ನಿಮ್ಮ ಹೊರಗೆ ನೋಡುವ ಕುತೂಹಲವನ್ನು ತಡೆಯುವದು. ಎಂಥ ಪ್ರಸಂಗ ಬಂದರೂ ಬೀದಿಯೊಳಗೆ ಮೋರೆ ಹಾಕಬಾರದು.

(೪) ಸಕಾಲದಲ್ಲಿ ನಿಮಗೆ ನಿಮ್ಮ ಆಶ್ರಯಸ್ಥಾನಗಳಲ್ಲಿ ಸೇರಿಕೊಳ್ಳಲು ಆಗದಿದ್ದಲ್ಲಿ ಎರಡು ಗೋಡೆಗಳು ಹೊಂದಿಕೊಂಡ ಮೂಲೆಯಲ್ಲಿ ಅಡಗಿಕೊಂಡು ನಿಲ್ಲಿ. ಗೋಡೆಯ ಮೂಲೆಗಳು ಭದ್ರವಾದ

ಸ್ಥಳಗಳು. ಇಡೀ ಇಮಾರತು ಬಿದ್ದರೂ ಗೋಡೆಯ ಮೂಲೆಗಳು ಮಾತ್ರ ನಿಂತ ಉದಾಹರಣೆಗಳು ಅದೆಷ್ಟೋ ಉಂಟು. ಇದಲ್ಲದೆ ಗೋಡೆಯ ಮೂಲೆಗಳು ನಿಮ್ಮನ್ನು ಬಾಂಬಿನ ಇಲ್ಲವೆ ಕಾಜಿನ ಚೂರುಗಳಿಂದ ಕಾಪಾಡುತ್ತವೆ. ಸಾಧ್ಯವಿದ್ದರೆ ಒಂದು ಮೇಜನ್ನೋ ಬಾಕನ್ನೋ ನಿಮ್ಮ ಎದುರಿಗೆ ಢಾಲಿನಂತೆ ಇಟ್ಟುಕೊಳ್ಳಿ. ನೈ ಮೇಲೆ ಬೀಳಬಹುದಾದ ಬಾಂಬು ಚೂರುಗಳು, ಇಟ್ಟಂಗೆ ತುಂಡುಗಳಿಂದ ಇದು ನಿಮ್ಮನ್ನು ಕಾಪಾಡುವದು.

(೫) ಬಾಂಬು ದಾಳಿ ಎಚ್ಚರಿಕೆಯಾದಾಗ್ಗೆ ನಿಮ್ಮ ಪೈಕಿ ಯಾರಾದರೂ ಹೊರಗೆ ಹೋಗಿದ್ದರೆ ಅವರನ್ನು ಅರಸುವದಕ್ಕಾಗಿ ಬೀದಿತುಂಬ ತಿರುಗಾಡಬೇಡಿ ಬಾಂಬುದಾಳಿ ಎಚ್ಚರಿಕೆಯಾದಾಗ್ಗೆ ಏನು ಮಾಡಬೇಕೆಂಬುದನ್ನು ಪ್ರತಿಯೊಬ್ಬರಿಗೂ ಮೊದಲೇ ತಿಳಿಸಿರಬೇಕು. ಹೊರಗಿನವರು ತಮ್ಮ ಕಾಳಜಿ ವಹಿಸಿರುವರೆಂಬ ಧೈರ್ಯದಿಂದ ನೀವು ಒಳಗೆಯೇ ಇರ್ರಿ. ನೀವು ಹೊರಬಿದ್ದರೆ ಅವರಿಗೆ ಸಹಾಯವಂತೂ ಆಗುವದಿಲ್ಲ. ಇಷ್ಟೇ ಅಲ್ಲ. ಬಾಂಬು ದಾಳಿಯಿಂದ ನಿಮ್ಮ ಪ್ರಾಣಕ್ಕೇ ಅಪಾಯವುಂಟು.

(೬)ಒಂದು ವೇಳೆ ನಿಮ್ಮ ಮನೆಯ ಮೇಲೆ ನೇರವಾಗಿ ಬಾಂಬು ಬಿದ್ದುಬಿಟ್ಟರೆ ಒಮ್ಮೆಲೇ ಮನೆಯನ್ನು ತ್ಯಜಿಸಿ ಹೊರಗೆ ಬಂದು ಬಿಡಬೇಡಿ. ಒಂದೇ ಹೊಡತಕ್ಕೆ ಮನೆ ನೆಲಸಮವಾಗುವದಿಲ್ಲ. ಮೂಲೆಯಲ್ಲಿ ನಿಂತಿದ್ದರೆ ಬೀಳುವ ಮನೆಯಿಂದಲೂ ನಿಮಗೆ ಬಾಧಕವಿಲ್ಲ ಪುನಃ ಎರಡನೇ ಬಾರಿ ನಿಮ್ಮ ಮನೆಯ ಮೇಲೆಯೇ ಬಾಂಬು ಬೀಳುವದು ತೀರ ಅಪರೂಪ. ಅದರಿಂದ ಒಮ್ಮೆಲೇ ಹೆದರಿ ಹುಚ್ಚೆದ್ದು ಎಲ್ಲರೂ ಹೊರಗೆ ಬರಬಾರದು. ಒಳಗೆ ಹೀಗಿದ್ದರೂ ಹೊರಗಿನಕ್ಕಿಂತ ಒಳಗೆಯೇ ಹೆಚ್ಚು ಸುರಕ್ಷಿತವೆಂಬ ಮಾತನ್ನು ಎಂದೂ ಮರೆಯ ಬೇಡಿ. ಆದರೆ ಒಂದು ವೇಳೆ ಮನೆಗೆ ಪೂರ್ಣ ಬೆಂಕಿ ಹೊತ್ತಿಕೊಂಡಿದ್ದರೆ ಇಲ್ಲವೇ ಪೂರ್ಣ ಮುರಿದು ಬೀಳಲಿಕ್ಕಾಗಿದ್ದರೆ— ಆಗ ಮಾತ್ರ ನೀವು

ನೆರಮನೆಯಲ್ಲೋ ಆಶ್ರಯಸ್ಥಾನದಲ್ಲೋ ಹೋಗಿ ಸೇರಿಕೊಳ್ಳಿ.

(೭) ರಾತ್ರಿಯ ವೇಳೆ ದಾಳಿಯಾದರೆ ನೀವು ನಿಮ್ಮ ಕೋಣೆಯಲ್ಲಿ ಆಶ್ರಯ ತೆಗೆದುಕೊಳ್ಳುವ ಮೊದಲು ದೀಪವನ್ನು ಆರಿಸಿ. ನಿಮ್ಮ ಮನೆಯ ದೀಪ ಮೇಲೆ ವೈರಿಗೆ ಕಂಡರೆ ಅವನಿಗೆ ನಿಮ್ಮ ಪಟ್ಟಣದ, ಅದಕ್ಕೂ ಹೆಚ್ಚಿನದೆಂದರೆ ನಿಮ್ಮ ಮನೆಯ ಗುರುತು ಸಿಕ್ಕುವದು. ಅದರಿಂದ ದೀಪವನ್ನು ಮೊದಲು ಆರಿಸಬೇಕು. ಇಲೆಕ್ಟ್ರಿಕ್ ದೀಪವಿದ್ದರೆ ಮೇನ ಸ್ವಿಚ್‌ನ್ನು ಬಂದು ಮಾಡಿ. ಏಕಂದರೆ ನಿಮ್ಮ ಮನೆಗೇನಾದರೂ ಅಪಾಯ ಸಂಭವಿಸಿದರೆ ನಿಮ್ಮ ಸಹಾಯಕ್ಕೆ ಬಂದವರಿಗೆ ಅಸ್ತವ್ಯಸ್ತವಾದ ವಿದ್ಯುತ್ ತಂತಿಗಳಿಂದ ಶಾಕ್ ಬಡಿಯುವ ಸಂಭವವಿದೆ. ಮನೆಯ ಬಾಗಿಲನ್ನು ಮುಂದೆಮಾಡಿ; ಆದರೆ ಚಿಲಕವನ್ನು ಹಾಕಬೇಡಿ. ಏಕಂದರೆ ಒಳಗೇನಾದರೂ ಅಪಾಯ ಸಂಭವಿಸಿದರೆ ಹೊರಗಿನವರು ನಿಮ್ಮ ಸಹಾಯಕ್ಕೆ ಒಮ್ಮಿಂದೊಮ್ಮೆ ಬರಲು ಅನುಕೂಲವಾಗುವದು. ಇಲ್ಲದಿದ್ದರೆ ಅವರು ನಿಮ್ಮ ಬಾಗಿಲು ಒಡೆಯುತ್ತ ಕೂಡಬೇಕಾಗುವದು.

(೮) ರಾತ್ರಿ ನೀವು ಮಲಗಿಕೊಂಡಾಗ ವಿಮಾನದಾಳಿಯಾದರೆ ಒಮ್ಮೆಲೇ ಎಚ್ಚತ್ತು ಹುಚ್ಚರಂತೆ ಓಡಾಡಬೇಡಿ. ಶಾಂತರೀತಿಯಿಂದ ಮಲಗಿದಲ್ಲಿಯೇ ಮಲಗಿರಿ. ಇಲ್ಲವೇ ಮಂಚದ ಬುಡಕ್ಕೆ ಸೇರಿಕೊಳ್ಳಿ. ಮಂಚದ ಇಲ್ಲವೆ ಮೇಜಿನ ಬುಡಕ್ಕೆ ಸೇರಿಕೊಂಡು ಪ್ರಾಣಗಳನ್ನು ಉಳಿಸಿಕೊಂಡ ಸಾವಿರಾರು ಉದಾಹರಣೆಗಳುಂಟು.

(೯) ಕೊನೆಯದಾಗಿ ದಾಳಿ ನಡೆದಾಗ್ಗೆ ನಿಮ್ಮ ಮನೆಗೆ ಬೆಂಕಿ ಬಿದ್ದರೆ ಇಲ್ಲವೆ ನಿಮ್ಮಲ್ಲಿ ಯಾರಿಗಾದರೂ ಅಪಾಯ ಸಂಭವಿಸಿದರೆ ಆಗಿಂದಾಗ್ಗೆ ಸಹಾಯ ಬೇಡಲಿಕ್ಕೆಂದು ಧಾವಿಸಬೇಡಿ. ಏಕಂದರೆ ಹೀಗೆ ಧಾವಿಸುವದರಿಂದ ನಿಮಗೆ ಅಪಾಯವುಂಟು ಇದಲ್ಲದೆ ದಾಳಿ ನಡೆದಾಗ್ಗೆ ನಿಮ್ಮ ಸಹಾಯಕ್ಕೆ ಯಾರೂ ಬರುವದಿಲ್ಲ. ದಾಳಿ ಮುಗಿದ

ಮೇಲೆ ಎ. ಆರ್. ಪಿ. ಕೆಲಸಗಾರರ ಕೆಲಸ ಸುರುವಾಗುವದು. ಅದ ರಿಂದ ದಾಳಿ ಮುಗಿಯುವವರೆಗೆ ನೀವು ತಡೆಯಬೇಕು. ಮತ್ತು ಶಕ್ಯ ವಿದ್ದರೆ ನೀವೇ ಉಪಚಾರ ಮಾಡಬೇಕು ಇದರಿಂದ ಪ್ರತಿಯೊಬ್ಬ ಮನೆಯ ಯಜಮಾನನೂ ಪ್ರಥಮ ಚಿಕಿತ್ಸೆಯನ್ನು ಅಲ್ಪ ಮಟ್ಟಿಗಾ ದರೂ ಅರಿತುಕೊಂಡರಬೇಕು.

(೧೦) ಕೊನೆಯ ಎಚ್ಚರಿಕೆಯೆಂದರೆ 'ಆಲ್ ಕ್ಲಿಯರ್' ಸೂಚ ನೆಯಾಗುವವರೆಗೆ ನೀವು ಹಿಡಿದ ಸ್ಥಳವನ್ನು ಬಿಡಕೂಡದು. ಹೊರಗೆ ಮೋರೆ ಹಾಕಕೂಡದು. ನೀವು ಕುಳಿತ ಸ್ಥಳವೇ ಜಗತ್ತೆಂದು ಭಾವಿಸಿ ಹೊರಗೆ ಏನೂ ನಡೆಯದಿದ್ದಂತೆ ಸುಮ್ಮನೆ ಕುಳಿತಿರಬೇಕು.

ನೀವು ಮನೆಯ ಹೊರಗೆ ಇಲ್ಲವೆ ಬೈಲಿನಲ್ಲಿದ್ದಾಗ:—

(೧೧) ಬೈಲು ವಾಸಿಯೋ ಇಲ್ಲವೇ ಮನೆಯ ಆಶ್ರಯ ವಾಸಿಯೋ.

" ಮನೆಯೊಳಗಿದ್ದರೆ ಮನೆ ಮುರಿದು ಬೀಳುವ ಸಂಭವ ಹೆಚ್ಚು. ಇಲ್ಲವೆ ಮನೆಗೆ ಬೆಂಕಿ ಬೀಳುವ ಸಂಭವ ಹೆಚ್ಚು. ಅದರಿಂದ ಮನೆ ಯೊಳಗಿರುವದಕ್ಕಿಂತ ಬೈಲಿನಲ್ಲಿಯೇ ಇರುವದು ವಾಸಿ. " ಎಂದು ಅದೆಷ್ಟೋ ಜನರ ಭಾವನೆ. ಆದರೆ ಈ ಭಾವನೆ ಸರಿಯಾದುದಲ್ಲ. ಏಕಂದರೆ:

ಮನೆಯಲ್ಲಿದ್ದರೆ ವೈರಿಗಳಿಗೆ ನೀವು ಕಾಣಿಸುವದಿಲ್ಲ. ನೀವು ಬೈಲಿನಲ್ಲಿದ್ದರೆ ಮತ್ತು ನಿಮ್ಮ ಮೈಮೇಲೆ ಒಂದೇ ಒಂದು ತುಂಡು ಬಿಳೀ ವಸ್ತ್ರವಿದ್ದರೆ ನೀವು ವೈರಿಗೆ ಮೇಲಿನಿಂದಲೇ ಕಾಣುವಿರಿ. ಅದರಿಂದ ವೈರಿಯು ನಿಮ್ಮ ಮೇಲೆ ಬೇಕಂತಲೇ ಬಾಂಬು ಮಳೆ ಸುರಿಸಬಹುದು. ಇಲ್ಲವೆ ಮಶಿನ್‌ಗನ್ನು ಗುಂಡುಗಳಿಂದ ಹೊಡೆಯಬಹುದು.

ಬಾಂಬು ಚೂರುಗಳಿಂದ ಮತ್ತು ಕ್ರೂರವಾಗಿ ಪಸರಿಸುವ

ಗಾಜಿನ ಚೂರು ಮುಂತಾದವುಗಳಿಂದ ಮನೆಯು ನಿಮಗೆ ಆಶ್ರಯ ಕೊಡುವದು.

ವೈರಿಯು ಒಂದು ವೇಳೆ ದ್ರವವಿಷವನ್ನು ತುಂತುರುಗಳಾಗಿ ಮೇಲಿನಿಂದ ಸಿಂಪಡಿಸುತ್ತಿದ್ದರೆ ಮನೆಯು ನಿಮಗೆ ಆಶ್ರಯವೀಯುವದು.

ವೈರಿವಿಮಾನಗಳು ಬಂದ ಕೂಡಲೇ ನಮ್ಮ ಆ್ಯಂಟಿ ಏರಕ್ರಾಫ್ಟ್ ದಳದವರು ವಿಮಾನುಗಳ ಮೇಲೆ ಗುಂಡು ಹಾರಿಸಲು ಮೊದಲುಮಾಡುವರು. ಈ ಗುಂಡುಗಳು ಆಕಾಶದಲ್ಲಿ ಹೋಗಿ ಪುನಃ ತಿರುಗಿ ವೇಗದಿಂದ ಭೂಮಿಗೆ ಬೀಳುವವು. ಇವು ಬಹು ಸಣ್ಣ ಗುಂಡುಗಳಿದ್ದರೂ ಬಹು ಭರದಿಂದ ಬೀಳುವದರಿಂದ ಇವುಗಳಿಂದ ಮನುಷ್ಯನಿಗೆ ಅಪಾಯವುಂಟು ಒಂದು ವೇಳೆ ತಲೆಯ ಮೇಲೆ ಬಿದ್ದರೆ ತಲೆ ಒಡೆಯುವದು ಖಂಡಿತ ಬೈಲಿನಲ್ಲಿದ್ದರೆ ಹೀಗೆ ತಲೆ ಒಡಿಸಿಕೊಳ್ಳುವ ಅಪಾಯವುಂಟು. ಆದರೆ ಮನೆಯ ಆಶ್ರಯದಲ್ಲಿದ್ದರೆ ಛಾವಣಿಯಿಂದ ಈ ಅಪಾಯ ತಪ್ಪುವದು.

ಇವನ್ನೆಲ್ಲ ವಿಚಾರಿಸಲಾಗಿ ಬೈಲಿಗಿಂತ ಮನೆಯ ಆಶ್ರಯವು ಸಾವಿರ ಪಾಲು ಬೇಕೆಂದು ಸಿದ್ಧವಾಗುವದು. ಅದರಿಂದಲೇ ಮನೆಯನ್ನು ಬಿಟ್ಟು ಹೊರಗೆ ಬರದಿರಲು ಒತ್ತಿ ಒತ್ತಿ ಹೇಳಿದ್ದು.

೧೨ ಅದರಿಂದ ನೀವು ರಸ್ತೆಯಲ್ಲಿ ಇಲ್ಲವೆ ಬೈಲಿನಲ್ಲಿದ್ದಾಗ್ಗೆ ವಿಮಾನದಾಳಿಯ ಎಚ್ಚರಿಕೆಯಾದರೆ ಆದಷ್ಟು ಬೇಗ ಆಶ್ರಯ ಸ್ಥಾನವನ್ನು ಸೇರಿರಿ. ಬೈಲಿನಲ್ಲಿಯೇ ನಿಂತು “ ವಿಮಾನಗಳು ಯಾರವು; ಬಾಂಬು ಹೇಗೆ ಬೀಳುತ್ತವೆ ” ಎಂಬ ಕುತೂಹಲದಿಂದ ಆಕಾಶದ ಕಡೆ ಮೋರೆ ಮಾಡಿ ನಿಲ್ಲಬೇಡಿರಿ. ಹೀಗೆ ನಿಂತರೆ ಮುಂದೆ ಸರಿಯಾದ ಕಾಲದಲ್ಲಿ ನೀವು ಆಶ್ರಯಸ್ಥಾನವನ್ನು ಸೇರಲಾರಿರಿ. ಇಷ್ಟೇ ಅಲ್ಲ; ನೀವು ಆಶ್ರಯಸ್ಥಾನ ಸೇರುವದರೊಳಗಾಗಿ ಅಪಾಯಕ್ಕೊಳಗಾಗಬಹುದು. ಈಗಿನ ವಿಮಾನಗಳ ವೇಗ ತಾಸಿಗೆ ೨೫೦ ಮೈಲಿಗೆ

ಮೇಲ್ಪಟ್ಟು ಇರುವದು. ಅದರಿಂದ ವೈರಿಯು ತಾನು ಇನ್ನೂ ಪಟ್ಟಣದಿಂದ ನೂರು ನಾಲ್ಕು ಮೈಲು ದೂರದಲ್ಲಿರುವಾಗಲೇ ಬಾಂಬುಗಳನ್ನು ಚೆಲ್ಲುವನು. ಅದರಿಂದ ವಿಮಾನವು ನಿಮ್ಮ ತಲೆಯ ಮೇಲೆ ಬರುವ ಪೂರ್ವದಲ್ಲಿಯೇ ಬಾಂಬುಗಳು ನಿಮ್ಮ ತಲೆಯ ಮೇಲೆ ಬೀಳಬಹುದು ಅದರಿಂದ ನೀವು ಆದಷ್ಟು ತೀವ್ರ ರಸ್ತೆಯನ್ನು ಬಿಟ್ಟು ಆಶ್ರಯವನ್ನು ತೆಗೆದುಕೊಳ್ಳಬೇಕು.

೧೩ ಮನೆ ದೂರವಿದ್ದರೆ ಎಚ್ಚರಿಕೆಯಾದಕೂಡಲೇ ಮನೆಗೆ ಓಡುವ ಪ್ರಯತ್ನ ಮಾಡಬೇಡಿ. ಏಕೆಂದರೆ ನೀವು ದಾಳಿಯಲ್ಲಿ ಸಿಕ್ಕು ಬೀಳುವ ಸಂಭವವಿದೆ. ಅದರಿಂದ ಹತ್ತರದಲ್ಲಿಯೇ ಇದ್ದ ಆಶ್ರಯ ಸ್ಥಾನಕ್ಕೆ ಹೋಗಿ. ಇಲ್ಲವೆ ಅಕ್ಕಪಕ್ಕದಲ್ಲಿದ್ದ ಮನೆಯಲ್ಲಾದರೂ ಸೇರಿರಿ. ಇಂತಹ ಪ್ರಸಂಗದಲ್ಲಿ ಪರರ ಮನೆಯಲ್ಲಿ ಸೇರಲು ನಿಮಗೆ ಸಂಪೂರ್ಣ ಅಧಿಕಾರವುಂಟು. ಮತ್ತು ಪ್ರತಿಯೊಬ್ಬ ಮನೆಯವರು ದಯಾದೃಷ್ಟಿಯಿಂದ ದಾಳಿಗೆ ಸಿಲುಕುವ ಭಯವಿದ್ದವರನ್ನು ತಮ್ಮ ಮನೆಯಲ್ಲಿ ಕರೆದುಕೊಂಡು ಜನರ ಪ್ರಾಣಗಳನ್ನು ಉಳಿಸಬೇಕು.

೧೪ ಹತ್ತಿರದಲ್ಲಿ ಮನೆಯು ಇಲ್ಲದಿದ್ದರೆ ಓಡಿ ಹೋಗುವ ಪ್ರಯತ್ನ ಮಾಡಬೇಡಿ. ಹೀಗೆ ಮಾಡಿದರೆ ನೀವು ಖಂಡಿತ ಬಾಂಬಿನ ಚೂರುಗಳಿಗೆ ಆಹುತಿಯಾಗುವಿರಿ. ಅದರಿಂದ ಕೆಳಗೆ ಮೋರೆಮಾಡಿ ಭೂಮಿಯ ಮೇಲೆ ಅಂಗಾತಾಗಿ ಬಿದ್ದುಕೊಳ್ಳಿರಿ. ಇದರಿಂದ ಹಾರಿ ಬರುವ ಬಾಂಬು ಚೂರುಗಳಿಂದ ನಿಮ್ಮ ದೇಹ ರಕ್ಷಣೆಯಾಗುವದು. ಕೆಳಗೆ ಮಲಗಿದವರು ಎರಡೂ ಕೈಯ ಹೆಬ್ಬಟ್ಟುಗಳನ್ನು ಕಿವಿಯಲ್ಲಿ ಗಟ್ಟಿಯಾಗಿ ಇಟ್ಟುಕೊಂಡು ಉಳಿದ ಬಟ್ಟುಗಳನ್ನು ಕುತ್ತಿಗೆಯ ಹಿಂಬಾಜು ಜೋಡಿಸಿ ಕುತ್ತಿಗೆಯ ಹಿಂಭಾಗಕ್ಕೆ ಮಿದುಳಿನ ಬಾಲ ಹಾಯ್ದು ಹೋಗಿರುವ ಸ್ಥಳಕ್ಕೆ ರಕ್ಷಣೆ ಸಿಗುವಂತೆ ಮಾಡಿಕೊಳ್ಳಿರಿ. ಇದರಿಂದ ಕಿವಿಯ ಪಟಲಗಳ ರಕ್ಷಣೆಯಾಗುವದಲ್ಲದೆ ಬಹು ಸೂಕ್ಷ್ಮವಾದ ಮಿದುಳಿನ ಬಾಲದ ರಕ್ಷಣೆಯು ಆಗುವದು.

ಪುಪ್ಪುಸದ ಮೇಲೆ ಹೆಚ್ಚು ಒತ್ತಡವು ಬೀಳದಂತೆ ಬಾಯಿ ತೆರೆದುಕೊಂಡು ಮಲಗುವದು ಉತ್ತಮ. ಆದರೆ ಬಾಂಬು ಸ್ಫೋಟವಾದ ರಭಸಕ್ಕೆ ನಮ್ಮ ಬಾಯಿ ತನ್ನಷ್ಟಕ್ಕೆ ತಾನೇ ಮುಚ್ಚಿಬಿಡುವ ಸಂಭವವುಂಟು. ಹೀಗಾಗಬಾರದೆಂದು ಹಲ್ಲಿನಲ್ಲಿ ಕರವಸ್ತ್ರವನ್ನಾಗಲಿ ಇಲ್ಲವೇ ಒಂದು ರಬ್ಬರಿನ ಚೂರನ್ನಾಗಲಿ ಇಟ್ಟುಕೊಳ್ಳುವದು ಮೇಲು. ಪೆನ್ಸಿಲು ಮೊದಲಾದ ಕಠಿಣ ಪದಾರ್ಥಗಳನ್ನಿಟ್ಟುಕೊಂಡರೆ ಹಲ್ಲಿಗೆ ಅಪಾಯವಾಗುವ ಸಂಭವವಿರುವದರಿಂದ ಮೆತ್ತನೆಯ ಪದಾರ್ಥಗಳನ್ನಿಟ್ಟುಕೊಳ್ಳುವದು ವಾಸಿ.

೧೫ ಕಠಿಣವಾದ ಗೋಡೆಗಳಿಗೆ ತಾಗಿ ಮಲಗಿಕೊಳ್ಳಬೇಡಿ. ಏಕಂದರೆ ಭೂಮಿಯು ಕಂಪಿಸಿದಾಗ ಗೋಡೆಯೂ ಅದರುವದರಿಂದ ಅದರಿಂದ ನಿಮ್ಮ ದೇಹಕ್ಕೆ ಅಪಾಯವಾದೀತು.

ಆದರಿಂದ ನೆಲದಲ್ಲಿರುವ ತಗ್ಗಿನಲ್ಲಿ, ದಿನ್ನೆಯ ಆಶ್ರಯದಲ್ಲಿ, ಪೂಲಿನ ಹಿಂಬಾಜು ಮುಂತಾದ ಬಾಂಬಿನ ಚೂರುಗಳು ಬರಲಾರದ ಸ್ಥಳದಲ್ಲಿ ಬಿದ್ದುಕೊಂಡಿರಬೇಕು. ನೀವು ಹೋಗುತ್ತಿರುವಾಗ್ಗೆ ನಿಮಗೆ ಯಾವದೂ ಸ್ಥಳವು ಸಿಕ್ಕದಿದ್ದರೆ ನೀವು ಚರಂಡಿಯಲ್ಲಿ ಕುಳಿತುಕೊಳ್ಳುವದಕ್ಕೂ ಅಡ್ಡಿಯಿಲ್ಲ. ನಿಜವಾಗಿ ನೋಡಿದರೆ, ಮನೆಗಳು ಬಿದ್ದು ಮುಚ್ಚುವ ಅಂಜಿಕೆಯೊಂದು, ತಟ್ಟನೆ ನೀರು ಏರಿಬಿಡುವ ಅಂಜಿಕೆಯೊಂದು—ಈ ಎರಡು ಅಂಜಿಕೆಗಳು ಇರದಿದ್ದರೆ ಚರಂಡಿಯಷ್ಟು ಉತ್ತಮವಾದ ಆಶ್ರಯಸ್ಥಾನ ಮತ್ತೊಂದಿಲ್ಲ. ಪ್ರತಿಯೊಂದು ಚರಂಡಿಯು ಒಂದು ಟ್ರೆಂಚೆಂದೇ ಹೇಳಬಹುದು.

ಒಟ್ಟಿನಲ್ಲಿ ನೀವು ಮನೆಯ ಹೊರಗಿದ್ದರೆ ರಸ್ತೆಯಿಂದ ದೂರವಾಗಿರಿ. ರಸ್ತೆಯಷ್ಟು ಅಪಾಯಕರವಾದ ಸ್ಥಳ ಮತ್ತೊಂದಿಲ್ಲ. ಏಕಂದರೆ ವೈರಿ ವಿಮಾನು ಅದೆಷ್ಟೇ ಎತ್ತರಲ್ಲಿದ್ದರೂ ಕೆಳಗಿನ ರಸ್ತೆಯು ಅದಕ್ಕೆ ಚನ್ನಾಗಿ—ಬೀಳೀ ಕಾಗದದ ಮೇಲೆ ಕರೀ ಗೆರೆಯೆಳೆದಂತೆ—ಕಾಣುತ್ತದೆ. ಅದರಿಂದ ನೀವು ಆದಷ್ಟು ಜಾಗ್ರತೆ. ರಸ್ತೆಯನ್ನು ಬಿಟ್ಟು ಬರಬೇಕು.

೧೬ ನೀವು ವಾಹನಗಳಲ್ಲಿದ್ದರೆ.

ನೀವು ವಾಹನಗಳ ಮಾಲಕರಿದ್ದರೆ, ಇಲ್ಲವೆ ವಾಹನಗಳಲ್ಲಿದ್ದರೆ ವಿಮಾನ ದಾಳಿಯ ಎಚ್ಚರಿಕೆ ಕೊಡಲ್ಪಟ್ಟ ಕೂಡಲೇ ವಾಹನಗಳಿಂದ ಇಳಿದು ಆಶ್ರಯಸ್ಥಾನವನ್ನು ಸೇರಬೇಕು. ಆದರೆ ವಾಹನಗಳನ್ನು ಹಾಗೆಯೇ ನಡು ರಸ್ತೆಯಲ್ಲಿ ಬಿಟ್ಟಿರಬಾರದು. ಅದರಿಂದ ಜನರ ಓಡಾಟಕ್ಕೆ ನಂತರ ಎ. ಆರ್. ಪಿ. ಸಹಾಯಕರ ಓಡಾಟಕ್ಕೆ ಆತಂಕವಾಗುವದು. ಆದರಿಂದ ಅವುಗಳನ್ನು ರಸ್ತೆಯ ಬಾಜುವಿಗೆ ಬಿಡಬೇಕು. ವಾಹನಕ್ಕೆ ಎತ್ತು ಅಲ್ಲದೆ ಕುದುರೆಗಳನ್ನು ಕಟ್ಟಿದ್ದರೆ ಅವುಗಳನ್ನು ಬಿಚ್ಚಿ (ಕೊಳ್ಳುಹರಿದು) ವಾಹನದ ಹಿಂಬಾಜು ಗಟ್ಟಿಯಾಗಿ ಕಟ್ಟಬೇಕು. ಇಲ್ಲದಿದ್ದರೆ ವಿಮಾನ ದಾಳಿಗೆ ಅಂಜಿ ಈ ಪ್ರಾಣಿಗಳು ರಸ್ತೆಯ ತುಂಬೆಲ್ಲ ಹುಚ್ಚಿದ್ದು ಓಡಾಡಿ ದೊಡ್ಡ ಗೊಂದಲವನ್ನೇ ಎಬ್ಬಿಸಿ ಬಿಡುವವು. ಆದರೆ ಈ ಪ್ರಾಣಿಗಳನ್ನು ವಿದ್ಯುತ್ ತಂತಿಗಳ ಕಂಬಗಳಿಗೆ ಇಲ್ಲವೇ ಪೋಷ್ಟ ಕಂಬಗಳಿಗೆ ಖಂಡಿತ ಕಟ್ಟಬೇಡಿ. ಅದರಿಂದ ಅಪಾಯವುಂಟು.

೧೭ ನೀವು ರೈಲುಗಾಡಿಯಲ್ಲಿದ್ದರೆ.

ರೈಲು ಗಾಡಿಯ ಮೇಲೆ ನೇರವಾಗಿ ಬಾಂಬು ಒಗೆಯುವದು ಸಾಧ್ಯವಿಲ್ಲ. ಆದರಿಂದ ಓಡುತ್ತಿರುವ ರೈಲು ಗಾಡಿಯ ಮೇಲೆ ಮಶಿನ್ ಗನ್ನುಗಳ ಮಳೆ ಕರೆಯುವದುಂಟು. ಅದರಿಂದ ವಿಮಾನ ದಾಳಿಯ ಎಚ್ಚರಿಕೆ ಕೊಟ್ಟ ಕೂಡಲೇ ಮೊದಲು ಕಂಣಿನ ಬಾಗಿಲುಗಳನ್ನೆಲ್ಲ ಇಳಿಸಿ ಕಟ್ಟಿಗೆಯ ಬಾಗಿಲುಗಳನ್ನು ಏರಿಸಿರಿ. ಕಿಡಿಕಿಯಿಂದ ಹೊರಗೆ ನೋಡುವ ಅಲ್ಲವೆ ಗಾಡಿಯಿಂದ ಕೆಳಗೆ ಹಾರುವ ಹವ್ಯಾಸ ಖಂಡಿತಬೇಡ. ಇದರಿಂದ ನೀವು ಮಶಿನ್ನು ಗುಂಡುಗಳಿಗೆ ತುತ್ತಾಗುವಿರಿ. ಒಳಗೆಯೇ ಇದ್ದು ಬಾಗಿಲು ಹಾಕಿಕೊಳ್ಳಿರಿ. ಮತ್ತು ಹೆಚ್ಚು ಸುರಕ್ಷತೆ ಬೇಕಾಗಿದ್ದರೆ ಸೀಟಿನ ಬುಡಕ್ಕೆ ಅಡಗಿಕೊಳ್ಳಿ. ನೀವು ಸೀಟಿನ ಬುಡದಲ್ಲಿದ್ದರೆ ಯಾವದೇ ಗುಂಡು ಅಲ್ಲವೆ ಬಾಂಬಿನ ಚೂರು ನಿಮ್ಮ ಹತ್ತರ ಬರಲಾ

ರದು ಪಾಯಖಾನೆಯಲ್ಲಿ ಅಡಗಿಕೊಳ್ಳುವದು ಅಪಾಯಕರ. ಏಕಂದರೆ. ಪಾಯಖಾನೆಗೆ ಬರೀ ಗ್ಲಾಸಿನ ಕಿಡಿಕಿಯಿರುತ್ತದೆ. ಮತ್ತು ಅಲ್ಲಿ ಮಲಗಿಕೊಳ್ಳಲೂ ಸಾಧ್ಯವಿಲ್ಲ.

೧೮ ನೀವು ಮೋಟಾರಿನಲ್ಲಿದ್ದರೆ;—

ವಿಮಾನದಾಳಿಯ ಎಚ್ಚರಿಕೆಯಾದ ಕೂಡಲೇ ಮೊದಲು ನಿಮ್ಮ ಮೋಟಾರಿನ ದೀಪಗಳನ್ನು ಆರಿಸಿ. ದೀಪಗಳು ಇದ್ದರೆ ವೈರಿಗೆ ನಿಮ್ಮ ಸುಳುವು ಹತ್ತುವದು. ನಂತರ ಮೋಟಾರನ್ನು ರಸ್ತೆಯ ಒಂದು ಬಾಜುವಿಗೆ ತಂದು ಇಡಿರಿ. ನಿಮ್ಮಲ್ಲಿ ಮೋಟಾರಿದೆಯೆಂದು ದಾಳಿಯ ಎಚ್ಚರಿಕೆಯಾದ ಕೂಡಲೇ ಮನೆಗೆ ಓಡುವ ಹವ್ಯಾಸ ಖಂಡಿತ ಬೇಡ, ಅದರಿಂದ ನಿಮಗೂ ಅನ್ಯರಿಗೂ ಅಪಾಯವುಂಟು. ಅದ್ದರಿಂದ ಮೋಟಾರನ್ನು ರಸ್ತೆಯ ಒಂದು ಬಾಜು ಬಿಟ್ಟು ನೀವು ಆಶ್ರಯಸ್ಥಾನ ಸೇರುವದು ಒಳಿತು.

ರಸ್ತೆಯ ಮೇಲೆ ಕಾರುಬಿಡುವಾಗ್ಗೆ ಅದು ರಸ್ತೆಯಲ್ಲಿಯ ಓಡಾಟಕ್ಕೆ—ಅಂಬುಲನ್ಸ, ಬೆಂಕಿ ಆರಿಸುವ ಮೋಟಾರುಗಳ ಓಡಾಟಕ್ಕೆ ಆತಂಕವಾಗದಂತೆ ನೋಡಿಕೊಳ್ಳುವದು ಮುಖ್ಯ.

೧೯ ಶಾಲೆ ಅಥವಾ ಕಾಲೇಜು ವಿದ್ಯಾರ್ಥಿಗಳಿಗೆ:—

ವಿಮಾನದಾಳಿಯ ಎಚ್ಚರಿಕೆಯಾದಕೂಡಲೇ ಮನೆಗೆ ಓಡಿಹೋಗಲು ವಿದಾರ್ಥಿಗಳು ಹವಣಿಸದಂತೆ ಮಾಸ್ತರರು ಮತ್ತು ಪ್ರೊಫೆಸರರು ಎಚ್ಚರಿಕೆ ಕೊಡಬೇಕು. ಅದರಿಂದಾಗುವ ಅಪಾಯಗಳನ್ನು ಚನ್ನಾಗಿ ತಿಳಿಸಬೇಕು. ಮತ್ತು ವಿದ್ಯಾರ್ಥಿಗಳಿಗಾಗಿಯೇ ಏರ್ಪಡಿಸಲ್ಪಟ್ಟ ಆಶ್ರಯಸ್ಥಾನಗಳಲ್ಲಿ ಎಲ್ಲ ವಿದ್ಯಾರ್ಥಿಗಳು ಶಿಸ್ತಿನಿಂದ, ಶಾಂತತೆಯಿಂದ ಹೋಗಿ ಕುಳಿತುಕೊಳ್ಳಬೇಕು. ತಮ್ಮ ಹುಡುಗರು ಈ ಪ್ರಕಾರ ನೆಮ್ಮದಿ

ಯಿಂದಿರುವರೆಂದು ಅತ್ತ ಮನೆಯಲ್ಲಿ ತಾಯಿ ತಂದೆಗಳು ನಿಶ್ಚಿಂತತೆಯಿಂದ ಇರಬೇಕು. ಶಾಲೆಯಲ್ಲಿರುವತನಕ ಅವರನ್ನು ರಕ್ಷಿಸುವ ಭಾರ ಶಾಲಾಧಿಕಾರಿಗಳದು.

ಶಾಲೆಗೆ ಹೋಗುವಾಗ ನಡುರಸ್ತೆಯಲ್ಲಿಯೇ ದಾಳಿಯ ಎಚ್ಚರಿಕೆ ಕೊಡಲ್ಪಟ್ಟರೆ ವಿದ್ಯಾರ್ಥಿಗಳು ಶಾಲೆಗೆ ಇಲ್ಲವೆ ಮನೆಗೆ ಓಡಿಹೋಗುವದರ ಬದಲು ಹತ್ತಿರದಲ್ಲಿಯೇ ಇದ್ದ ಯಾವದೇ ಮನೆಯನ್ನು ಸೇರಿಕೊಳ್ಳಬೇಕು.

೨೦ ಒಟ್ಟಿನಲ್ಲಿ:—

ಒಟ್ಟಿನಲ್ಲಿ ಬಾಂಬುದಾಳಿ ನಡೆದಾಗ್ಗೆ ಮನುಷ್ಯನು ಧೃತಿಗೆಡಬಾರದು. ಗಾಬರಿಯಾಗಬಾರದು. ಮನುಷ್ಯನು ಗಾಬರಿಯಾದ ಕೂಡಲೇ ಅವನ ಯೋಚನಾಶಕ್ತಿ ಕಾರ್ಯಶಕ್ತಿಗಳು ಕುಂದಿಹೋಗುವವು. ಮುಂದೇನು ಮಾಡಬೇಕೆಂದು ತೋಚದೆ ಅವನು ಹುಚ್ಚನಂತೆ ಆಚರಿಸಿ ಕೊನೆಗೆ ಬಾಂಬಿನ ಬಾಯಿಗೆ ಬೀಳುವದು ಖಂಡಿತ. ಆದರಿಂದ ಯಾವತ್ಕಾಲದಲ್ಲೂ ಧೃತಿಗೆಡಬಾರದು.

ಎರಡನೆಯದಾಗಿ ಇದ್ದ ಸ್ಥಳ ಬಿಟ್ಟು ಕದಲಬಾರದೆಂಬದನ್ನು ಸದಾ ನೆನಪಿನಲ್ಲಿಡಬೇಕು. ಬಾಂಬುದಾಳಿಯ ಎಚ್ಚರಿಕೆ ಕೊಟ್ಟಮೇಲೆ ಜನರಿಗೆ ಅತ್ಯಲ್ಪಕಾಲ ದೊರೆಯುವದು. ಇಷ್ಟು ಅಲ್ಪಕಾಲದಲ್ಲಿ ಏನು ಮಾಡಲೂ ಸಾಧ್ಯವಿಲ್ಲ. ಅದರಿಂದ ಇದ್ದ ಸ್ಥಳದಲ್ಲಿಯೇ ಆಶ್ರಯಸ್ಥಾನಗಳನ್ನು ಆರಿಸಿಕೊಂಡು ಕುಳಿತಿರಬೇಕು. ಒಬ್ಬನು ಸಾಮಾನು ತರಲು ಪೇಟೆಗೆ ಹೋಗಿದ್ದನೆಂದು ಇಟ್ಟುಕೊಳ್ಳೋಣ. ಆಗ ಬಾಂಬುದಾಳಿಯ ಎಚ್ಚರಿಕೆ ಕೊಟ್ಟರೆ ಅವನು ಅಲ್ಲಿಯೇ ಅಂಗಡಿಯಲ್ಲಿ ಇಲ್ಲವೆ ಸಮೀಪದಲ್ಲಿದ್ದ ಶೆಲ್ಟರುಗಳಲ್ಲಿ ಆಶ್ರಯ ತೆಗೆದುಕೊಂಡಲ್ಲಿ ವಾಸಿ, ಅದಲ್ಲದೆ ಅವನು ಮನೆಯ ಕಡೆ ಓಡಿದರೆ ದಾರಿಯಲ್ಲಿ ಬಾಂಬರುಗಳ

ಕೈಗೆ ಸಿಕ್ಕುವದು ಖಂಡಿತ. ಅದರಿಂದ ಇದ್ದ ಸ್ಥಳದಲ್ಲಿಯೇ ಆಶ್ರಯ ಸ್ಥಾನಗಳನ್ನು ಅರಿಸಿರಿ.

ಮೂರನೇಯದಾಗಿ ಬಾಂಬುದಾಳಿಯ ಕಾಲದಲ್ಲಿ ಮನುಷ್ಯನು ಆಶಾವಾದಿಯಾಗಿರಬೇಕು. ಅಂದರೆ ತನ್ನ ಮೇಲೆ ಬಾಂಬು ಬೀಳುವದು ಸಾಧ್ಯವಿಲ್ಲ ಎಂದು ತಿಳಿದುಕೊಂಡು ಧೈರ್ಯದಿಂದ ಆಚರಿಸಬೇಕು. ಈ ಪಟ್ಟಣದಲ್ಲಿರುವ ಎಷ್ಟೋ ಸಾವಿರ ಜನರ ಮಧ್ಯೆ ನನ್ನ ತಲೆಯಮೇಲೆಯೇ ಬಾಂಬು ಏಕೆ ಬೀಳಬೇಕು ಎಂದು ಅವನು ತನ್ನಷ್ಟಕ್ಕೆ ತಾನೇ ಕೇಳಿಕೊಂಡರೆ ಅವನಲ್ಲಿ ಧೈರ್ಯವುತ್ಪನ್ನವಾಗುವದು. ಪ್ರತಿಯೊಬ್ಬನಲ್ಲೂ ಹೀಗೆ ಧೈರ್ಯವುತ್ಪನ್ನವಾದಲ್ಲಿ ಬಾಂಬುದಾಳಿ ಎಷ್ಟೇ ಕ್ರೂರವಾಗಿದ್ದರೂ ಹೆದರುವ ಕಾರಣವೇ ಇಲ್ಲ. ಕಾಂಗ್ರೆಸ ಅಧ್ಯಕ್ಷರಾದ ಮೌಲಾನಾಅಝುದರು ಒಮ್ಮೆ ಹೇಳಿದ್ದು ಎಲ್ಲರಿಗೂ ಮನನೀಯವಾಗಿದೆ. "ಹಿಂದುಸ್ತಾನದಲ್ಲಿ ಸಾವಿರಾರು ಪಟ್ಟಣಗಳಿವೆ. ಈ ಪಟ್ಟಣಗಳಲ್ಲಿ ನಿಮ್ಮ ಪಟ್ಟಣದ ಮೇಲೆಯೇ ಏಕೆ ದಾಳಿಯಾಗಬೇಕು? ಒಂದು ವೇಳೆ ನಿಮ್ಮ ಪಟ್ಟಣದ ಮೇಲೆಯೇ ಆಯಿತೆಂದು ಇಟ್ಟುಕೊಳ್ಳಿ. ಆದರೆ ನಿಮ್ಮ ಓಣಿಯಲ್ಲಿಯೇ ಬಾಂಬುಗಳು ಬೀಳಬೇಕೆಂಬ ನಿಯಮವಿಲ್ಲ. ಒಂದುವೇಳೆ ನಿಮ್ಮ ಓಣಿಯಲ್ಲಿಯೇ ಬಾಂಬು ಬಿದ್ದಿತೆಂದು ತಿಳಿದುಕೊಳ್ಳಿ. ಆದರೆ ನಿಮ್ಮ ಮನೆಯ ಮೇಲೆಯೇ ಬೀಳಬೇಕೆಂಬ ನಿಯಮವಿಲ್ಲ. ಒಂದುವೇಳೆ ನಿಮ್ಮ ಮನೆಯ ಮೇಲೆಯೇ ಬಿದ್ದಿತೆಂದು ಇಟ್ಟುಕೊಳ್ಳಿ. ನಿಮ್ಮ ಮನೆಗೆ ಮಾತ್ರ ಧಕ್ಕೆಯಾದೀತು. ಮನೆಯ ಮೇಲೆ ಬಿದ್ದ ಮಾತ್ರಕ್ಕೆ ನಿಮ್ಮ ತಲೆಮೇಲೆ ಬಾಂಬು ಬೀಳುವದಿಲ್ಲವಷ್ಟೇ? ದುರ್ದೈವದಿಂದ ನಿಮ್ಮ ತಲೆಯಮೇಲೆಯೇ ಬಿದ್ದಿತೆಂದು ಇಟ್ಟುಕೊಳ್ಳಿ. ಮುಂದೆ ನೀವು ಚಿಂತಿಸುವ ಕಾರಣವೇನಿದೆ? ಸಾಯುವದು ಒಮ್ಮೆ, ಹುಟ್ಟುವದು ಒಮ್ಮೆ. ನೀವೊಬ್ಬರು ಸತ್ತರೆ ನಾವು ನಾಲ್ವತ್ತು ಕೋಟಿ ಇದ್ದೇವಲ್ಲ ನಿಮ್ಮ ಕಾರ್ಯ ಸಾಗಿಸಲು!" ಪ್ರತಿಯೊಬ್ಬನೂ ಈ ಮಾತುಗಳಲ್ಲಿ ಹೇಳಿದಂತೆ ಆಶಾವಾದಿಯಾಗಿರಬೇಕು. ಹಸನ್ಮುಖಿಯಾಗಿರಬೇಕು. ಧೃತಿಯಿಂದಿರಬೇಕು. ನಿಮ್ಮನ್ನು ನೋಡಿ ತಿಳಿದ

ವರಿಗೆ ಧೈರ್ಯ ಬರುವದು. ಹೀಗೆ ಎಲ್ಲರೂ ಧೈರ್ಯದಿಂದಿದ್ದರೆ—ಒಂದು ಬಿಟ್ಟು ಸಾವಿರು ವಿಮಾನ ಬಂದರೂ ಹೆದರುವವರಾರು?

ವಿಮಾನದಾಳಿಯಾದಮೇಲೆ:—

ವಿಮಾನದಾಳಿಯಿಂದಾಗುವ ಅನಾಹುತಗಳನ್ನು ಕುರಿತು ಈ ಮೊದಲೇ ಬರೆದಿದೆ. ಅದರಿಂದ ವಿಮಾನದಾಳಿ ಮುಗಿದ ಕೂಡಲೇ ಏ ಆರ್. ಪಿ. ದಳಗಳು ತಮ್ಮ ಕೆಲಸವನ್ನು ಭರದಿಂದ ನಡೆಯಿಸುತ್ತವೆ. ಈ ಕೆಲಸಕ್ಕೆ ಸಾಧ್ಯವಿದ್ದಷ್ಟು ಸಹಾಯಮಾಡುವದು ಪ್ರತಿಯೊಬ್ಬರ ಕರ್ತವ್ಯ.

(೧) 'ಆಲ್ ಕ್ಲಿಯರ್' ಎಚ್ಚರಿಕೆಯಾಗುವ ತನಕ ನೀವು ನಿಮ್ಮ 'ಆಶ್ರಯ ಸ್ಥಳ ಬಿಟ್ಟು ಹೊರಕ್ಕೆ ಬರಬೇಡಿ. ಈ ಎಚ್ಚರಿಕೆಯಾದಮೇಲೆ ನೀವು ಹೊರಗೆ ಬರಲು ಅಡ್ಡಿಯಿಲ್ಲ.

(೨) ಹೊರಗೆ ಬಂದವರು ನಿಮ್ಮ ಬಂಧುಗಳ ಸುದ್ದಿ—ನಿಮ್ಮ ಸ್ನೇಹಿತರ ಸುದ್ದಿಗಳನ್ನು ಕೇಳುವದರ ಸಲುವಾಗಿ ಓಡಾಡಬೇಡಿ. ನಿಮ್ಮ ಕುತೂಹಲವನ್ನು ಆದಷ್ಟು ತಡೆದುಕೊಳ್ಳಿ. ನಿಮ್ಮ ಗಾಬರಿಯಿಂದ ಅವರಿಗೇನೂ ಲಾಭವಾಗುವಂತಿಲ್ಲ. ಅವರಿಗೆ ಒಂದು ವೇಳೆ ಸಹಾಯ ಬೇಕಾಗಿದ್ದರೆ ಅದು ಏ. ಆರ್. ಪಿ. ಯವರ ಸಹಾಯವೇ ಹೊರ್ತು ನಿಮ್ಮ ಸಹಾಯವಲ್ಲ.

(೩) 'ಆಲ್ ಕ್ಲಿಯರ್' ಎಚ್ಚರಿಕೆಯಾದ ಮೇಲೆ ನಿಮ್ಮವರೆಲ್ಲರೂ ಸರಿಯಾಗಿರುವರೇ ಎಂಬುದನ್ನು ನೋಡಿಕೊಳ್ಳಿ. ಯಾರಿಗಾದ ಘಾಯಗಳಾಗಿದ್ದರೆ—ಇಲ್ಲವೆ ಬಹಳ ಜಖಂ ತಗಲಿದ್ದರೆ ವಾರ್ಡನನಿಗೆ ತತ್‌ಕ್ಷಣ ಹೇಳಿಕಳಿಸಿ. ಆದರೆ ಸಣ್ಣಪುಟ್ಟ ಗಾಯಗಳಾಗಿದ್ದರೆ ವೃಥಾ ಪ್ರಥಮಚಿಕಿತ್ಸೆ ದಳದವರಿಗೆ ತ್ರಾಸು ಕೊಡಬೇಡಿ. ನೀವು

ಸ್ವತಃ ನಿಮಗೆ ಉಪಯೋಗವಾಗುವಷ್ಟು ಪ್ರಥಮಚಿಕಿತ್ಸಾಕ್ರಮವನ್ನು ಅರಿತಿರಲೇ ಬೇಕು

(೪) ನಂತರ ನಿಮ್ಮ ಮನೆಯ ಸಮಾಚಾರ ತೆಗೆದುಕೊಳ್ಳಿ. ಒಮ್ಮೊಮ್ಮೆ ತಡವಾಗಿ ಹಾರುವ ಬಾಂಬು (Delayed bomb) ಬಿದ್ದಿರುವ ಸಂಭವವಿದೆ. ಇಂಥ ಬಾಂಬು ಕಂಡರೆ ತತ್ಕ್ಷಣ ಎಲ್ಲ ರನ್ನೂ ಅಲ್ಲಿಂದ ದೂರಸಾಗಿಸಿ ವಾರ್ಡನನಿಗೆ ಸುದ್ದಿ ಕಳಿಸಿ. ನೀವು ಖಂಡಿತ ಆ ಬಾಂಬನ್ನು ಮುಟ್ಟಬಾರದು. ಅಷ್ಟೇಕೆ ಅದರ ಹತ್ತರ ಸುಳಿಯಕೂಡದು.

(೫) ನಿಮ್ಮ ಮನೆ ಬೀಳುವದಕ್ಕಾಗಿದ್ದರೆ ಅದನ್ನು ಕೆಡಹು ವದು ಒಳಿತು. ಆ ಕೆಲಸ ಮಾಡುವವರಿಗೆ ತತ್ಕ್ಷಣ ಹೇಳಿಕಳಿಸಿ.

(೬) ಬಾಂಬು ದಾಳಿಯಿಂದ ನಿರಾಶ್ರಿತರಾದವರಿಗೆ ಆದಷ್ಟು ಸಹಾಯ ಮಾಡಿ ವಿಮಾನದಾಳಿಯಾದಮೇಲೆ ಅದೆಷ್ಟೋ ಅದೆಷ್ಟೋ ಅನಾಹುತಗಳು ಸಂಭವಿಸುತ್ತವೆ. ಬಂಧುಬಳಗದವರನ್ನು ಕಳೆದುಕೊಂ ಡವರು ಅದೆಷ್ಟೋ ದುಃಖಪಡುವರು. ತಾಯಿತಂದೆಗಳನ್ನು ಕಳೆದು ಕೊಂಡ ಬಾಲಕರು ಹುಚ್ಚಿದ್ದು ಓಡಾಡುತ್ತಿರುತ್ತಾರೆ ಮನೆಗಳು ಬಾಂಬಿಗೆ ತುತ್ತಾಗುವದರಿಂದ ಅದೆಷ್ಟೋ ಕುಟುಂಬಗಳು ಹೊರಗೆ ಗಾಳಿ ಮಳೆಗಳಲ್ಲಿ ನಿಂತಿರುತ್ತವೆ. ಈ ಪ್ರಕಾರ ದುಃಖಪೀಡಿತರಾದವರಿ ಗೆಲ್ಲ ಶಕ್ಯವಿದ್ದಷ್ಟು ಸಹಾಯ ಮಾಡುವದು ನಿಮ್ಮ ಆದ್ಯ ಕರ್ತವ್ಯ

---

೬ ವಿಮಾನದಾಳಿ:— ೨. ಬೆಂಕಿ ಬಾಂಬುಗಳು

ಸಿಡಿಮದ್ದಿನ ಬಾಂಬುಗಳನ್ನು ಬಹುತರ ಮನುಷ್ಯರ ವಿರುದ್ಧ— ಪ್ರಾಣಹಾನಿ ಮಾಡುವದಕ್ಕಾಗಿ ಉಪಯೋಗಿಸುವರು. ಆದರೆ ಬೆಂಕಿ

ಬಾಂಬುಗಳನ್ನು ಪಟ್ಟಣಕ್ಕೆ ಬೆಂಕಿ ಹಚ್ಚಿ ಜನರನ್ನು ನಿರಾಶ್ರಿತರನ್ನಾಗಿ ಮಾಡುವದಕ್ಕೆ, ಜನರಲ್ಲಿ ಅಲ್ಲೋಲಕಲ್ಲೋಲವನ್ನುಂಟುಮಾಡಲಿಕ್ಕೆಂದೇ ಉಪಯೋಗಿಸುವರು.

ಬೆಂಕಿಬಾಂಬುಗಳಲ್ಲಿ ಅನೇಕ ವಿಧಗಳಿವೆ. ಇವೆಲ್ಲವೂ ಸಸಾರವಾಗಿ ಬೆಂಕಿ ಹೊತ್ತುಕೊಳ್ಳಬಲ್ಲ ಪದಾರ್ಥಗಳಿಂದ ತಯಾರಿಸಲ್ಪಡುತ್ತವೆ. ಮ್ಯಾಗ್ನೀಸಿಯಂ, ಫೋಸ್ಫರಸ್, ಥರ್ಮಾಯಿಟ್, ಪೆಟ್ರೋಲು ಇವೇ ಆ ಪದಾರ್ಥಗಳು.

೧ ಮ್ಯಾಗ್ನೆಸಿಯಮ್ ಬಾಂಬುಗಳು: – ಈ ಬಾಂಬುಗಳಲ್ಲಿ ಥರ್ಮಾಯಿಟ ಎಂಬ ಜ್ವಾಲಾಮಾನ್ಯವಾದ ಪದಾರ್ಥವು ಉಪಯೋಗಿಸಲ್ಪಡುತ್ತಿದೆ. ಈ ಬಾಂಬುಗಳು ಎರಡು ಅಥವಾ ಮೂರು ಪೌಂಡು ಭಾರವಿದ್ದದ್ದರಿಂದ ಒಂದೊಂದು ವಿಮಾನವು ಒಂದು ಸಾವಿರದಷ್ಟು ಬಾಂಬುಗಳನ್ನು ಹೊತ್ತುಕೊಂಡು ಬರಬಲ್ಲದು. ಈ ಬಾಂಬುಗಳಲ್ಲಿ ಕೆಲವು ನಿರುಪಯುಕ್ತವಾದರೂ, ಕೆಲವು ಬೆಂಕಿಗಳನ್ನು ಹುಟ್ಟಿಸಬಲ್ಲವು. ಹೀಗೆ ಒಂದು ವಿಮಾನ ಕನಿಷ್ಠ ೧೦೦ ಬೆಂಕಿಯನ್ನಾದರೂ ಹುಟ್ಟಿಸಬಲ್ಲದು. ಇಂತಹ ೧೫—೨೦ ವಿಮಾನಗಳು ಬಂದರೆ ಪಟ್ಟಣದ ದೃಶ್ಯವೆಂತಹದೆಂಬುದನ್ನು ನೀವೇ ಊಹಿಸಿಕೊಳ್ಳಿ.

ಮ್ಯಾಗ್ನೆಸಿಯಂ ಬಾಂಬು ಉರಿಯುವ ರೀತಿಯನ್ನು ಎರಡು ವಿಭಾಗಗಳಾಗಿ ಮಾಡಬಹುದು.

ಪ್ರಥಮತಃ ಬಾಂಬು ಮಾಳಿಗೆಗೆ ಇಲ್ಲವೆ ನೆಲಕ್ಕೆ ಅಪ್ಪಳಿಸಿದೊನೆಯೇ ಮೇಲಿನ ಥರ್ಮಾಯಿಟ್ ಹೊದಿಕೆಗೆ ಬೆಂಕಿ ಹೊತ್ತಿಕೊಂಡು ಅದು ಉರಿಯವದಕ್ಕೆ ಆರಂಭಿಸುತ್ತದೆ. ಈ ಉರಿಯುವಿಕೆ ಒಂದು ಮಿನೀಟಿನ ವರೆಗೆ ನಡೆಯುತ್ತದೆ. ಹೀಗೆ ಉರಿಯುತ್ತಿರುವಾಗ್ಗ ಸಣ್ಣಗ ಚಿಟಚಟ ಸಪ್ಪಳಗಳಾಗಿ ಬೆಂಕಿಯ ಚೂರುಗಳು ಸುತ್ತಲೂ ಸಿಡಿಯುತ್ತವೆ. ಇದು ಪ್ರಥಮ ಭಾಗ.

ನಂತರ ಒಳಗಿನ ಮ್ಯಾಗ್ನಿಸಿಯಮ್ ಧಾತುವಿಗೆ ಬೆಂಕಿಹತ್ತಿಕೊಳ್ಳುತ್ತದೆ. ಮ್ಯಾಗ್ನಿಸಿಯಂ ಧಾತು ಉರಿಯುತ್ತಿರುವಾಗ ೨೦೫೦ ಫಾರನ್‌ಹೈಟ ಡಿಗ್ರಿಯಷ್ಟು ಉಷ್ಣತೆ ಹುಟ್ಟಿಕೊಳುತ್ತದೆ. ಈ ಶಾಖದಲ್ಲಿ ಆ ಧಾತು ಹತ್ತು ನಿಮಿಷ ಉರಿಯುತ್ತದೆ. ಹೀಗೆ ಉರಿಯುತ್ತಿರುವಾಗ್ಗೆ ಸಪ್ಪಳವಾಗುವದಿಲ್ಲ. ಹೀಗೆ ಹತ್ತು ನಿಮಿಷ ಉರಿದಮೇಲೆ ಆ ಧಾತು ಬೆಳ್ಳಗೆ ಕಾದು ಕರಗಿ ನೀರಾಗುತ್ತದೆ. ಈ ಕರಗಿದ ಲೋಹದಷ್ಟು ಜ್ವಾಲಾಯಮಾನವಾದುದು ಮತ್ತೊಂದಿಲ್ಲ ಈ ಲೊಹವು ನಿಮ್ಮ ಮಾಳಿಗೆಯಲ್ಲಿ ತೂತುಕೊರೆದುಕೊಂಡು ಬೆಂಕಿಯನ್ನು ಕಾರುತ್ತ ಕೆಳಗೆ ಇಳಿಯುಬಲ್ಲದು. ಇದನ್ನು ಭಾರತಕಾಲದ ಆಗ್ನೇಯಾಸ್ತ್ರಕ್ಕೆ ಹೋಲಿಸಬಹುದು. ಎರಡು ಪೌಂಡು ಭಾರವಿರುವ ಒಂದು ಬಾಂಬಿನ ಕರಗಿದ ಲೋಹವು ೪ ಇಂಚು ಕಾಂಕ್ರೀಟಿನೊಳಗಿಂದ, ಇಲ್ಲವೆ ೩ಫೂಟು ದಪ್ಪವಿರುವ ಮಣ್ಣಿನೊಳಗಿಂದ ಇಲ್ಲವೇ ಕಾಲು ಇಂಚು ದಪ್ಪ ಉಕ್ಕಿನ ತಗಡಿನೊಳಗಿಂದ ಇಳಿಯುಬಲ್ಲದು ! ನಮ್ಮಲ್ಲಿಯ ಸಾಧಾರಣ ಮನೆಯ ಛಾವಣಿ ತೆಳ್ಳಗಿನ ಹಂಚು, ಅಥವಾ ಒಂದು ಒಂದೂವರೆ ಫೂಟು ದಪ್ಪ ಇರುವ ಮಣ್ಣಿನ ಛಾವಣಿ ಇಲ್ಲವೆ ತಗಡು ಇವುಗಳಿಂದ್ಧ ಸಿದ್ಧವಾಗಿರುತ್ತದೆ. ಸಣ್ಣ ಮಾಗ್ನೆಸಿಯಂ ಬಾಂಬು ಕೂಡ ಇವುಗಳೊಳಗಿಂದ ತೂರಿ ಹೋಗಬಲ್ಲದು.

ಕರಗಿದ ಲೋಹವು ಮಾಳಿಗೆಯೊಳಗಿಂದ ಇಳಿದ ಕೂಡಲೇ ನೆಲಕ್ಕೆ ಬಿದ್ದು ಹಬ್ಬುತ್ತದೆ. ಜಂತಿ ಮುಂತಾದವುಗಳಿಗೆ ಬೆಂಕಿಹತ್ತುತ್ತದೆ ಆದರೆ ಈ ಕರಗಿದ ಲೋಹವು ಹರಿಯಬಲ್ಲದೇ ವಿನಾ ಸ್ಫೋಟವಾಗಿ ಸಿಡಿಯಲಾರದು. ಇದರಿಂದ ಎಷ್ಟೋ ಗುಣವುಂಟು.

೨ ಫಾಸ್ಫೊರಸ್-ಬಾಂಬುಗಳು:—

ನೀವೆಲ್ಲ ಫಾಸ್ಫೊರಸ್‌ನ್ನು ನೋಡಿರಬಹುದು. ಈ ಧಾತು ಗಾಳಿಗೆ ಬಿದ್ದೊಡನೆಯೇ ಅಂದರೆ ಆಕ್ಸಿಜನ್ ವಾಯುವಿನ ಸಂಪರ್ಕವಾದೊಡನೆಯೇ ಉರಿಯಲು ಆರಂಭವಾಗುತ್ತದೆ. ಅದರಿಂದ ಇದನ್ನು

ಯಾವಾಗಲೂ ನೀರಿನಲ್ಲಿ ಇಟ್ಟಿರುತ್ತಾರೆ. ನೀರಿನಲ್ಲಿದ್ದಾಗ ಇದರಿಂದ ಯಾವ ಅಪಾಯವೂ ಇಲ್ಲ.

ಫಾಸ್ಫೊರಸ್ ಬಾಂಬಿನಲ್ಲಿ ಈ ಧಾತುವಿನ ಸಣ್ಣ ಸಣ್ಣ ಗೋಲಗಳನ್ನು ಮಾಡಿ ತುಂಬಿರುತ್ತಾರೆ ಬಾಂಬು ಮೇಲಿನಿಂದ ಬಿದ್ದು ಸ್ಫೋಟವಾದೊಡನೆಯೇ ಈ ಗೋಲಗಳು ಸುತ್ತಲೂ ಹಾರಿ ಹೋಗುತ್ತವೆ. ಮತ್ತು ಅವು ಗಾಳಿಗೆ ಬೀಳುವದರಿಂದ ಉರಿಯಲು ಆರಂಭಿಸುತ್ತವೆ.

ಫಾಸ್ಫೊರಸ್ಸಿಗೆ ಸಿಡಿಯುವ ಗುಣವಿರುವದಿಲ್ಲ. ಅದರಿಂದ ಈ ಗೋಲಗಳು ಬಿದ್ದಲ್ಲಿಯೇ ಉರಿಯುತ್ತವಲ್ಲದೆ ಸ್ಫೋಟವಾಗಿ ಹಾರುವದಿಲ್ಲ.

ಒಂದೊಂದು ಬಾಂಬಿನಲ್ಲಿ ಅಸಂಖ್ಯಾತ ಗೋಲಗಳಿರುತ್ತವೆ ಬಾಂಬು ಸಿಡಿದ ಮೇಲೆ ಈ ಗೋಲಗಳೆಲ್ಲ ಸುತ್ತಲೂ ಹಾರಿಹೋಗುವದರಿಂದ ಇವುಗಳನ್ನು ಅರಸುವದೇ ಕಷ್ಟ. ಈ ಗೋಲಗಳು ಸಾವಕಾಶವಾಗಿ ಹೊಗೆಯಾಡುತ್ತ ಉರಿಯುತ್ತ ಬರುತ್ತವಲ್ಲದೆ ಒಮ್ಮೆಲೇ ಬೆಂಕಿಯೇಳುವದಿಲ್ಲ. ಅದರಿಂದ ಯಾವದೋ ಮೂಲೆಯಲ್ಲಿ ಬಿದ್ದ ಗೋಲಿ ಸ್ವಲ್ಪ ಹೊತ್ತಿನ ಮೇಲೆ ದೊಡ್ಡ ಬೆಂಕಿಯನ್ನೆಬ್ಬಿಸಬಹುದು. ಆದ್ದರಿಂದ ಈ ಗೋಲಗಳನ್ನೆಲ್ಲ ಎಚ್ಚರಿಕೆಯಿಂದ ಆಯುವದು ಒಳಿತು.

ಪೆಟ್ರೋಲಿಯಂ ಬಾಂಬುಗಳು:—

ಇವು ಒರಟು ಪದ್ಧತಿಯ ಬಾಂಬಾದರೂ ಹಮೇಶ ಉಪಯೋಗಿಸಲ್ಪಡುತ್ತವೆ. ಸಾಧಾರಣ ತರಗತಿಯ ಪಿಪಾಯಿಯಂತಹ ಟಬ್ಬುಗಳಲ್ಲಿ ಪೆಟ್ರೋಲನ್ನು ಒತ್ತಿ ತುಂಬಿ ಮೇಲಿನಿಂದ ಎಸೆಯುತ್ತಾರೆ. ಮೇಲಿನಿಂದ ಬಿದ್ದ ರಭಸಕ್ಕೆ ಪೀಪಾಯಿ ಸ್ಫೋಟವಾಗುವದಲ್ಲದೆ ಒಳಗಿದ್ದ ಎಣ್ಣೆಗೆ ಬೆಂಕಿ ಹತ್ತಿಕೊಂಡು ಅದು ಸುತ್ತಲೂ ಬಹು ದೂರ ಸಿಡಿಯು

ತ್ತದೆ ಪೆಟ್ರೋಲಿಗೆ ಬೆಂಕಿ ಹತ್ತಿದಮೇಲೆ ಕೇಳಬೇಕೇ.

ಬೆಂಕಿ ದಾಳಿಯನ್ನು ಎದುರಿಸಲು ಸನ್ನಾಹ:—

ಯಾವದೇ ದಾಳಿಯಾಗಲಿ ಎದುರಿಸಲು ಸನ್ನದ್ಧರಾಗಿರುವದು ದೂರದರ್ಶಿಗಳ ಕಾರ್ಯ. ಅದರಿಂದ ಈ ಕೆಳಗಿನ ಉಪಾಯಗಳನ್ನು ಮಾಡಿದರೆ ಬೆಂಕಿಭಯ ಕಡಿಮೆಯಾಗುವದು.

೧ ಬೆಂಕಿಬಾಂಬುಗಳು ಮೇಲಿನಿಂದ ಬಿದ್ದು ಅನಾಹುತ ಮಾಡಬೇಕೇ ಹೊರತು ಸಿಡಿಮದ್ದಿನ ಬಾಂಬುಗಳಂತೆ ಸ್ಫೋಟವಾಗಿ ಅಕ್ಕಪಕ್ಕಗಳಿಂದ ಬಂದು ಅನಾಹುತವನ್ನು ಮಾಡಲಾರವು. ಏಕಂದರೆ ಒಂದು ಮೆಗ್ನೇಸಿಯಂ ಬಾಂಬು ನೆಟ್ಟಗೆ ಮಾಳಿಗೆಯ ಮೇಲೆ ಬಿದ್ದರೆ ಮಾತ್ರ ಇಮಾರತಿಗೆ ಬೆಂಕಿ ತಗಲುವದೇ ವಿನಾ ರಸ್ತೆಯ ಮೇಲೆ ಬಿದ್ದರೆ ಮನೆಗೆ ಧಕ್ಕೆ ಇಲ್ಲ ರಸ್ತೆಯ ಮೇಲೆ ಬಿದ್ದದ್ದು ಅಲ್ಲಿಯೇ ಉರಿಯುತ್ತಿದ್ದರೂ (ಹಗಲು ಹೊತ್ತಿನಲ್ಲಿ ಮಾತ್ರ: ರಾತ್ರಿಹೊತ್ತಿನಲ್ಲಿ ಅದು ಉರಿಯುತ್ತಿದ್ದರೆ ವೈರಿಗೆ ಪಟ್ಟಣದ ಮೇಲೆ ಬಾಂಬು ಹಾಕಲು ಅನುಕೂಲವಾಗುವದು. ಆದ್ದರಿಂದ ರಾತ್ರಿ ಯಾವದೇ ಬೆಂಕಿಯನ್ನು ಉರಿಯಲು ಬಿಡಬಾರದು) ಅಡ್ಡಿಯಿಲ್ಲ ಫೊಸ್ಫರಸ್ ಗೋಲಿಗಳ ವಿಷಯು ಮಾತ್ರ ಕೊಂಚ ಎಚ್ಚರಿಕೆ ತೆಗೆದುಕೊಳ್ಳಬೇಕು. ಏಕಂದರೆ ಅವು ಹಾರಿ ಕಿಡಕಿಗಳೊಳಗಿಂದ ಇಲ್ಲವೆ ಬಾಗಿಲೊಳಗಿಂದ ಬರುವ ಸಂಭವವಿರುತ್ತದೆ.

ಆದುದರಿಂದ ನಾವು ಮಾಳಿಗೆಯ ವಿಷಯ ಹೆಚ್ಚು ಕಾಳಜಿ ತೆಗೆದುಕೊಂಡರಾಯಿತು. ಬೆಂಕಿಯ ಭಯ ಕಡಿಮೆಯಾಗುವದು.

೨ ಛಾವಣಿ ಸಾಕಷ್ಟು ದಪ್ಪವಿರದಿದ್ದರೆ ಮಾಗ್ನೇಸಿಯಂ ಧಾತುವಿನ ರಸ ಇಳಿದುಬರುವ ಭಯ ಹೆಚ್ಚು.

೧ ನಿಮ್ಮ ಮನೆಗೆ ಮಣ್ಣಿನ ಛಾವಣಿಯಿದ್ದರೆ ಅದರ ಮೇಲೆ ಇನ್ನೂ ನಾಲ್ಕೈದು ಇಂಚು ದಪ್ಪ ಉಸುಕು ಇಲ್ಲವೆ ಒಣ ಮಣ್ಣನ್ನು

ಹಾಕಿ. ಉಸುಕು ಹಾಕಿದರೆ ಒಳಿತು. ಒಣ ಮಣ್ಣು ಇಲ್ಲವೆ ಹೆಂಟಿ ಹಾಕಿದರೆ ಮಣ್ಣಿನಲ್ಲಿ ಕಸಕಡ್ಡಿ ಇಲ್ಲದಂತೆ ಎಚ್ಚರಿಕೆ ತೆಗೆದುಕೊಳ್ಳಿ. ಇಲ್ಲದಿದ್ದರೆ ಈ ಕಸಕ್ಕೇ ಬೆಂಕಿ ಹತ್ತುವ ಭಯವುಂಟು. ಈ ರೀತಿ ಮಣ್ಣನ್ನು ಮನೆಗೆ ಹಾಕಿದರೆ ಬೆಂಕಿಬಾಂಬು ಬಿದ್ದಲ್ಲಿಯೇ ಆರಿಹೋಗು ವದುಂಟು.

೨ ನಿಮ್ಮಲ್ಲಿ ಸಾಕಷ್ಟು ಹಣವಿದ್ದರೆ ಛಾವಣಿಗೆ ಅಬೆಸ್ಟಸ್ ಇಲ್ಲವೆ ಕಾಂಕ್ರೀಟ ಇಲ್ಲವೆ ಉಕ್ಕಿನ ದಪ್ಪ ತಗಡು ಮೊದಲಾದವುಗಳ ಹೊದಿಕೆಯನ್ನು ಹಾಕುವದು ಒಳಿತು. ಇದರಿಂದ ಬೆಂಕಿಯ ಭಯ ತಪ್ಪುವದಲ್ಲದೆ ಒಂದು ವೇಳೆ ಸಿಡಿಬಾಂಬು ಬಿದ್ದರೂ ರಕ್ಷಣೆಯಾಗು ವದು. ಇಲ್ಲದಿದ್ದರೆ ಮೇಲೆ ಹೇಳಿದ ಉಸುಕಿನ ಉಪಾಯ ಚೆನ್ನ.

೩ ಮಾಳಿಗೆಯ ಮೇಲಿಂದ ಬೆಂಕಿಹೊತ್ತಿಕೊಳ್ಳಬಹುದಾದ ಸಾಮಾನುಗಳನ್ನೆಲ್ಲ ತೆಗೆದಿಡಿ. ಇಲ್ಲದಿದ್ದರೆ ಮೊದಲು ಮಾಳಿಗೆಗೆ ಬೆಂಕಿಹತ್ತಿದೊಡನೆಯೇ ಈ ಸಾಮಾನುಗಳು ಅದಕ್ಕೆ ಪುಟ ಕೊಡು ತ್ತವೆ. ನಿಜವಾಗಿ ನೋಡಿದರೆ ಬಾಂಬುದಾಳಿ ಕಾಲದಲ್ಲಿ ಅರಿವೆ ಅಂ ಚಡಿ ಮುಂತಾದ ಸಂಸಾರಿಗಿ ಬೆಂಕಿ ಹೊತ್ತಿಕೊಳ್ಳಬಹುದಾದ ಪದಾರ್ಥಗಳನ್ನೆಲ್ಲ ಟ್ರಂಕುಗಳಲ್ಲಿ ಹಾಕಿಡುವದು ಉತ್ತಮ. ಇಲ್ಲ ದಿದ್ದರೆ ಪೊಸ್ಪರಸ್ ಗೋಲಿಯೊಂದು ಕಣ್ಣು ತಪ್ಪಿಸಿ ಬಿದ್ದರೆ, ಬೆಂಕಿಹತ್ತಿಕೊಳ್ಳುವ ಸಂಭವ ಉಂಟು.

ಅಟ್ಟದಮೇಲೆ ಹತ್ತಿ, ಕಟ್ಟಿಗೆ, ತಟ್ಟು ಮುಂತಾದ ಯಾವ ಪದಾರ್ಥಗಳನ್ನೂ ಇಡಬೇಡಿರಿ.

೪ ಸಾಧ್ಯವಿದ್ದರೆ ಜಂತಿ, ಕಿಡಕಿಯ ಕಟ್ಟಿಗೆ, ಚೌಕಟ್ಟು ಮುಂತಾದವುಗಳಿಗೆಲ್ಲ ಎರಡು ಅಥವಾ ಮೂರು ಥರ ಬಣ್ಣ ಬಳೆಯಿಸಿ. ಈ ರೀತಿ ಬಣ್ಣ ಬಳೆದರೆ ಕಟ್ಟಿಗೆಗೆ ಬೆಂಕಿ ಬೇಗ ಹತ್ತಿಕೊಳ್ಳಲಾರದು.

೫ ಪ್ರತಿಯೊಬ್ಬನ ಮನೆಯಲ್ಲೂ ಬೆಂಕಿ ನಂದಿಸುವ ಸಾಧನಗ

ಳಿದ್ದಷ್ಟು ಒಳಿತು. ಈ ಸಾಧನಗಳು ಯಾವವೆಂದರೆ:—

೧ ಉಸುಕು:— ಬೆಂಕಿಯನ್ನು ನಂದಿಸಲು ಉಸುಕಿನಷ್ಟು ಉತ್ತಮ ಸಾಧನ ಇನ್ನೊಂದಿಲ್ಲ ಉರಿಯುವ ಬೆಂಕಿಯ ಮೇಲೆ ಉಸುಕನ್ನು ಚಲ್ಲಿದರೆ ಅದು ತತ್ ಕ್ಷಣ ನಂದಿಹೋಗುವದು. ಆದರೆ ಬೆಂಕಿನಂದಿಸುವ ವಿಧಾನವನ್ನು ಮುಂದೆ ಹೇಳಿವೆ.

೨ ನೀರು:—ಪ್ರತಿಯೊಂದು ಮನೆಯಲ್ಲಿಯೂ ಪ್ರಸಂಗಕಾಲ ದಲ್ಲಿ ಇರಲೆಂದು ಕೆಲವು ಬಕೆಟ್ಟು ನೀರು ತುಂಬಿ ಇಟ್ಟಿರಬೇಕು. ಆದರೆ ಬೆಂಕಿಬಾಂಬಿನ ಮೇಲೆ ಒಮ್ಮೆಲೇ ನೀರು ಸುರಿಯುವದು ಅಪಾಯಕರ. ಆದರಂತೆ ಪೆಟ್ರೋಲಬಾಂಬಿನ ಮೇಲೂ ನೀರು ಸುರಿಯಬಾರದು. ಏಕೆಂ ದರೆ ಪೆಟ್ರೋಲು ನೀರಿಗಿಂತ ಹಗುರಿರುವದರಿಂದ ಅದು ನೀರಿನ ಮೇಲೆಯೇ ಉರಿಯಲಾರಂಭಿಸುವದು. ಆದರೆ ಫಾಸ್ಪರಸ್ ಬೆಂಕಿಯನ್ನು ಆರಿಸು ವಾಗ ಮಾತ್ರ ನೀರಿನಿಂದ ಉಪಯೋಗವಾಗುವದು. ನೀರನ್ನು ಎಚ್ಚ ರಿಕೆಯಿಂದ ಉಪಯೋಗಿಸುವ ವಿಧಾನ ಮುಂದೆ ಹೇಳಿದೆ.

ಉಸುಕು ಮತ್ತು ನೀರು ಇಟ್ಟಿರಲು ಎಲ್ಲರಿಂದಲೂ ಸಾಧ್ಯವಿದೆ. ಅದರಿಂದ ಪ್ರತಿಯೊಂದು ಮನೆಯವರು ಇವುಗಳನ್ನು ಇಟ್ಟಿರಲೇ ಬೇಕು.

೩ ಸ್ಟಿರಪ್ ಪಂಪು - ನೀರಿನ ಪಂಪು:—

ಫಾಯರ ಫಾಯಿಟರುಗಳು ದೊಡ್ಡದೊಡ್ಡ ಬೆಂಕಿಗಳನ್ನು ಆರಿ ಸುವ ಕ್ರಮವನ್ನು ನೀವು ನೋಡಿರಬಹುದು. ಅವರು ನೀರಿನ ದೊಡ್ಡ ಪಂಪುಗಳನ್ನು ನೀರನ್ನು ಉಗ್ಗಲಿಕ್ಕೆ ಉಪಯೋಗಿಸುವರು. ಅಂತಹದೇ ಸಣ್ಣ ಕೈಪಂಪನ್ನೂ ಮನೆಯಲ್ಲಿ ಬೆಂಕಿಯಾರಿಸಲು ಉಪಯೋಗಿಸ ಬಹುದು. ಆದರೆ ಈ ಪಂಪುಗಳಿಗೆ ಬಹಳ ಹಣ ತಗಲುವದರಿಂದ ಹಣವಿದ್ದವರು ಮಾತ್ರ ಅವುಗಳನ್ನು ಕೊಂಡುಕೊಳ್ಳ ಬಲ್ಲರು. ಆದರೆ ಕೆಲವು ಮನೆಯವರು ಕೂಡಿಕೊಂಡು ಒಂದು ಪಂಪನ್ನು ಕೊಂಡು ಕೊಳ್ಳುವದು ಸರ್ವೋತ್ತಮ.

ನೀವು ಓಕಳಿಯಾಡುವ ಜೀಕಳಿಯನ್ನು ನೋಡಿರಬಹುದು.

ಈ ಸ್ಟಿರಪ್ ಪಂಪೂ ಅದೇ ವಿಧಾನದ ಮೇಲೆ ಕೆಲಸ ಮಾಡುತ್ತದೆ. ಪಂಪು ಹೊಡೆಯುವದರಿಂದ ನೀರು ಮೇಲಕ್ಕೇರಿ, ಕೊಳವೆಯ ಮೂಲಕ ಹೊರಗೆ ಚಿಮ್ಮುತ್ತದೆ. ನೀರು ಎರಡು ಬಗೆಯಿಂದ ಚಿಮ್ಮುವಂತೆ ವ್ಯವಸ್ಥೆ ಇರುತ್ತದೆ- ಒಂದೇ ಸವನೇ ೧/೮ ಇಂಚು ದಪ್ಪ ನೀರು ಹಾರುವದು; ಇಲ್ಲವೆ ತುಂತುರು ತುಂತುರುಗಳಾಗಿ ಹಾರುವದು.

ಸ್ಟಿರಪ್ ಕೊಳವೆಯ ನೀರು ಒಂದೇ ಸವನೆ ಚಿಮ್ಮಿದರೆ ೩೦ ಫೂಟು ಹೋಗಬಲ್ಲದು: ತುಂತುರಗಳಾಗಿ ಚಿಮ್ಮಿದರೆ ೧೫ ಫೂಟು ಅಂತರದಲ್ಲಿ ಹೋಗಬಲ್ಲದು.

ಸ್ಟಿರಪ್ ಪಂಪುಗಳಿಂದ ದೂರಿನಿಂದಲೇ ಬೆಂಕಿಯನ್ನು ಆರಿಸುವದು ಸಾಧ್ಯವಿದ್ದದ್ದರಿಂದ ಅವುಗಳನ್ನು ಆದಷ್ಟು ಹೆಚ್ಚು ಉಪಯೋಗಿಸುವದು ಸೂಕ್ತ.

ಈ ಪಂಪನ್ನು ಉಪಯೋಗಿಸಲು ಎರಡು ಜನ ಇದ್ದರೆ ಸಾಕು; ಮೂರು ಜನ ಇದ್ದರೆ ಒಳಿತು. ಒಬ್ಬನು ಹ್ಯಾಂಡಲನ್ನು ಆಡಿಸಬೇಕು. ಇದರಿಂದ ಪೀಪಯಿಯಲ್ಲಿರುವ ನೀರು ಪಂಪಿನಲ್ಲೇರಿ, ರಬ್ಬರ ಕೊಳವೆಯ ಮೂಲಕ ಹೊರಕ್ಕೆ ಚಿಮ್ಮುತ್ತದೆ. ಮತ್ತೊಬ್ಬನು ರಬ್ಬರಿನ ಪಾಯಿಪನ್ನು ಸರಿಯಾದ ದಿಕ್ಕಿನಲ್ಲಿ ಹಿಡಿದು ಬೆಂಕಿಯ ಮೇಲೆ ನೀರು ಸರಿಯಾಗಿ ಬೀಳುವಂತೆ ಮಾಡುವನು. ಅವನು ಒಂದು ಬಟ್ಟನ್ನನ್ನು ಒತ್ತಿದರೆ ಧಾರಾಕಾರವಾಗಿ ಬರುವ ನೀರು ತುಂತುರುರೂಪವಾಗಿ ಬರಲು ಮೊದಲು ಮಾಡುವದು. ಈ ರೀತಿ ಬೆಂಕಿಯನ್ನು ಆರಿಸುವದು ಎರಡನೇಯವನ ಕಾರ್ಯ. ಮೂರನೇಯವನು ಪೀಪಯಿಯ ನೀರು ಖರ್ಚಾದಂತೆ ಬೇರೆ ನೀರು ತಂದು ತುಂಬುತ್ತಿರಬೇಕು. ಇದು ಸ್ಟಿರಪ್ ಪಂಪನ್ನು ಉಪಯೋಗಿಸುವ ವಿಧಾನ.

ಬರೀ ಬಾದ್ಲಿಗಳಲ್ಲಿ ನೀರು ತುಂಬುವದಕ್ಕಿಂತ ಈ ರೀತಿ ಸ್ಟಿರಪ್ ಪಂಪನ್ನು ಉಪಯೋಗಿಸಿದರೆ ಅತ್ಯಲ್ಪ ಸಮಯದಲ್ಲಿ ಉತ್ಕೃಷ್ಟ ಪರಿಣಾಮವು ದೊರೆಯುವದು.

೪ ಬೆಂಕಿಬಾಂಬುಗಳನ್ನು ಕಾಯುವವರು:-Fire Watchers

ಇನ್ನು ಕೆಲವು ವೇಳೆ ವಾಸವಿಲ್ಲದೆ ಇದ್ದ ಮನೆಗಳಲ್ಲಿ ಉದಾಹರಣೆಗಾಗಿ ಅಂಗಡಿಗಳಲ್ಲಿ—ರಾತ್ರಿ ಬೆಂಕಿ ಬಿದ್ದರೆ ಒಮ್ಮೆಲೆ ತಿಳಿಯುವದು ಸಾಧ್ಯವಿಲ್ಲ ತಾನೆ. ಆದರಿಂದ ಈ ರೀತಿ ಕಾಣದೆ ಅಪಾಯವಾಗುವದನ್ನು ತಪ್ಪಿಸುವದಕ್ಕಾಗಿ ಕಾಯುವವರನ್ನು ನಿಯಮಿಸುವದು ಒಳಿತು. ಅಂದರೆ ಒಂದು ಓಣಿಯ ಜನರು ತಮ್ಮಲ್ಲಿ ಕೆಲವು ಉತ್ಸಾಹೀ ತರುಣರನ್ನು ಬೆಂಕಿಬಾಂಬು ಕಾಯುವದಕ್ಕಾಗಿ ನಿಯಮಿಸಬೇಕು. ಸ್ಫೋಟವಾಗುವ ಬಾಂಬು ಮತ್ತು ಬೆಂಕಿಬಾಂಬು ಒಮ್ಮೆಲೇ ಬೀಳುವ ಸಂಭವವಿರುವದಿಲ್ಲ. ಒಂದು ಸ್ಫೋಟವಾಗುವ ಬಾಂಬು ಬೀಳುತ್ತಿದ್ದರೂ ಇವರಿಗೆ ಒಳ್ಳೆಯ ಆಶ್ರಯಸ್ಥಾನವಿರಬೇಕು. ಪೋಲೀಸನಿಗೆ ಒಂದು ಕಟ್ಟಿಗೆಯ ಗೂಡು ಇರುವದಿಲ್ಲವೇ ಹಾಗೆ. ಪ್ರತಿಯೊಂದು ಓಣಿಯಲ್ಲಿ ಎರಡು ಮೂರು ಜನ ಮಾಳಿಗೆಯ ಮೇಲೆ ನಿಂತು ಕಾಯುತ್ತಿರಬೇಕು ಆಕಾಶದ ಕಡೆಗೆ ನೋಡುತ್ತಿರುವದೇ ಇವರ ಕೆಲಸ. ಎಲ್ಲಿಯಾದರೂ ಒಂದು ಉರಿಗೊಳ್ಳಿ ಬಿದ್ದಿತೆಂದರೆ ತಕ್ಷಣ ಇವರು ಕೆಳಗಿನವರಿಗೆ ಆ ಸುದ್ದಿ ತಿಳಿಸುವರು. ಮತ್ತು ಆ ಮನೆಯ ಮೇಲೆ ಬಾಂಬು ಹೊತ್ತಿಕೊಂಡು ಅನಾಹುತ ಮಾಡುವದರೊಳಗಾಗಿ ತೆಗೆಯಲ್ಪಡುವದು. ಈ ರೀತಿ ಮಾಡುವದರಿಂದ ಬೆಂಕಿ ಹೊತ್ತಿಕೊಳ್ಳುವದಕ್ಕೇ ಆಸ್ಪದವಿರುವದಿಲ್ಲ. ಹೀಗೆ ಕಾಯುವ ಪದ್ಧತಿ ಮೊದಲು ಲಂಡನ ಪಟ್ಟಣದಲ್ಲಿ ಜಾರಿಗೆ ತರಲ್ಪಟ್ಟಿತು. ಇದರಿಂದ ಅದೆಷ್ಟೋ ಉಪಯೋಗ ಕಂಡುಬಂತು. ಆದರಿಂದ ಇಂಥ ಪದ್ಧತಿಯನ್ನು ಪ್ರತಿಯೊಂದು ಊರಲ್ಲಿ ಜಾರಿಗೆ ತರುವದು ಒಳಿತು.

ಮೇಲೆ ಹೇಳಿದ ಮುದ್ದೆಗಳನ್ನು ಓದಿಕೊಂಡು ಬೆಂಕಿದಾಳಿಯನ್ನು ಎದುರಿಸಲು ಸಿದ್ಧರಾಗುವದು ನಿಮ್ಮ ಕರ್ತವ್ಯ.

ಬೆಂಕಿಬಾಂಬುಗಳನ್ನು ಆರಿಸುವ ರೀತಿ :—

೧ ಮ್ಯಾಗ್ನೇಸಿಯಮ್ ಬಾಂಬುಗಳು.

ಸ್ಟಿರಪ್ ಪಂಪಿನ ಉಪಯೋಗ

ಮ್ಯಾಗ್ನೇಸಿಯಮ್ ಬಾಂಬುಗಳು ಉರಿಯುವ ಬಗೆಯನ್ನು

ಹಿಂದೆಯೇ ಹೇಳಿದೆ.

ಬಾಂಬು ಬಿದ್ದೊಡನೆಯೇ ಕೆಲವು ನಿಮಿಷ ಅದನ್ನು ಉರಿಯಲು ಬಿಡಿ. ಹತ್ತಿರ ಹೋಗಬೇಡಿ. ಅದು ಸಿಡಿಮದ್ದಿನ ಬಾಂಬು ಇದ್ದರೆ ಇಲ್ಲವೆ ಅದರಲ್ಲಿ ಕೆಲವು ಸಿಡಿಮದ್ದು ಉಪಯೋಗಿಸಲ್ಪಟ್ಟದ್ದರೆ ಕೆಲವೇ ನಿಮಿಷದಲ್ಲಿ ಸ್ಫೋಟವಾಗುವದು. ಇದಲ್ಲದೆ ಆದಿಯಲ್ಲಿ ಉರಿಯುವಾಗ್ಗೆ ಮ್ಯಾಗ್ನೇಸಿಯಮ್ ಬಾಂಬು ಸ್ವಲ್ಪ ಸ್ಫೋಟವಾಗುವದೆಂದು ನಿಮಗೆ ಮೊದಲೇ ಹೇಳಿದೆ. ಅದರಿಂದ ಒಂದೆರಡು ಮಿನಿಟು ಅದನ್ನು ಉರಿಯಲು ಬಿಡುವದು ಮೇಲು. ಬೆಂಕಿ ಒಮ್ಮೆಲೇ ಹಬ್ಬುವದೆಂದು ಭಯ ಬೇಡ.

ಅಷ್ಟು ಹೊತ್ತಿಗೆ ಬಾಂಬು ಉರಿಯಲು ಸುರುವು ಮಾಡುತ್ತದೆ. ಈಗ ಅದರ ಮೇಲೆ ಸ್ಟಿರಪ್ ಪಂಪಿನಿಂದ ದಾಳಿಮಾಡಲು ಸರಿಯಾದ ಸಮಯ. ರಬ್ಬರಿನ ಕೊಳವೆ ಹಿಡಿದ ಮನುಷ್ಯನು ಸಾವಕಾಶ ಆಶ್ರಯದ ಮರೆಯಲ್ಲಿ ಬಾಂಬನ್ನು ಸಮೀಪಿಸಬೇಕು. ಜ್ವಾಲೆಯ ಹೊಗೆಗಳಿಂದ ರಕ್ಷಿಸಿಕೊಳ್ಳುವದಕ್ಕೆಂದು ಅವನು ತನ್ನ ಮುಂದೆ ಒಂದು ಮೇಜು ಇಲ್ಲವೆ ಸಣ್ಣ ಪೆಟ್ಟಿಗೆ ಮುಂತಾದವುಗಳನ್ನು ಇಟ್ಟುಕೊಳ್ಳಬಹುದು. ಇಲ್ಲವೆ ನೆಲದ ಮೇಲೆ ಅಂಬೆಗಾಲಿಟ್ಟು ಹೊಸೆಯುತ್ತ ಬೆಂಕಿಯನ್ನು ಸಮೀಪಿಸಬಹುದು.

ಇನ್ನು ಬೆಂಕಿಯನ್ನು ಆರಿಸುವ ವಿಷಯ. ಒಮ್ಮೆಲೇ ಬಾಂಬಿನ ಮೇಲೆ ನೀರು ಬಿಟ್ಟರೆ ಅದು ಸ್ಫೋಟವಾಗುವ ಹೆದರಿಕೆ ಹೆಚ್ಚು. ಅದರಿಂದ ನೀರು ಬಿಡುವಾಗ್ಗೆ ಎಚ್ಚರಿಕೆಯಿಂದಿದ್ದು ಕೆಳಗಿನ ಕ್ರಮ ಅನುಸರಿಸಬೇಕು.

೧ ಜ್ವಾಲೆ ಹೆಚ್ಚುತ್ತಿದ್ದರೆ ಮೊದಲು ಜ್ವಾಲೆಯನ್ನು ನೊಂದಿಸುವದು ಅವಶ್ಯ. ಅದರಿಂದ ಬಾಂಬಿನ ಸುತ್ತಲೂ ಹಬ್ಬಿರುವ ಜ್ವಾಲೆಯಮೇಲೆ ನೀರನ್ನು ಒಂದೇಸಮನೆ ಧಾರಾಕಾರವಾಗಿ ಸುರಿಯಿರಿ. ಆದರೆ ಬಾಂಬಿನ ಮೇಲೆ ನೀರು ಬೀಳದಂತೆ ಎಚ್ಚರಿಕೆಯಿಂದಿರಿ. ಹೀಗೆ ಸುತ್ತಲಿನ ಜ್ವಾಲೆ ತಗ್ಗಿದ ಮೇಲೆ ನೀವು ಬಾಂಬಿನ ಸಮೀಪ ಹೋಗಲು

ಸಾಧ್ಯವಾಗುವದು.

೨ ನಂತರ ಬಾಂಬಿನ ಸಮಾಚಾರ ತೆಗೆದುಕೊಳ್ಳಿರಿ. ಬಾಂಬಿನ ಮೇಲೆ ನೀರನ್ನು ತುಂತುರುಗಳಾಗಿ ಸಿಂಪಡಿಸಿ. ಸ್ಟಿರಪ್ ಪಂಪಿನಿಂದ ಇದು ಸಾಧ್ಯವಿದೆ. ಆದರೆ ಬಕೆಟ್ಟುನೀರಿನಿಂದ ಸಾಧ್ಯವಿಲ್ಲ. ಆದರಿಂದಲೇ ಬೆಂಕಿಯನ್ನು ನೊಂದಿಸಲು ಸ್ಟಿರಪ್ ಪಂಪು ಅತ್ಯುತ್ತಮವಾದ ಸಾಧನ. ನೀರನ್ನು ಈ ರೀತಿ ಸಿಂಪಡಿಸುವದರಿಂದ ಬಾಂಬಿಗೆ ಹೆಚ್ಚುಹೆಚ್ಚು ಆಕ್ಸಿಜನ್ ಹವೆಯು ದೊರೆತು ಅದು ಬಹುಬೇಗ ಸುಟ್ಟು ಹೋಗುತ್ತದೆ. ಈ ರೀತಿ ಒಮ್ಮೆ ಬಾಂಬು ಸುಟ್ಟಿತೆಂದರೆ ಮುಂದೆ ಹೆದರಿಕೆಯಿಲ್ಲ. ಈ ರೀತಿ ಮಾಡಿದರೆ ಬಾಂಬು ಆರಿಹೋಗುತ್ತದೆ.

ಏನಾದರೂ ಆಗಲಿ ಬಾಂಬಿನ ಸಮೀಪಕ್ಕೆ ಹೋಗಿ ಬಾದ್ಲಿಯಿಂದ ನೀರು ಸುರುವಬೇಡಿ. ಅದರಿಂದ ನಿಮಗೆ ಖಂಡಿತ ಅಪಾಯವುಂಟು.

ಮೇಲೆ ಹೇಳಿದ್ದನ್ನೆಲ್ಲ ಬಾಂಬಿನಿಂದ ಸಾಧ್ಯವಿದ್ದಷ್ಟು ದೂರಿನಿಂದಲೇ ಮಾಡಬೇಕು. ಆರೇಳು ಫೂಟಗಿಂತ ಸನಿಯದಲ್ಲಿ ಎಂದಿಗೂ ಹೋಗಬಾರದು.

ಉಸುಕಿನ ಉಪಯೋಗ: —

ಸ್ಟಿರಪ್ ಪಂಪು ಇಡಲು ಸಾಧ್ಯವಿಲ್ಲದವರು ಉಸುಕಿನಿಂದ ಬೆಂಕಿಯನ್ನು ಆರಿಸಲು ಸಾಧ್ಯವಿದೆ. ಇದಕ್ಕೆ ಒಂದು ಬಾದ್ಲಿ ಉಸುಕ ಮತ್ತು ಒಂದು ಕಬ್ಬಿಣದ ಜಾಕಣಿ – ಇಲ್ಲವೆ ಮುಚ್ಚುಕೊಳವಿ (ಒಲೆಯಿಂದ ಬೂದಿ ತೆಗೆಯಲಿಕ್ಕೆ ಉಪಯೋಗಿಸುವಂತಹದು) ಇವೆರಡಿದ್ದರೆ ಸಾಕು.

ಮೊದಲಿನಂತೆ ಬಾಂಬುನ್ನು ಸ್ವಲ್ಪ ಹೊತ್ತು ಉರಿಯಲು ಬಿಡಬೇಕು ಅದು ಸ್ಫೋಟವಾಗುವದು ನಿಂತನಂತರ ಬೆಂಕಿ ಆರಿಸುವವನು ಬೆಂಕಿಯಿಂದ ಸಾಧ್ಯವಿದ್ದಷ್ಟು ಸಮೀಪಕ್ಕೆ ಹೋಗಿ ಅಲ್ಲಿ ತನ್ನ ಬಾದ್ಲಿಯಲ್ಲಿಯ ಕೆಲವು ಉಸುಕನ್ನು ಗುಪ್ಪೇಹಾಕಬೇಕು. ನಂತರ ಜಾಕಣಿಯಿಂದ ಉಸುಕನ್ನು ಎರಚಬೇಕು. ಕಸವನ್ನು ಉಡುಗುನಂತೆ ಕಸ

ಬರಿಗೆಯಿಂದಲೇ ಉಸುಕನ್ನು ಎರಚಿದರೂ ಒಳಿತು ಈ ರೀತಿ ಸುತ್ತಲಿನಿಂದಲೂ ಮಾಡಿದರೆ ಜ್ವಾಲೆಯು ಕುಗ್ಗುವದಲ್ಲದೆ ಬಾಂಬಿನ ಸಮೀಕ್ಕೆ ಹೋಗಲು ಸಾಧ್ಯವಾಗುವದು. ನಂತರ ಬಾಂಬಿನ ಮೇಲೆ ಕೆಲವು ಉಸುಕು ಸುರಿದರೆ ಅದರ ಶಕ್ತಿ ಗುಂದುವದು. ನಂತರ ಅವನು ತನ್ನ ಕಬ್ಬಿಣದ ಆಯುಧದಿಂದ ಅದನ್ನು ಎತ್ತಿ ಬಾದ್ಲಿಯಲ್ಲಿ ಇಡಬೇಕು. ಬಾದ್ಲಿಯಲ್ಲಿ ಸ್ವಲ್ಪು ಉಸುಕು ಇರುವಂತೆ ಎಚ್ಚರಿಕೆ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಬಾಂಬು ಬಾದ್ಲಿಯಲ್ಲಿಯೇ ಉರಿಯಲಾರಂಭಿಸಿ ಅಲ್ಲಿ ತೂತು ಕೊರೆದು ಪುನಃ ನೆಲಕ್ಕೆ ಬೀಳಬಹುದು. ಆದರೆ ಉಸುಕು ಇದ್ದರೆ ಅದು ಉರಿಯಲಾರದು. ಈ ರೀತಿ ಬಾಂಬು ಬಾದ್ಲಿಯಲ್ಲಿ ಬಂದಮೇಲೆ ಬಾದ್ಲಿಯನ್ನು ಎತ್ತಿಕೊಂಡು ಹೋಗಿ ದೂರ ಆ ಬಾಂಬನ್ನು ಒಗೆದು ಅದು ಉರಿಯಲು ಬಿಡಬೇಕು. ಇದು ಬಾಂಬನ್ನು ಆರಿಸುವ ಎರಡನೇ ವಿಧ.

ಈ ರೀತಿ ಬೆಂಕಿಯನ್ನು ಆರಿಸುವಾಗ್ಗೆ ಕೆಳಗಿನ ಸಂಗತಿಗಳನ್ನು ನೆನಪಿನಲ್ಲಿಟ್ಟಿರಬೇಕು.

೧ ಬೆಂಕಿಯನ್ನು ಸಮೀಪಿಸುವಾಗ ಜ್ವಾಲೆಯಿಂದ ಇಲ್ಲವೆ ಹೊಗೆಯಿಂದ ನಿಮಗೆ ಅಪಾಯವಾಗದಂತೆ ನಡೆದುಕೊಳ್ಳಿ. ಅದರಿಂದ ಮೊದಲೇ ಹೇಳಿದಂತೆ ಮೇಜು ಇಲ್ಲವೆ ಪೆಟ್ಟಿಗೆಯ ಹಿಂದೆ ಆಶ್ರಯ ತೆಗೆದುಕೊಂಡು ಅದನ್ನು ಮುಂದೆ ಸರಿಸುತ್ತ ಬೆಂಕಿಯನ್ನು ಸಮೀಪಿಸುವದು ಉತ್ತಮ. ಒಮ್ಮೊಮ್ಮೆ ಕರಗಿದ ಮಾಗ್ನೇಸಿಯಂ ಕೂಡ ಕುದಿಯುವ ಭರದಲ್ಲಿ ನಿಮಗೆ ಸಿಡಿಯುವ ಸಂಭವವುಂಟು. ಈ ರೀತಿ ಸಿಡಿಯದಂತೆ ಸಂಪೂರ್ಣ ಎಚ್ಚರಿಕೆ ತೆಗೆದುಕೊಳ್ಳಿ.

ಯಾವಾಗಲೂ ನೆಲದ ಮೇಲೆ ಮಲಗಿಕೊಂಡು ಹೊಸೆಯುತ್ತ ಇಲ್ಲವೆ ತೆವಳಿಕೊಂಡು ಬೆಂಕಿಯನ್ನು ಸಮೀಪಿಸುವದು ಉತ್ತಮ. ಇದರಿಂದ ಹೊಗೆ ಜ್ವಾಲೆಗಳ ಬಾಧೆಯು ಆಗುವದಿಲ್ಲ.

೨ ಪ್ರಥಮತಃ ಬಾಂಬು ಉರಿಯುವಾಗ್ಗೆ ಆಗುವ ಸ್ಫೋಟದಿಂದ ಬೆಂಕಿಯ ತುಂಡುಗಳು ಸುತ್ತಲೂ ಹರಿದ್ದರೆ ಅವುಗಳನ್ನು

ಲಕ್ಷ್ಯಪೂರ್ವಕವಾಗಿ ಹುಡುಕಿ ತೆಗೆದು ಉಸುಕಿನಿಂದ ಇಲ್ಲವೆ ನೀರಿನಿಂದ ಆರಿಸಬೇಕು.

೩ ಒಂದು ವೇಳೆ ಬಾಂಬು ಛಾವಣಿಯ ಮೇಲೆ ಬಿದ್ದಿದ್ದರೆ ಮೊದಲು ಅದನ್ನು ನೆಲಕ್ಕೆ ಕೆಡವಿಕೊಂಡು ನಂತರ ಆರಿಸಬೇಕು. ಇಲ್ಲದಿದ್ದರೆ ನೀವು ಆರಿಸುವದರೊಳಗೆ ಅದು ಮಾಳಿಗೆಗೆ ತೂತು ಕೊರೆದು ನೆಲಕ್ಕೆ ಬೀಳಬಹುದು.

೪ ಉರಿಯುವ ಬಾಂಬನ್ನು ಹೊರಕ್ಕೆ ಒಗೆದು ಅದನ್ನು ಸಂಪೂರ್ಣ ಉರಿಯಲು ಬಿಡಬೇಕೆಂದು ಹೇಳಿದೆಯಷ್ಟೇ. ಹಗಲು ಹೊತ್ತಿನಲ್ಲಿ ಮಾತ್ರ ಹೀಗೆ ಮಾಡಬೇಕು. ರಾತ್ರಿಯ ವೇಳೆ ಈ ರೀತಿ ಉರಿಯುವ ಬಾಂಬನ್ನು ಹೊರಕ್ಕೆ ಚಲ್ಲಿದರೆ ಅದು ಇಡೀ ಬೀದಿಯನ್ನೆಲ್ಲ ಬೆಳಗಿ ವೈರಿವಿಮಾನಗಳಿಗೆ ಇಡೀ ಓಣಿ ಕಾಣುವಂತೆ ಮಾಡುವದು. ಆದರಿಂದ ರಾತ್ರಿಯ ಸಮಯದಲ್ಲಿ ಬಾಂಬನ್ನು ಉರಿಯಲು ಬಿಡದೆ ಪೂರ್ಣ ಆರಿಸಬೇಕು.

೫ ನಿಮ್ಮ ಈ ವಿಧಾನಗಳಿಂದ ಬೆಂಕಿ ತಗ್ಗದೆ ಹೆಚ್ಚಾದರೆ ತತ್ಕ್ಷಣ ಬೆಂಕಿ ಆರಿಸುವವರಿಗೆ ಹೇಳಿ ಕಳಿಸಿ.

ಫೊಸ್ಫರಸ್ ಬಾಂಬುಗಳು:—

ಫೋಸ್ಫರಸ್ ಬಾಂಬುಗಳಿಂದ ಗೋಲಿಗಳು ಹೊರಟು ಬೆಂಕಿ ಹೊತ್ತಿಸುವ ವಿಧಾನ ಮೊದಲೇ ಹೇಳಿದೆ. ನೀರಿನಿಂದ ಫಾಸ್ಫೋರಸ್ಸು ಆರುವದೆಂದೂ ಮೊದಲೇ ಹೇಳಿದೆ. ಆದರಿಂದ ಫೋಸ್ಫರಸ್ ಬೆಂಕಿ ಆರಿಸಲು ಉತ್ತಮ ಸಾಧನವೆಂದರೆ ಒಂದು ಬಾದ್ಲಿ ನೀರು.—ಮತ್ತು ಒಂದು ಚಿಮ್ಮಟಿಗೆ—ಏಕಂದರೆ ಫಾಸ್ಫರಸ್‌ನು ಕೈಯಿಂದ ಮುಟ್ಟುವದು ಹಿತಕಾರಿಯಲ್ಲ.

ಫಾಸ್ಪರಸ್ ಬಾಂಬುಗಳನ್ನು ಮ್ಯಾಗ್ನೆಸಿಯಂ ಬಾಂಬುಗಳಿಂದ ಗುರುತಿಸುವದು ಸುಲಭ. ಮ್ಯಾಗ್ನೆಸಿಯಮ್‌ದ್ದು ಒಂದು ಇಡೀ ಬಾಂಬು ಆದರೆ ಫಾಸ್ಫರಸ್‌ದ್ದು ಗೋಲಗಳು ಅಸಂಖ್ಯಾತವಿರುತ್ತವೆ. ಇದಲ್ಲದೆ

ಫಾಸ್ಫರಸ್ಸು ಉರಿಯುವಾಗ್ಗೆ ಒಂದು ತರದ ವಿಶಿಷ್ಟ ವಾಸನೆ ಬರುವದಲ್ಲದೆ, ಬಿಳಿಯ ಬಣ್ಣದ ಹೊಗೆ ಏಳುತ್ತವೆ.

ಈ ರೀತಿ ಫಾಸ್ಫರಸ್ ಗೋಲಿಗಳು ಬಿದ್ದು ಉರಿಯಲು ಆರಂಭಿಸಿದೊಡನೆಯೇ ಮನೆಯಲ್ಲಿ ಪ್ರತಿಯೊಬ್ಬನೂ ಒಂದು ಕೈಯಲ್ಲಿ ಒಂದು ಬಾದಲಿ ನೀರು ಇನ್ನೊಂದು ಕೈಯಲ್ಲಿ ಒಂದು ಚಿಮ್ಮಟಿಗೆ ಹಿಡಿದುಕೊಂಡು ಹೊರಡಬೇಕು. ಗೋಲಿಯನ್ನು ಕಂಡಕೂಡಲೇ ಉರಿಯುವ ಕೆಂತವನ್ನು ಹಿಡಿಯುವಂತೆ ಅದನ್ನು ಚಿಮ್ಮಟಿಗೆಯಿಂದ ಹಿಡಿದು ಬಾದಲಿಯಲ್ಲಿಯ ನೀರಿನಲ್ಲಿ ಹಾಕಿ. ಸರಿ. ಅದು ತಣ್ಣಗಾಗಿ ಬಿಡುವದು. ಈ ಕಾರ್ಯವನ್ನು ಒಂದು ಮಗು ಸಹ ಮಾಡಬಲ್ಲದು. ಏಕಂದರೆ ಫಾಸ್ಫರಸ್ ಗೋಲಿ ಸ್ಫೋಟವಾಗುವದಿಲ್ಲ.

ಎಚ್ಚರಿಕೆಗಳು:—

೧ ಫಾಸ್ಫರಸ್ ಗೋಲಿ ಕೈಯಿಂದ ಎಂದೂ ಹಿಡಿಯಬೇಡಿ. ಇದರಿಂದ ಕೈ ಸುಡುವ ಸಂಭವವುಂಟು. ನೀವು ತಪ್ಪಿ ಗೋಲಿಯ ಮೇಲೆ ಕಾಲಿಡದಂತೆಯೂ ಎಚ್ಚರಿಕೆ ವಹಿಸಿ.

೨ ಈ ರೀತಿ ಸಂಗ್ರಹಿಸಿದ ಗೋಲಿಗಳು—ರಾತ್ರಿಯ ಕಾಲವಾಗಿದ್ದರೆ ಬೆಳಗಿನ ವರೆಗೆ ನೀರಿನಲ್ಲಿಯೇ ಇರಲಿ ಬೆಳಗಾದ ಮೇಲೆ ಹೊರಗೆ ಒಂದೆಡೆ ಅವನ್ನೆಲ್ಲ ಚಲ್ಲಿದರೆ ಅವು ನಿರುಪಾಯವಾಗಿ ಉರಿದು ಹೋಗುವವು.

೩ ಈ ಸಣ್ಣ ಗೋಲಿಗಳು ಎಲ್ಲಲ್ಲಿಯೂ ವ್ಯಾಪಿಸುವ ಸಂಭವವುಂಟು. ನೀವು ಹಾಗೆಯೇ ಬಿಟ್ಟರೆ ಅವು ಸಾವಕಾಶ ಹೊಗೆಯಾಡುತ್ತ ಕೊನೆಗೆ ಬೆಂಕಿಹೊತ್ತಿಕೊಳ್ಳುವವು. ಅದರಿಂದ ಮನೆಯನ್ನೆಲ್ಲ ಎಚ್ಚರಿಕೆಯಿಂದ ಅರಸಿನೋಡಿರಿ.

ಪೆಟ್ರೋಲಿಯಂ ಬಾಂಬುಗಳು:—

ಪೆಟ್ರೋಲ ಬಾಂಬಿನಿಂದ ಉರಿ ಹತ್ತಿದಾಗ್ಗೆ ಅದರ ಮೇಲೆ ನೀರನ್ನು ಎಂದೂ ಸುರಿಯಬಾರದೆಂಬುದನ್ನು ಲಕ್ಷ್ಯದಲ್ಲಿಡಬೇಕು. ನೀರಿನಿಂದ ಈ ಬೆಂಕಿಯನ್ನು ಆರಿಸುವದು ಸಾಧ್ಯವಿಲ್ಲ. ಇದಕ್ಕೆ

ಉಸುಕೇ ಹಾಸಿ ಮ್ಯಾಗ್ನೇಸಿಯಂ ಬಾಂಬುಗಳನ್ನು ಆರಿಸಿದಂತೆಯೇ ಇಲ್ಲಿಯೂ ಉಸುಕಿನ ಉಪಯೋಗ ಮಾಡಬೇಕು.

ಒಟ್ಟಿನಲ್ಲಿ:—

೧. ಒಟ್ಟಿನಲ್ಲಿ ಬೆಂಕಿಯನ್ನು ಆರಿಸುವಾಗ್ಗೆ ಬಹಳ ಎಚ್ಚರದಿಂದ ವರ್ತಿಸುವದು ಅವಶ್ಯ. ಈ ವಿಧಾನವನ್ನು ನೀವು ಮೊದಲೇ ಅರಿತಿರಬೇಕು. ಎಂತಹ ಬೆಂಕಿಯನ್ನು ನೀವು ಆರಿಸಬಲ್ಲಿರೆಂಬ ಸಂಗತಿ ನಿಮಗೆ ಖಂಡಿತ ಗೊತ್ತಿರಬೇಕು. ಇಲ್ಲದಿದ್ದರೆ ಬೆಂಕಿಯು ಅನವಶ್ಯವಾಗಿ ಹಬ್ಬುವ ಸಂಭವವಿದೆ ಅದರೆ ಸಣ್ಣಪುಟ್ಟ ಬೆಂಕಿಗಾಗಿ ಫಾಯರ್ ಫಾಯಿಟರಗಳಿಗೆ ಹೇಳಿಕಳಿಸುವದೂ ಹಾಸ್ಯಾಸ್ಪದ. ನಿಮ್ಮ ಒಂದು ರಗ್ಗಿಗೆ ಬೆಂಕಿಹತ್ತಿದೆಯೆಂದು ನೀವು ಬೆಂಕಿಆರಿಸುವ ದಲದವರನ್ನು ಕರೆದರೆ ಒಂದು ಇಡೀದಲ್ಲ, ಎರಡು ಮೋಟಾರುಗಳು ನಿಮ್ಮ ಮನೆ ಮುಂದೆ ಬಂದು ನಿಂತರೆ ನಿಮ್ಮ ಸ್ಥಿತಿಯೇನಾಗಬೇಕು? ಅದೇ ಹೊತ್ತಿನಲ್ಲಿ ಉಳಿದೆಡೆಯಲ್ಲಿ ದೊಡ್ಡ ಬೆಂಕಿ ಹತ್ತಿದ್ದರೆ ಅಲ್ಲಿಯ ಸ್ಥಿತಿಯೇನು? ಇದನ್ನೆಲ್ಲ ವಿಚಾರಿಸಿ ನೀವು ಫಾಯರಫಾಯಿಟರ್ಸಗಳ ಸಹಾಯ ಯಾಚಿಸಬೇಕು. ಪ್ರತಿಯೊಬ್ಬನು ತನ್ನ ಮನೆಯಲ್ಲಿಯ ಬೆಂಕಿಯನ್ನು ತಾನೇ ಆರಿಸಲು ಸಮರ್ಥನಾದರೆ ಸರ್ವೋತ್ಕೃಷ್ಟ. ಇಲ್ಲದಿದ್ದರೆ ಒಮ್ಮೆಲೇ ಫಾಯರ ಫಾಯಿಟರ್ಸಗಳಿಗೆ ಹೇಳಿ ಕಳಿಸಿ. ನೀವು ತಡಮಾಡಿದರೆ ನಿಮ್ಮ ಮನೆಯು ಸುಡುವದಲ್ಲದೆ, ಅಕ್ಕಪಕ್ಕದ ಮನೆಗಳೂ ಬೆಂಕಿಹೊತ್ತಿಕೊಳ್ಳಬಹುದು.

೨ ಬೆಂಕಿಯು ದೊಡ್ಡದಾಗುವ ಲಕ್ಷಣ ಕಂಡಲ್ಲಿ ಮನೆಯವರನ್ನೆಲ್ಲ ತಕ್ಷಣ ಹೊರಗೆ ಇಲ್ಲವೆ ನೆರೆಮನೆಗೆ ಕಳಿಸಿ. ಹಸು ಮೊದಲಾದ ಪ್ರಾಣಿಗಳಿದ್ದರೆ ಬಿಚ್ಚಿ ದೂರ ಕಟ್ಟಿ. ನಂತರ ಸಾಧ್ಯವಿದ್ದಷ್ಟು ಸಾಮಾನು ಸಾಗಿಸಲು ಪ್ರಯತ್ನಿಸಿರಿ.

ಬೆಂಕಿ ಹತ್ತಿದ ಮನೆಯ ಬಾಗಿಲುಕಿಟಕಿಗಳನ್ನು ಮುಚ್ಚಿರುವದು ಉತ್ತಮ. ಇದರಿಂದ ಹೊರಗಿನಿಂದ ಗಾಳಿ ಬರಲು ಆಸ್ಪದವಿಲ್ಲದೆ ನಿದಾನವಾಗಿ ಉರಿಯುವದು.

ಒಟ್ಟಿನಲ್ಲಿ ಫಾಯರ್ ಫಾಯಿಟರಗಳು ಬರುವವರೆಗೆ ಸಾಧ್ಯವಿದ್ದಷ್ಟು ಎಚ್ಚರಿಕೆ ವಹಿಸಿ. ಅವರು ಬಂದೊಡನೆಯೇ ಮನೆಯನ್ನು ಅವರಿಗೆ ಒಪ್ಪಿಸಿರಿ. ಮುಂದಿನ ಕೆಲಸ ಅವರದು

---

೭ ವಿಮಾನದಾಳಿ:— ೩. ವಿಷವಾಯುಪ್ರಯೋಗ

ಬರೀ ಸಿಡಿಮದ್ದಿನ ಬಾಂಬುಗಳ ದಾಳಿಯಿಂದ ನಮ್ಮ ಅರಕ್ಷಿತ ಜನತೆಯಲ್ಲಿ ಸಾಕಷ್ಟು ಭಯವನ್ನುಂಟುಮಾಡಲು ಸಾಧ್ಯವಿರುವಾಗ ಲೆಕ್ಕವಿಲ್ಲದಷ್ಟು ಪ್ರಾಣಹಾನಿಮಾಡಲು ಶಕ್ಯವಿರುವಾಗ ವೈರಿಯು ವಿಷವಾಯುವನ್ನು ಉಪಯೋಗಿಸುವದು ಅನವಶ್ಯ. ಆದರೆ ಜಪಾನಿಗಳ ಯುದ್ಧ ರೀತಿಯನ್ನು ನೋಡಿದರೆ ಅವರು ಯಾವುದಕ್ಕೂ ಅಳುಕದ ಕಲ್ಲೆದೆಯವರೆಂದು ಕಂಡುಬರುವದು. ಅರಕ್ಷಿತ ಚೈನಾದ ಹೆಂಗಸರು ಹುಡುಗರ ಮೇಲೆ ವಿಷವಾಯುವನ್ನು ಪ್ರಯೋಗಿಸಿದ ನೀಚರು ಇಲ್ಲಿಯೂ ಅದೇ ರೀತಿ ಮಾಡಬಹುದು ತಾನೆ. ಹೇಗಿದ್ದರೂ ಬಂದದ್ದಕ್ಕೆಲ್ಲ ಎದುರಾಗಬೇಕೆಂದು ಇಲ್ಲಿ ವಿಷವಾಯು ಪ್ರಯೋಗದ ಬಗ್ಗೆ ಕೆಲವು ಸಂಗತಿಗಳನ್ನು ಕೊಟ್ಟಿದೆ.

ವಿಷವಾಯು ಪ್ರಯೋಗವೆಂದರೆ ಅದು ಬರೀ ವಾಯುರೂಪದಲ್ಲಿಯೇ ಇರಬೇಕೆಂಬ ನಿಯಮವಿಲ್ಲ. ಆದರೆ ಅದು ದ್ರವರೂಪದಲ್ಲೂ ಇರಬಹುದು.

ತೆಳ್ಳಗಿನ ಉಕ್ಕಿನ ಹೊದಿಕೆಯುಳ್ಳ ಉಕ್ಕಿನ ಬಾಂಬಿನಲ್ಲಿ ವಿಷವಾಯುವನ್ನು ಒತ್ತಿ ತುಂಬಿದರೆ ಒಂದು ವಿಷವಾಯು ಬಾಂಬು ಸಿದ್ಧವಾಗುವದು. ಈ ಬಾಂಬು ನೆಲಕ್ಕೆ ಬಿದ್ದೊಡನೆಯೇ ಸ್ಫೋಟವಾಗಿ ಒಡೆಯುತ್ತದೆ. ಸ್ಫೋಟವಾದಾಗ ಒಂದು ಸಣ್ಣ ಸಪ್ಪಳವಾಗುತ್ತದೆಯೇ ಹೊರತು ಸಿಡಿಮದ್ದಿನ ಬಾಂಬು ಸ್ಫೋಟವಾದಾಗ ಆಗುವಷ್ಟು ಭಯಂ

ಕರ ಸಪ್ಪಳವಾಗುವದಿಲ್ಲ. ಬಾಂಬಿನ ಹೊದಿಕೆ ಒಡೆದೊಡನೆಯೇ ಒಳ ಗಿದ್ದ ವಿಷವಾಯು ಹೊಗೆಯ ರೂಪದಲ್ಲಿ ಹೊರಬಿದ್ದು ಹವೆಯಲ್ಲಿ ಕೂಡಿಕೊಳ್ಳುತ್ತದೆ.

ವಿಷದ್ರವಗಳನ್ನು ವಾಯುಗಳಂತೆ ಬಾಂಬಿನಲ್ಲಿಯೂ ಉಪಯೋ ಗಿಸುವರು. ಇಲ್ಲದಿದ್ದರೆ ವಿಮಾನದಲ್ಲಿ ಒಂದು ಹೌದಿನಲ್ಲಿ ದ್ರವವನ್ನು ತುಂಬಿಕೊಂಡು ಒಂದು ಸಣ್ಣ ತುಂತುರುಗಳಾಗಿ ಇಡೀ ಪಟ್ಟಣದ ಮೇಲೆ ಸಿಂಪಡಿಸುವರು. ತುಂತುರುಗಳು ಬಹಳ ಜಿನುಗಾಗಿ ಬೀಳುವ ದರಿಂದ ಈ ರೀತಿ ದ್ರವ ಬಿದ್ದದ್ದು ಕೆಲವು ವೇಳೆ ನಮಗೆ ತಿಳಿಯುವದೇ ಇಲ್ಲ.

ಈ ವಿಷವಾಯುಗಳಲ್ಲಿ ಎರಡು ಭಾಗಗಳನ್ನು ಮಾಡಬಹುದು. ಒಂದು ಬಹು ಬೇಗ ತನ್ನ ಶಕ್ತಿಯನ್ನು ಕಳೆದುಕೊಂಡು ನಿರಪಾಯಕಾ ರಿಯಾಗುವದು. ಗಾಳಿ, ಸಮಶೀತೋಷ್ಣ ಹವೆ ಮುಂತಾದವುಗಳ ಪರಿಣಾಮವಾಗಿ ಈ ವಿಧದ ವಾಯುಗಳು ಬಹು ಬೇಗ ಇಲ್ಲದಂತಾಗುವ ದರಿಂದ ಇವುಗಳಿಂದ ಹೆಚ್ಚು ಅಪಾಯವಿಲ್ಲ. ಲಂಗ ಮತ್ತು ನೋಸ್ ಇರಿಟಂಟ್ಸ ಗ್ಯಾಸುಗಳು ಈ ತರಗತಿಗೆ ಸೇರುವವು

ಆದರೆ ಇನ್ನು ಕೆಲವು ವಾಯುಗಳು ಭೂಮಿಯಲ್ಲೋ, ಮಾಳಿಗೆ ಯಲ್ಲೋ ಇಲ್ಲವೇ ವಸ್ತುಗಳಲ್ಲೋ ಸೇರಿಕೊಂಡು ಸಾವಕಾಶವಾಗಿ ಹವೆಯನ್ನು ಸೇರಿಕೊಳ್ಳುತ್ತ ಬಹಳ ಹೊತ್ತಿನ ವರೆಗೆ ತಮ್ಮ ಕಾಯಕ ವನ್ನು ನಡಿಸುತ್ತವೆ. ವಿಮಾನದಾಳಿಯಾಗಿ ಎಷ್ಟೋ ತಾಸುಗಳ ಮೇಲೆ ಇವುಗಳ ಪರಿಣಾಮವಾಗಲು ಮೊದಲುಮಾಡುತ್ತದೆ. ಎಲ್ಲರೂ ಅಜಾ ಗರೂಕತೆಯಿಂದಿರುವಾಗಲೇ ಇವು ತಮ್ಮ ಮಾರಕಕಾರ್ಯ ಸುರುವು ಮಾಡುವದರಿಂದ ಇವುಗಳಷ್ಟು ಘಾತಕವಾದವುಗಳು ಈ ಭೂಮಿಯಲ್ಲಿ ಮತ್ತೊಂದಿಲ್ಲ.

ವಿಷವಾಯುವಿನ ವಿಧಗಳು ಮತ್ತು ಅವುಗಳಿಂದಾಗುವ ಅಪಾಯ ಗಳು: —

ವಿಷವಾಯುಗಳಲ್ಲಿ ಅನೇಕ ವಿಧಗಳುಂಟು ಮತ್ತು ಬೇರೆ ಬೇರೆ

ವಿಷವಾಯುಗಳು ಬೇರೆ ಬೇರೆ ಅವಯವಗಳ ಮೇಲೆ ಕೆಟ್ಟ ಪರಿಣಾಮ ವನ್ನುಂಟುಮಾಡುತ್ತವೆ.

ಟಿಯರ್ ಗ್ಯಾಸುಗಳು ಕಣ್ಣಿನ ಮೇಲೆ ಕೆಟ್ಟ ಪರಿಣಾಮವನ್ನುಂಟುಮಾಡುತ್ತವೆ. ಈ ವಾಯುವಿನಿಂದ ಕಣ್ಣುಗಳು ಅಸಾಧ್ಯವಾಗಿ ಉರಿಯಲು ಮೊದಲುಮಾಡಿ, ಕಣ್ಣೀರು ಧಾರಾಕಾರವಾಗಿ ಸುರಿಯಲು ಆರಂಭವಾಗುತ್ತದೆ ಅದೆಷ್ಟೋ ವೇಳೆ ಕಣ್ಣನ್ನು ತೆರೆಯಲೇ ಆಗುವದಿಲ್ಲ. ಈ ವಿಷದ ದ್ರವದಿಂದ ಕಣ್ಣಿಗೆ ಹೆಚ್ಚು ಅಪಾಯವಾಗುವ ಸಂಭವವಿದೆಯಾದರೂ, ಸ್ವಚ್ಛ ಹವೆಯೊಳಗೆ ಹೋದ ಕೂಡಲೇ ಎಲ್ಲವೂ ಬೇಗ ಸರಿಯಾಗುವದು.

ನಿಮ್ಮ ಕಣ್ಣಿಗೆ ಯಾವದೇ ವಿಷವಾಯು ತಗಲಿದೆಯೆಂದು ನಿಮಗೆ ಸಂಶಯ ಬಂದರೆ ತಕ್ಷಣ ಆಸ್ಪತ್ರಿಗೆ ಹೋಗಿ ಕಣ್ಣು ತೊಳಿಸಿಕೊಂಡು ಬನ್ನಿರಿ.

ನೋಸ್ ಇರಿಟಂಟ ವಾಯುಗಳಿಂದ ಮೂಗಿನ ಮೇಲೆ ಪರಿಣಾಮವಾಗಿ ಮೂಗು ಕೆರೆಯಲು ಆರಂಭವಾಗುತ್ತದೆ. ಗಂಟಲು ಬಾತುಕೊಂಡು ಉಸಿರಾಡಿಸಲು ಕಷ್ಟವಾಗುತ್ತದೆ ನೆಗಡಿಯಾದಾಗ ಆಗುವ ಲಕ್ಷಣಗಳೆಲ್ಲ ಕಂಡುಬರುತ್ತವೆ. ಆದರೆ ಸ್ವಚ್ಛ ಹವೆಯಲ್ಲಿ ಹೋದೊಡನೆಯೇ ಈ ಪರಿಣಾಮಗಳೆಲ್ಲ ಸರಿಯಾಗುವವು. ಹವೆಯಲ್ಲಿ ಈ ವಾಯು ಬಹಳ ವೇಳೆ ಇರುವದಿಲ್ಲ.

ಲಂಗ ಇರಿಟಂಟ್ಸ ಗ್ಯಾಸುಗಳಿಂದ ಪುಪ್ಫುಸದ ಮೇಲೆ ಕೆಟ್ಟ ಪರಿಣಾಮವಾಗಿ, ಉಸುರಾಡಿಸಲು ಆಗದೆ ಗಂಟಲು ಕಟ್ಟಿದಂತಾಗುವದು. ಈ ವಾಯುವನ್ನು ಹೆಚ್ಚು ಉಸುರಾಡಿಸಿದರೆ ಮನುಷ್ಯನು ಸಾಯುವ ಸಂಭವವೂ ಉಂಟು. ಆದರಿಂದ ಹೃದಯಕ್ರಿಯೆಯ ಮೇಲೆ ಪರಿಣಾಮವಾದಂತಾಗಿ ಉಸುರಾಡಿಸಲು ಕಷ್ಟವಾದರೆ ಆ ಮನುಷ್ಯನನ್ನು ತಕ್ಷಣ ಆಸ್ಪತ್ರಿಗೆ ಕಳಿಸಬೇಕು. ಈ ವಾಯುವೂ ಹವೆಯಲ್ಲಿ ಹೆಚ್ಚು ಹೊತ್ತು ಇರಲಾರದು.

ಆದರೆ ಇವೆಲ್ಲವುಗಳಿಗಿಂತ ಬ್ಲಿಸ್ಟರ ಗ್ಯಾಸುಗಳು ಹೆಚ್ಚು ಅಪಾಯಕಾರಿಯು. ಇವುಗಳಲ್ಲಿ ಮಸ್ಟರ್ಡ ಗ್ಯಾಸ ಎಂಬದು ಅತಿ ಮುಖ್ಯವಾದದ್ದು. ಇದು ಕಂದೀ ಬಣ್ಣದ ಎಣ್ಣೆಯಂತಹ ಪದಾರ್ಥವಿದ್ದು ಅನೇಕವಸ್ತುಗಳೊಳಗೆ ಇಂಗಿಹೋಗುವದು. ಅದರಿಂದ ಈ ದ್ರವವು ಪ್ರಯೋಗಿಸಲ್ಪಟ್ಟಾಗ ಅದು ಮೈಮೇಲೆ ಹಾಕಿಕೊಂಡ ವಸ್ತ್ರಗಳಲ್ಲಿ, ಭೂಮಿಯಲ್ಲಿ ಡಾಂಬರ ರಸ್ತೆಯಲ್ಲಿ ಮಾಳಿಗೆಯಲ್ಲಿ ಮುಂತಾದವುಗಳಲ್ಲಿ ಇಂಗಿಕೊಳ್ಳುವದು. ನಂತರ ಬಿಸಿಲಿನ ಪರಿಣಾಮವಾಗಿ, ಸಾವಕಾಶವಾಗಿ ವಾಯುವಿನ ರೂಪದಲ್ಲಿ ಹವೆಯಲ್ಲಿ ಕೂಡಿಕೊಂಡು ಅಪಾಯವನ್ನುಂಟುಮಾಡುವದು.

ಈ ಗುಣದ ಪರಿಣಾಮವಾಗಿ ಮಸ್ಟರ್ಡ ಗ್ಯಾಸಿನ ಪರಿಣಾಮ ಇಂತಹ ಹೊತ್ತಿಗೇ ಆಗುವದು ಎಂದು ಹೇಳಲು ಸಾಧ್ಯವಿಲ್ಲ. ಅಷ್ಟೇ ಏಕೆ ನಮ್ಮ ಮನೆ ಮಾಳಿಗೆ, ನಮ್ಮ ವಸ್ತ್ರ ಮುಂತಾದವುಗಳಲ್ಲಿ ಈ ಗ್ಯಾಸು ಇಂಗಿಕೊಂಡದ್ದು ನಮಗೆ ತಿಳಿಯುವದೇ ಇಲ್ಲ. ಅದರಿಂದ ನಾವು ನಿಶ್ಚಿಂತೆಯಿಂದಿರುವೆವು. ಆದರೆ ಕೆಲವು ತಾಸುಗಳ ಮೇಲೆ ಈ ವಾಯುವಿನ ಪರಿಣಾಮವಾಗಲು ಆರಂಭಿಸುತ್ತದೆ ಮೈಮೇಲಿನ ವಸ್ತ್ರಗಳು ಈ ಗ್ಯಾಸನ್ನು ಇಂಗಿಕೊಂಡಿದ್ದರೆ ಮೈ ಕೆರೆಯಲು ಆರಂಭವಾಗುತ್ತದೆ. ಕೆಲವು ಸಮಯ ಮೈಯೆಲ್ಲ ಬೆಂದು ಹೋಗುವದು. ರಸ್ತೆಯಲ್ಲಿ ಇಂಗಿದ ವಾಯುವಿನಿಂದ ರಸ್ತೆಯ ಮೇಲೆ ಓಡಾಡುವವರ ಕಣ್ಣು ಹೃದಯ, ಮೂಗು, ತ್ವಚೆ ಮೊದಲಾದ ಅರಕ್ಷಿತ ಪ್ರದೇಶಗಳ ಮೇಲೆ ಭಯಂಕರ ಕೆಟ್ಟ ಪರಿಣಾಮವಾಗುತ್ತದೆ. ನಾವು ನಡೆಯುತ್ತಿರುವಾಗ ನಮ್ಮ ಬೂಟಗೆ ಈ ಗ್ಯಾಸು ಅಂಟಿಕೊಂಡು ಅಪಾಯ ಮಾಡಬಹುದು. ನಾವು ಮಲಗಿಕೊಂಡಿರುವಾಗ ನಮ್ಮ ಅಂಗಿಯಲ್ಲಿ ಇಂಗಿದ ಗ್ಯಾಸು ನಮ್ಮ ಮೈಯನ್ನು ಸುಡಬಹುದು. ನಾವು ನೀರು ಕುಡಿಯಬೇಕೆಂದರೆ ಆ ನೀರು ವಿಷಪೂರಿತ ವಾಗಿರಬಹುದು.

ಈ ರೀತಿ ಈ ವಿಷವಾಯು ಇದರಲ್ಲಿ ಇದೆ; ಇದರಲ್ಲಿ ಇಲ್ಲ; ಈ ದಿಕ್ಕಿನಿಂದ ನಮ್ಮ ಮೇಲೆ ಪರಿಣಾಮವಾಗಬಹುದು; ಎಂಬ ಸಂಗತಿ

ನಮಗೆ ಕೊನೆಯುವರೆಗೂ ತಿಳಿಯುವದಿಲ್ಲ. ಆದರಿಂದಲೇ ಇದರಷ್ಟು ಭಯಂಕರವಾದದ್ದು ಯಾವದೂ ಇಲ್ಲ ಎಂದು ಹೇಳಿದ್ದು

ಈ ಮಸ್ಟರ್ಡ ಗ್ಯಾಸಿನ ಪರಿಣಾಮಗಳನ್ನು ತಂಗಿಸಲು ನಾವು ಕೆಳಗಿನ ಉಪಾಯಗಳನ್ನು ಕೈಕೊಳ್ಳಬೇಕು.

೧ ಈ ವಾಯು ಪ್ರಯೋಗಿಸಲ್ಪಟ್ಟಿದೆಯೆಂದು ತಿಳಿದೊಡನೆಯೇ ನಮ್ಮ ಅರಿವೆ ಅಂಚಡಿ ಮುಂತಾದವುಗಳನ್ನೆಲ್ಲ ಒಂದೂ ಬಿಡದೆ ನೀರಿನಲ್ಲಿ ಹಾಕಿ ಒಂದು ತಾಸು ಕುದಿಸಬೇಕು. ಇದರಿಂದ ಅವುಗಳಲ್ಲಿ ವಿಷವು ಇಂಗಿದ್ದರೆ ಅದು ಹೊರಟುಹೋಗುವದು.

೨ ಅನ್ನ, ನೀರು, ಹಾಲು ತುಪ್ಪ ಮುಂತಾದವುಗಳಲ್ಲಿ ವಿಷವು ಸೇರಿಕೊಂಡಿರುವ ಸಂಭವವಿರುವದರಿಂದ ಅವುಗಳನ್ನೆಲ್ಲ ಬಿಸಾಡುವದು ಒಳ್ಳೆಯದು.

೩ ವಿಷವಾಯು ಪ್ರಯೋಗವಾದನೇಲೆ ಮಾಳಿಗೆ ನೆಲ ಮುಂತಾದವುಗಳನ್ನೆಲ್ಲ ನೀರಿನಿಂದ ಸ್ವಚ್ಛ ತೊಳೆಯುವದು ವಿಹಿತ. ಒಂದು ವೇಳೆ ಇವುಗಳಲ್ಲಿ ವಿಷದ್ರವ ಇಂಗಿದ್ದರೆ ಅದು ಹೊರಟು ಹೋಗುವದು.

೪ ವಿಷಪ್ರಯೋಗವಾದಾಗ ಅಲ್ಪ ಲಕ್ಷಣಗಳು—ಮೈ ತುರಿಸುವದು, ಗಂಟಲು ಕಟ್ಟಿಬರುವದು—ಕಂಡು ಬಂದೊಡನೆಯೇ ತಕ್ಷಣ ಆಸ್ಪತ್ರಿಗೆ ಹೋಗಬೇಕು. ತಡಮಾಡಿದರೆ ಪ್ರಯೋಜನವಿಲ್ಲ.

೫ ವಿಷವಾಯು ಪ್ರಯೋಗವಾದ ಮೇಲೆ ರಸ್ತೆಯೆಲ್ಲ ತೊಳೆದು ಶುದ್ಧ ಮಾಡುವವರೆಗೆ ರಸ್ತೆಯ ಮೇಲೆ ಓಡಾಡುವದರಲ್ಲಿ ಎಚ್ಚರಿರಲಿ. ಇಲ್ಲದಿದ್ದರೆ ರಸ್ತೆಯಲ್ಲಿ ಇಂಗಿದ ವಿಷವು ನಿಮ್ಮ ಬೂಟು, ವಸ್ತ್ರಗಳಲ್ಲಿ ಸೇರಿಕೊಳ್ಳುವ ಸಂಭವವದೆ. ಅದರಿಂದ ಸಂಶಯ ಬಂದಲ್ಲಿ ಇಂತಹ ಬೂಟು ವಸ್ತ್ರಗಳನ್ನು ತೆಗೆದು ಚಲ್ಲುವದು ವಿಹಿತ.

೬ ನಿಮ್ಮ ಮುಖವಾಡದ ಮೇಲೆ ಅವಲಂಬಿಸಬೇಡಿ. ಮುಖವಾಡವು ಕಣ್ಣು ಮೂಗುಗಳನ್ನು ರಕ್ಷಿಸಬಲ್ಲದೇ ವಿನಾ ನಿಮ್ಮ ಚರ್ಮವನ್ನು ಮಸ್ಟರ್ಡ ಗ್ಯಾಸಿನಿಂದ ರಕ್ಷಿಸಲಾರದು. ಇದಲ್ಲದೆ ಮುಖವಾಡ

ನಾಲ್ಕು ತಾಸುಗಳ ವರಗೆ ಪರಿಣಾಮಕಾರಿಯಿರುವದು. ಆದರೆ ಮಸ್ಟರ್ಡ ಗ್ಯಾಸಿನ ಪ್ರತಾಪವು ಅವೆಷ್ಟೋ ತಾಸುಗಳ ವರೆಗೆ—ಎರಡು ಮೂರು ದಿವಸಗಳ ವರೆಗೂ ಇರುವದು.

ವಿಷವಾಯು ಪ್ರಯೋಗವಾದಾಗ ಏನು ಮಾಡಬೇಕು:—

ವಿಷವಾಯುವಿನಿಂದ ನಮ್ಮ ಸೂಕ್ಷ್ಮ ಅವಯುವಗಳನ್ನು ರಕ್ಷಿಸಿಕೊಳ್ಳುವದು ನಮ್ಮ ಆದ್ಯಕರ್ತವ್ಯ. ಲಂಗ ಇರಿಟೆಂಟ್ಸ; ನೋಸ ಇರಿಟೆಂಟ್ಸ, ಟಿಯರ ಗ್ಯಾಸ ಮೊದಲಾದವುಗಳು ಪುಪ್ಪುಸ, ಮೂಗು, ಕಣ್ಣುಗಳನ್ನು ಮುಟ್ಟಿದಾಗಲೇ ಪರಿಣಾಮಕಾರಿಗಳೇ ಹೊರತು ಅನ್ಯಥಾ ಇಲ್ಲ. ಈ ಅವಯುವಗಳನ್ನು ರಕ್ಷಿಸುವ ಉತ್ತಮಸಾಧನೆ ಯೆಂದರೆ 'ಗ್ಯಾಸಮಾಸ್ಕ' ಅಥವಾ ಮುಖವಾಡ, ಈ ಮುಖವಾಡ ದಲ್ಲಿ ವಿಷವಾಯುವನ್ನು ಶುದ್ಧಗೊಳಿಸುವ ಸಾಧನವಿರುವದರಿಂದ ವಿಷ ವಾಯುವು ಈ ಅವಯುವಗಳಿಗೆ ಹೋಗುವದರೊಳಗೆ ಶುದ್ಧವಾಗುತ್ತದೆ. ಆದರೆ ಮುಖವಾಡಗಳಿಗೆ ಬಹಳ ಹಣ ಬೀಳುವದು; ಮೇಲಾಗಿ ಅವು ಭಾರತದಲ್ಲಿ ಇನ್ನೂ ತಯಾರಿಸಲ್ಪಡುವದಿಲ್ಲ. ಅದರಿಂದ ಶ್ರೀಮಂತರು ಮಾತ್ರ ಮುಖವಾಡಗಳನ್ನು ಸಂಗ್ರಹಿಸಬಲ್ಲರೇ ವಿನಾ ಸಾಧಾರಣ ಜನ ರಿಂದ ಅದು ಸಾಧ್ಯವಿಲ್ಲ.

ಅದರಿಂದ ನಾವು ಉಳಿದ ಉಪಾಯಗಳನ್ನು ಹುಡುಕೋಣ. ವಿಷವಾಯುವು ನಮ್ಮನ್ನು ಸಮೀಪಿಸದಂತೆ ಮಾಡುವದೇ ನಮ್ಮ ಉದ್ದೇಶ. ನಾವು ಆಶ್ರಯಸ್ಥಾನದಲ್ಲಿದ್ದರೆ ವಿಷದ್ರವಗಳಿಂದ ನಮಗೆ ಬಾಧೆಯಾಗಲಾರದು. ಇನ್ನು ವಿಷವಾಯುವನ್ನು ಎದುರಿಸುವ ಬಗೆ.

ವಿಷವಾಯುವು ಪ್ರಯೋಗವಾಗಿದೆಯೆಂದು ನಿಮಗೆ ತಿಳಿದೊಡನೆಯೇ (ಎ. ಆರ್. ಪಿ. ಯವರು ನಿಮಗೆ ಅದನ್ನು ತಿಳಿಸುವರು) ನೀವು ಕುಳಿತುಕೊಂಡ ಕೋಣೆಯ ಬಾಗಿಲು, ಕಿಡಕಿಗಳನ್ನೆಲ್ಲ ಮುಚ್ಚಿ ಹೊರಗಿನ ಹವೆಯು ಒಳಗೆ ಬರದಂತೆ ಮಾಡಿ; ಬಾಗಿಲಿಗೆ ಸಂದುಗಳಿದ್ದರೆ ಅರಿವೆ ತುಂಡುಗಳನ್ನು ಅವುಗಳಿಗೆ ಹಿಡಿಯಿರಿ.

ನಿಮ್ಮ ಸಂಶಯ ಪೂರ್ಣ ನಿರಸನವಾಗಬೇಕಿದ್ದರೆ ಬಾಗಿಲು

ಕಿಡಕಿಗಳಮೇಲೆ ಒದ್ದೆಬಟ್ಟೆಗಳನ್ನು ತೂಗುಹಾಕಿ. ಒದ್ದೆಬಟ್ಟೆಗಳು ವಿಷವಾಯುವನ್ನು ಹೀರಿಕೊಳ್ಳುವವು. ನಂತರ ಈ ಬಟ್ಟೆಗಳನ್ನು ಬಿಸಾಡಿಬಿಡುವದು ನೆನಪಿರಲಿ.

ಈ ರೀತಿ ಹೊರಗಿನ ಹವೆಯು ಒಳಗೆ ಬರದಂತೆ ಮಾಡಿದರೆ ನಿಮ್ಮ ಕೆಲಸವಾಯಿತು. ಒಳಗಿನವರಿಗೆ ಶುದ್ಧ ಹವೆಯ ಅಭಾವವು ಕೊಂಚ ಹೊತ್ತು ಆದರೂ ಅದರಿಂದ ಅಪಾಯವಾಗದಷ್ಟು ದೊಡ್ಡ ಕೋಣೆಯನ್ನು ಆರಿಸಿಕೊಂಡಿರುವದು ಉತ್ತಮ. ನಿಮ್ಮ ಕೋಣೆ ಯಲ್ಲಿ ಒಂದು ರೇಸ್ಪಿರೇಟರ ಇದ್ದರಂತೂ ಅತ್ಯುತ್ತಮ.

ನಿಮ್ಮ ಕೋಣೆ ಎರಡನೇ ಇಲ್ಲವೇ ಮೂರನೇ ಅಂತಸ್ತಿನಲ್ಲಿದ್ದ ರಂತೂ ಅತ್ಯುತ್ತಮ. ಏಕೆಂದರೆ ವಿಷವಾಯು ಗಾಳಿಗಿಂತ ಭಾರವಾಗಿ ರುವದರಿಂದ ಅದು ಮೇಲಕ್ಕೇರಲಾರದು ನೆಲಕ್ಕೆ ಹೊಂದಿಯೇ ತಂಗಿರು ತ್ತದೆ. ಅದರಿಂದ ನೀವು ಮಹಡಿಯಲ್ಲಿದ್ದರೆ ವಿಷವಾಯುವು ಅಲ್ಲಿಯ ವರೆಗೆ ಹಬ್ಬಲಾರದು. ಆದರಿಂದ ವಿಷವಾಯು ಪ್ರಯೋಗವಾದಾಗ ಒಂದು ಕೋಣೆ ಮೇಲಿನದು—ಬರೀ ಬಾಂಬು ದಾಳಿಯಾದಾಗ ಒಂದು ಕೆಳಗಿನದು—ಈ ರೀತಿ ಎರಡು ಕೋಣೆಗಳಿದ್ದರೆ ಅತ್ಯುತ್ತಮ. ವಿಷವಾಯು ಪ್ರಯೋಗನಡೆದಾಗ ನೀವು ಕೆಳಗಿನಿಂದ ಮೆಲೆ ಹೋಗಲು ಏನೂ ಅಡ್ಡಿ ಇಲ್ಲ. ಏಕೆಂದರೆ ಹೀಗೆ ಮಾಡುವದರಿಂದ ನೀವು ವಿಷ ವಾಯುವಿನಿಂದ ದೂರವೇ ಹೋಗುತ್ತಿರುವಿರಿ.

ನೀವು ಬೈಲಿನಲ್ಲಿರುವಾಗ ವಿಷವಾಯು ಪ್ರಯೋಗಿಸಲ್ಪಟ್ಟರೆ ನಿಮ್ಮ ಮೂಗನ್ನು ಭದ್ರವಾಗಿ ಹಿಡಿದುಕೊಂಡು ಗಾಳಿಬೀಸುವ ವಿರುದ್ಧ ದಿಕ್ಕಿನಿಂದ ತ್ವರೆಯಿಂದ ಓಡಿರಿ. ಗಾಳಿಯು ನಿಮ್ಮ ವಿರುದ್ಧ ದಿಕ್ಕಿಗೆ ವಿಷವಾಯುವನ್ನು ದೂಡುವದರಿಂದ ನಿಮಗೆ ಅಪಾಯವಿಲ್ಲ. ಆಶ್ರಯ ಸ್ಥಾನವನ್ನು ಸೇರಿದವರು ಮೊದಲು ನಿಮ್ಮ ಬಟ್ಟೆಬರೆಗಳನ್ನು ಕಳಚಿ ಬಿಡಿ. ಏಕೆಂದರೆ ನಿಮ್ಮ ಬಟ್ಟೆಗಳು ವಿಷವಾಯುವನ್ನು ಹೀರಿಕೊಂಡಿ ರುವ ಸಂಭವವುಂಟು.

ನೀವು ಬೈಲಿನಲ್ಲಿದ್ದಾಗ ನಿಮ್ಮ ಮೇಲೆ ವಿಷದ್ರವಗಳು ಬಿದ್ದರೆ ಒಮ್ಮೆಲೇ ಅದನ್ನು ಮೈತುಂಬ ವರಿಸಿಬಿಡಬೇಡಿ. ಹಾಗೆ ಮಾಡುವದ

ರಿಂದ ಇಡೀ ಮೈ ಗಮೆಯುವ ಸಂಭವವುಂಟು. ಆದರೆ ಒಂದು ಟವಲನ್ನು ತೆಗೆದುಕೊಂಡು ಸಾವಕಾಶ ಆ ದ್ರವವನ್ನು ಟವಲಿನಲ್ಲಿ ಇಂಗಿಸಿ. ನಂತರ ಆ ಟವಲನ್ನು ಬಿಸುಡಿಬಿಡಿ.

ವಿಷವಾಯು ಪ್ರಯೋಗವಾದವರನ್ನು ಉಪಚರಿಸಲು ಪ್ರವೀಣರೇ ಆಗಬೇಕೆ ವಿನಾ ನಿಮ್ಮಿಂದ ಸಾಧ್ಯವಿಲ್ಲ. ಅದರಿಂದ ಅವರನ್ನು ಕರೆದೊಯ್ಯಲು ಅಂಬುಲನ್ಸದಳದವರು ಬರುವವರೆಗೆ ನೀವು ಏನು ಮಾಡುವದೂ ಬೇಡ. ಬೇಕಾದರೆ ಅವರ ಬಟ್ಟೆಬರೆಗಳನ್ನು ಬದಲಿಸಿರಿ. ಕುಡಿಯಲು ಮಾದಕ ಪದಾರ್ಥಗಳನ್ನು ಕೊಡುವದು ಬೇಡ. ಶಾಖದ ಸಲುವಾಗಿ ಸ್ವಲ್ಪ ಟೀ ಇಲ್ಲವೆ ಕಾಫಿ ಕೊಡಲು ಅಡ್ಡಿ ಇಲ್ಲ.

ಈ ವಿಷವಾಯುಗಳ ಪರಿಣಾಮವು ಬಹು ಬೇಗ ಘಾತಕವಾಗುವದರಿಂದ ತಾವೇ ಉಪಚಾರಗಳನ್ನು ಮಾಡುತ್ತ ಕೂಡ್ರದೆ ಆದಷ್ಟು ಬೇಗ ವಿಷವಾಯು ಪೀಡಿತರಾದವರನ್ನು ಆಸ್ಪತ್ರಿಗೆ ಸಾಗಿಸುವದು ನೆಟ್ಟಗೆ. ಕೈಮೀರುವದರೊಳಗೆ ಉಪಚಾರ ಮಾಡಿಸಿದಲ್ಲಿ ಯಾವ ಹೆದರಿಕೆಯೂ ಇಲ್ಲ.

---

೮ ಎ. ಆರ್. ಪಿ. ಶೆಲ್ಟರುಗಳು

ಎ. ಆರ್. ಪಿ. ಶೆಲ್ಟರುಗಳ ವಿಷಯಕ್ಕೆ ಬರೆದಷ್ಟು ಸಾಕಾಗುವದಿಲ್ಲ. ಅಂಡರಸನ್ ಶೆಲ್ಟರುಗಳು, ಕಬ್ಬಿಣದ, ಉಕ್ಕಿನ, ಇಲ್ಲವೆ ಕಾಂಕ್ರೀಟಿನ ಶೆಲ್ಟರುಗಳು ಮೊದಲಾದ ಅನೇಕ ಬಗೆಯ ಶೆಲ್ಟರುಗಳಿವೆ. ಅತ್ಯಗ್ಯವಿದ್ದರೆ ಸರಕಾರವು ಸಾರ್ವಜನಿಕರಿಗಾಗಿ ಶೆಲ್ಟರುಗಳನ್ನು ಕಟ್ಟುವದು. ಆದರೆ ಇಡೀ ಪಟ್ಟಣದ ಜನರಿಗೆ ಪೂರೈಸುವಷ್ಟು ಶೆಲ್ಟರುಗಳನ್ನು ಕಟ್ಟುವದು ಸುತರಾಂ ಸಾಧ್ಯವಿಲ್ಲ ತಾನೆ. ಅದರಿಂದ ಪ್ರತಿಯೊಬ್ಬನೂ ತನ್ನ ಕುಟುಂಬಕ್ಕೆ ಸಾಕಾಗುವಷ್ಟು ಆಶ್ರಯಸ್ಥಾನವನ್ನು ಕಟ್ಟಿಕೊಳ್ಳುವದು ಮೇಲು. ಇದಕ್ಕೆ ಹೆಚ್ಚು ಸ್ಥಳ ತಗಲುವದಿಲ್ಲ. ಹೆಚ್ಚು ಖರ್ಚೂ ಬೇಕಾಗಿಲ್ಲ.

ಈ ಕೆಳಗೆ ಕೊಟ್ಟ ಶೆಲ್ಟರುಗಳೆಲ್ಲ ಜನರಿಗೆ ಅಲ್ಪಸ್ವಲ್ಪ ಮಾಹಿತಿ ಮತ್ತು ರಕ್ಷಣೆ ಸಿಗಲೆಂದು ಕೊಟ್ಟಿದೆ. ಅವುಗಳ ಬಗ್ಗೆ ಸವಿಸ್ತರ ಮಾಹಿತಿ ಬೇಕಾದಲ್ಲಿ ಕೂಡಲೇ ಮುಂಬೈ ಸರಕಾರಕ್ಕೆ ಬರೆದು ತರಿಸಿ ಕೊಳ್ಳಬೇಕು.

ವಿವಿಧ ನಮೂನೆಯ ಶೆಲ್ಟರುಗಳು:—

ಅ ಮನೆಯೊಳಗಿನ ಶೆಲ್ಟರುಗಳು:—

೧ ಭದ್ರವಾದ ಕೋಣೆ:—ಒಂದು ಕೋಣೆಯನ್ನು ಉತ್ತಮ ಆಶ್ರಯಸ್ಥಾನವನ್ನಾಗಿ ಮಾಡುವ ವಿಧಾನವನ್ನು ಕುರಿತು ಈ ಮೊದಲೇ ಬರೆದಿದೆ.

೨ ನೆಲಮಾಳಿಗೆಗಳು

ನಮ್ಮಲ್ಲಿ ಅನೇಕ ಮನೆಗಳಿಗೆ ಮತ್ತು ಅಂಗಡಿಗಳಿಗೆ ನೆಲಮಾಳಿಗೆಗಳುಂಟು. ಬಾಂಬಿನ ಚೂರಿನಿಂದ ರಕ್ಷಿಸಿಕೊಳ್ಳಲು ನೆಲಮಾಳಿಗೆಯಷ್ಟು ಹಿತಕಾರಿಯಾದ ಆಶ್ರಯ ಇನ್ನೊಂದಿಲ್ಲ ಆದರೆ ಈ ಕೆಳಗಿನ ಸಂಗತಿಗಳನ್ನು ನೆನಪಿನಲ್ಲಿಡಬೇಕು.

i ನೆಲಮಾಳಿಗೆಯ ಛಾವಣಿ ಸಾಕಷ್ಟು ಭದ್ರವಾಗಿರಬೇಕು. ಅಂದರೆ ಒಂದು ವೇಳೆ ಮನೆಯು ಕುಸಿದುಬಿದ್ದರೆ ನೆಲಮಾಳಿಗೆಯು ಆ ಭಾರವನ್ನು ತಡೆಯುವಷ್ಟು ಭದ್ರವಾಗಿರಬೇಕು. ಇಲ್ಲದಿದ್ದರೆ ಒಳಗಿನವರಿಗೆ ಜೀವಂತ ಸಮಾಧಿಯಾದೀತು.

ii ನೆಲಮಾಳಿಗೆಯಲ್ಲಿ ಹವೆ ಮತ್ತು ನೀರು ಬೆಳಕುಗಳ ಅಭಾವವಿರಕೂಡದು ನಮ್ಮಲ್ಲಿಯ ನೆಲಮಾಳಿಗೆಗೆ ಬೆಳಕಿಂಡಿಯೇ ಇರುವದಿಲ್ಲ. ಆದರಿಂದ ಹೊಸ ಬೆಳಕಿಂಡಿಗಳನ್ನು ಕಟ್ಟಿಸಿ ಅದಕ್ಕೆ ಜಾಳಿಗೆಯ ಹೊದಿಕೆಯನ್ನು ಹಾಕುವದು ಒಳಿತು.

iii ನೆಲಮಾಳಿಗೆಗೆ ಎರಡು ಬಾಗಿಲುಗಳಿರಬೇಕು. ಒಂದು ಬಾಗಿಲು ಪ್ರಸಂಗವಶಾತ್ ಕಟ್ಟಿದರೆ ಇನ್ನೊಂದು ಬಾಗಿಲಿನಿಂದ ಪಾರಾಗಬಹುದು.

iv ಆದರೆ ವಿಷವಾಯು ಪ್ರಯೋಗವಾದಾಗ ನೆಲಮಾಳಿಗೆಗಳು ಅಷ್ಟು ಹಿತಕಾರಿಗಳಲ್ಲ. ವಿಷವಾಯು ಹವೆಗಿಂತ ಭಾರವಿರುವದರಿಂದ

ನೆಲಮಾಳಿಗೆಯಲ್ಲಿ ಸಸಾರಾಗಿ ಇಳಿಯುವ ಸಂಭವವಿದೆ.

೩ ಮನೆಯೊಳಗೇ ಟ್ರೆಂಚು ಶೆಲ್ಟರು:—

ಮನೆಯ ಹೊರಗೆ ಶೆಲ್ಟರುಗಳನ್ನು ಕಟ್ಟಿಕೊಳ್ಳಲು ಸ್ಥಳವಿಲ್ಲದವರು ಮನೆಯೊಳಗೇ ಟ್ರೆಂಚು ಶೆಲ್ಟರುಗಳನ್ನು ಕಟ್ಟಿಕೊಳ್ಳಬಹುದು. ಹೀಗೆ ಕಟ್ಟಿಕೊಳ್ಳುವ ವಿಧಾನ ಮುಂದೆ ಹೇಳಿದೆ.

ಮನೆಯಲ್ಲಿ ಕಟ್ಟಿದ ಈ ಶೆಲ್ಟರುಗಳನ್ನು ಉಪಯೋಗವಿಲ್ಲದಿದ್ದಾಗ ಮುಚ್ಚುವ ವ್ಯವಸ್ಥೆ ಇಟ್ಟುಬಿಟ್ಟರೆ ಅದರಿಂದ ಯಾವ ತೊಂದರೆಯೂ ಇಲ್ಲ. ಆದರೆ ಮನೆಯಲ್ಲಿಯ ಶೆಲ್ಟರುಗಳಿಗೆ ಹವೆ ಮತ್ತು ಬೆಳಕಿನ ಅಭಾವದ ಭಯ ಹೆಚ್ಚು.

ಮನೆಯ ಹೊರಗಿನ ಶೆಲ್ಟರುಗಳು:—

i ಸರಫೇಸ ಶೆಲ್ಟರುಗಳು(Surface Shelters):—

ಮನೆಯ ಹೊರಗೆ ನಿಮಗೆ ತೋಟವಿದ್ದರೆ ತೋಟದಲ್ಲಿ ಒಂದು ಸಣ್ಣ ಮನೆಯಂತಿರುವ ಶೆಲ್ಟರನ್ನು ಕಟ್ಟಿಕೊಳ್ಳುವದು ಉತ್ತಮ. ಈ ಶೆಲ್ಟರಿನ ಗೋಡೆಗಳು ಭದ್ರವಾಗಿರಬೇಕು.—ಅಂದರೆ ಕಾಂಕ್ರೀಟಿನಿಂದ ಇಲ್ಲವೆ ಇಟ್ಟಂಗಿ ಗಚ್ಚುಗಳಿಂದ ಕಟ್ಟಿರಬೇಕು. ಮೊದಲು ನಿಮ್ಮ ಮನೆಯವರಿಗೆಲ್ಲ ಸಾಕಾಗುವಷ್ಟು ದೊಡ್ಡದಾದ ಕೊಠಡಿಯೊಂದನ್ನು ಕಟ್ಟಿರಿ. ಪ್ರತಿಯೊಬ್ಬನಿಗೆ ಕನಿಷ್ಠ ೮ ಸ್ಕ್ವೇರ ಫೂಟು ಜಾಗೆ, ಮತ್ತು ೩೫ ಕ್ಯೂಬಿಕ್ ಫೂಟು ಹವೆ ಸಿಕ್ಕುವಷ್ಟು ದೊಡ್ಡದಿರಬೇಕು. ನಿಮ್ಮ ಕೋಣೆಯು ನೆಲದಿಂದ ನಾಲ್ಕು ಫೂಟು ತಗ್ಗಿನಲ್ಲಿದ್ದರೆ ಉತ್ತಮ. ಕೋಣೆಯ ಬಾಗಿಲು ನೇರವಾಗಿರದೆ ಕೊಂಚ ವಾರೆಯಾಗಿರಲಿ. ಈ ಕೋಣೆ ನೆಲದಿಂದ ಮೇಲೆ ನಾಲ್ಕು ಫೂಟು ಮಾತ್ರ ಹಾಯ್ದಿರಲಿ. ಈ ರೀತಿ ಕೋಣೆ ಕಟ್ಟಿದ ಮೇಲೆ ಆ ಕೋಣೆ ಮೇಲಿನಿಂದ ಕಾಣದಿರಪಂತೆ ಅದರ ಸುತ್ತಲೂ, ಮೇಲೆ ಉಸುಕಿನ ಚೀಲಗಳನ್ನಿಡಿ. ಜೇಡಿ ಮಣ್ಣಿನ ಗುಪ್ಪೆಯನ್ನು ಅದರ ಮೇಲೆ ಮಾಡಿಬಿಡಿ. ಬಾಗಿಲೊಂದನ್ನು ಬಿಟ್ಟು ಉಳಿದ ಭಾಗ ಈ ರೀತಿ ಮುಚ್ಚಿಬಿಟ್ಟರೆ ನಿಮ್ಮ ಆಶ್ರಯಸ್ಥಾನದ ಗುರುತು ವಗೈರೆ ಹತ್ತುವದಿಲ್ಲ. ಮತ್ತು ಒಂದು ವೇಳೆ ಬಾಂಬೊಂದು ನೇರವಾಗಿ ಇದರ ಮೇಲೆ ಬಿದ್ದರೂ ಸ್ಫೋಟವಾಗುವದಿಲ್ಲ.

ಎಚ್ಚರಿಕೆಗಳು:—

i ನಿಮ್ಮ ಶೆಲ್ಟರು ಮನೆಯಿಂದ ಕೊಂಚ ದೂರವಿರಲಿ. ಅಂದರೆ ಮನೆಯು ಬಿದ್ದರೆ ಅದರ ಮೇಲೆಯೇ ಬೀಳುವಂತಿರಬಾರದು.

ii ನಿಮ್ಮ ಶೆಲ್ಟರಿನಲ್ಲಿ ತೇವು ಆಡದಂತೆ ಎಚ್ಚರದಿಂದಿರಿ. ಹೊರಗಿನಿಂದ ನೀರೂ ಬರುವಂತಿರಬಾರದು. ಆದರಿಂದ ಗಚ್ಚಿನ ನೆಲ ಗಟ್ಟು ಇಟ್ಟರೆ ಚೆನ್ನ.

iii ಅದಕ್ಕೆ ಹಿಂದೊಂದು ಮುಂದೊಂದು ಹೀಗೆ ಎರಡು ಬಾಗಿಲುಗಳಿರಬೇಕು.

iv ಚನ್ನಾಗಿ ಹವೆಯಾಡುವಂತಿರಬೇಕು. ಇದಕ್ಕಾಗಿ ಕಿಂಡೆಗಳನ್ನು ಇಲ್ಲವೆ ಕಿಡಕಿಗಳನ್ನು ಇಟ್ಟರೆ ಅವುಗಳಿಗೆ ಜಾಳಿಗೆಯನ್ನು ಹಾಕಿಸಲು ಮರೆಯಬೇಡಿರಿ. ಮತ್ತು ವಿಷವಾಯು ಪ್ರಯೋಗವಾದಾಗ ಇವುಗಳನ್ನು ಭದ್ರವಾಗಿ ಮುಚ್ಚಲು ಬರುವಂತೆ ವ್ಯವಸ್ಥೆ ಇಡಬೇಕು.

v ಮೊದಲೇ ಹೇಳಿದಂತೆ ಅವಶ್ಯವಾದ ಸಾಮಾನುಗಳನ್ನು ನಿಮ್ಮ ಶೆಲ್ಟರುಗಳಲ್ಲಿ ಸೇಖರಿಸಿಡಿ.

೨ ಟ್ರೆಂಚ ಶೆಲ್ಟರುಗಳು(Trench Shelters) (ಕಾಲುವೆಯಂತಿದ್ದ ಆಶ್ರಯಗಳು:—

ಸರಫೇಸ ಶೆಲ್ಟರುಗಳಿಗಿಂತಲೂ ಟ್ರೆಂಚ ಶೆಲ್ಟರುಗಳು ಉತ್ತಮ. ಏಕಂದರೆ ಟ್ರೆಂಚ ಶೆಲ್ಟರುಗಳು ಕಡಿಮೆ ಖರ್ಚಿನಿಂದ ಕಟ್ಟಲ್ಪಡುವವು. ಮತ್ತು ಮಶಿನ್ನುಗನ್ನು ಗುಂಡುಗಳು ಮತ್ತು ಬಾಂಬು ಚೂರುಗಳಿಂದ ಉತ್ತಮ ರಕ್ಷಣೆ ಟ್ರೆಂಚಶೆಲ್ಟರಗಳಿಂದ ಸಿಗುವದು.

ಟ್ರೆಂಚಶೆಲ್ಟರುಗಳೆಂದರೆ ಮನುಷ್ಯನು ಸಸಾರಾಗಿ ಕೂಡಬಹುದಾದ ಕಾಲುವೆಗಳೇ ಹೊರತು ಮತ್ತೇನೂ ಇಲ್ಲ. ಈ ಕಾಲುವೆಗಳನ್ನು ಮಾಡುವ ರೀತಿ:—

ಟ್ರೆಂಚ ಶೆಲ್ಟರುಗಳ ಉದ್ದ ಪ್ರಮಾಣ ಅದು ಹಿಡಿಯಬೇಕಾದ ಜನರನ್ನು ಅವಲಂಬಿಸಿದೆ. ೫೦ ಜನರು ಕೂಡಬಹುದಾದ ಒಂದೇ ಒಂದು ಟ್ರೆಂಚನ್ನು ತೆಗೆಯುವದಕ್ಕಿಂತ ೧೦ ಜನರು ಕೂಡುವ ಐದು ಟ್ರೆಂಚುಗಳನ್ನು ತೆಗೆಯುವದು ಉತ್ತಮ. ಏಕಂದರೆ ಒಂದು ವೇಳೆ

ಒಂದು ಟ್ರೆಂಚಿಗೆ ಬಾಂಬಿನಿಂದ ಅಪಘಾತ ಸಂಭವಿಸಿದರೆ ಉಳಿದ ಟ್ರೆಂಚುಗಳಲ್ಲಿಯವರಾದರೂ ಸುರಕ್ಷಿತವಾಗಿರುವರು.

ಒಬ್ಬ ಮನುಷ್ಯನಿಗೆ ಎರಡೂವರೆ ಫೂಟು ಉದ್ದ ಸ್ಥಳ ಸಿಗುವಂತೆ ಟ್ರೆಂಚು ತೆಗೆಯಬೇಕು. ಅಂದರೆ ನಿಮ್ಮಲ್ಲಿ ೮ ಜನರಿದ್ದರೆ ೨೦ ಫೂಟು ಉದ್ದವಿರುವ ಕಾಲುವೆ ತೆಗೆಯಬೇಕು. ಈ ಕಾಲುವೆ ಆರು ಫೂಟು ಉದ್ದವಾಗಿರಲಿ. ಮತ್ತು ನೆಲದಮೇಲೆ ನಾಲ್ಕೂವರಿ ಫೂಟು ಅಗಲವಿದ್ದು ತಳದಲ್ಲಿ ಮೂರೂವರಿ ಫೂಟು ಅಗಲವಿರಲಿ. ಈ ಟ್ರೆಂಚದ ಪಕ್ಕಗಳು ಭದ್ರವಾಗಿರುವದು ವಾಸಿ. ಇಲ್ಲದಿದ್ದರೆ ಬಾಂಬು ಸ್ಫೋಟವಾದ ರಭಸಕ್ಕೆ ಪಕ್ಕಗಳು ಕುಸಿಯಬಹುದು. ಹೀಗಾಗದಂತೆ ಪಕ್ಕಗಳನ್ನು ಗಚ್ಚಿನಿಂದ ಮತ್ತು ಇಟಂಗೆಯಿಂದ ಕಟ್ಟುವದು ಒಳಿತು. ಕಾಂಕ್ರಿಟಿನಿಂದ ಇಲ್ಲವೆ ಉಕ್ಕಿನ ತಗಡುಗಳಿಂದ ಕಟ್ಟುವದಾದರೆ ಸರ್ವೋತ್ತಮ. ಇಲ್ಲದಿದ್ದರೆ ಗಚ್ಚೇ ಸಾಕು.

ಈ ಟ್ರೆಂಚಿಗೆ ಎರಡು ದ್ವಾರಗಳಿರಬೇಕು. ಅಂದರೆ ಪಾವಟಿಗೆಗಳನ್ನು ಮಾಡಿ ಜನರು ಮಕ್ಕಳು ಇಳಿಯಲು ಸಾಧ್ಯವಾಗುವಂತೆ ವ್ಯವಸ್ಥೆ ಇಡಬೇಕು.

ಟ್ರೆಂಚಿನೊಳಗೆ ಸರಿಯಾಗಿ ಕುಳಿತುಕೊಳ್ಳಲು ಕುರ್ಚಿ ಮುಂತಾದವುಗಳಿದ್ದರೆ ಅಡ್ಡಿಯಿಲ್ಲ. ಇದಕ್ಕಿಂತಲೂ ಉತ್ತಮ ವ್ಯವಸ್ಥೆಯೆಂದರೆ ಟ್ರೆಂಚನ್ನು ಅಗೆಯುವಾಗಲೇ ಬುಡದಲ್ಲಿ ಆಸನವಾಗುವಂತೆ ಅಗೆಯುವದು—ಪೂಲು ಕಟ್ಟುವದಿಲ್ಲವೇ ಹಾಗೆ. ಅಂದರೆ ಬುಡದಲ್ಲಿ ಒಂದು ಪಕ್ಕಕ್ಕೆ ಹತ್ತಿ ೨ ಫೂಟು ೩ ಫೂಟು ಎತ್ತರವಿರುವ ಕಟ್ಟೆಯಿದ್ದರೆ ಉತ್ತಮ ಆಸನವಾಗುವದು. ಮಕ್ಕಳು ಮರಿಗಳು ಮಲುಗಲೂ ಅನುಕೂಲವಾದ ಕಟ್ಟೆಯಾಗುವದು. ಇಷ್ಟೆಲ್ಲ ವ್ಯವಸ್ಥೆ ಮೇಲೆ ಹೇಳಿದಷ್ಟು ಆಳತೆಯಲ್ಲಿಯೇ ಆಗಲಿ. ಇದರ ಸಲುವಾಗಿಯೇ ಟ್ರೆಂಚನ್ನು ಉದ್ದ ಅಗಲ ಇಲ್ಲವೆ ತಗ್ಗಿನಲ್ಲಿ ಬೆಳಿಸುವ ಅವಶ್ಯಕತೆ ಇಲ್ಲ.

ಈ ಪ್ರಕಾರ ತಯಾರಿಸಿದ ಟ್ರೆಂಚನ್ನು ಸಾಕಷ್ಟು ದೊಡ್ಡವಾದ ಕಬ್ಬಿಣದ ಹಲಿಗೆಗಳಿಂದಲೋ ಇಲ್ಲವೆ ಕಾಕ್ರಿಟನಿಂದಲೋ ಮುಚ್ಚಬೇಕು. ಸಾಗವಾಸೀಹಲಿಗೆಗಳಿಗೆ ಡಾಂಬರುಬಡಿದು ಉಪಯೋಗಿಸಿದರು

ಸರಿಯೇ. ನಂತರ ಈ ಹೊದಿಕೆಯ ಮೇಲೆ ಎರಡು ಥರ ಉಸುಕಿನ ಚಿಲಗಳನ್ನೊ, ಇಲ್ಲವೇ ಎರಡು ಫೂಟು ದಪ್ಪವಾಗಿರುವ ಜೇಡಿ ಮಣ್ಣನ್ನೊ ಹಾಕಿರಿ. ಎರಡು ಕಡೆಯ ಬಾಗಿಲುಗಳು ಈ ಉಸುಕಿನಿಂದ ಇಲ್ಲವೆ ಮಣ್ಣಿನಿಂದ ಯಾವತ್ಕಾಲದಲ್ಲೂ— ಅಂದರೆ ಒಂದು ವೇಳೆ ಭೂಮಿ ಅದರುವದರಿಂದ ಇವು ಅತ್ತಿತ್ತ ಹರವಿದರೂ— ಮುಚ್ಚಿಹೋಗದಂತೆ ಎಚ್ಚರಿಕೆ ವಹಿಸಬೇಕು.

ನಂತರ ಈ ದ್ವಾರಗಳಿಗೆ ಮೇಲಿನಿಂದ ಕಬ್ಬಿಣದ ಬಾಗಿಲು ಹಾಕಿ. ಅದು ಒಳಗಿನಿಂದ ತೆಗೆಯಲು ಮತ್ತು ಮುಚ್ಚಲು ಬರುವಂತೆ ವ್ಯವಸ್ಥೆಯನ್ನಿಡಿ. ಈ ಬಾಗಿಲುಗಳು ದ್ವಾರಕ್ಕಿಂತ ಬಹಳ ದೊಡ್ಡವಾಗಿರಲಿ. ಇಲ್ಲದಿದ್ದರೆ ಒಮ್ಮೊಮ್ಮೆ ಒತ್ತಡಗಳ ಪರಿಣಾಮವಾಗಿ ಈ ಬಾಗಿಲುಗಳು ಟ್ರೆಂಚುಗಳೊಳಗೆ ಹೋಗಿ ಅಲ್ಲಿದ್ದ ಜನರಿಗೆ ಅಪ್ಪಳಿಸಲೂ ಬಹುದು. ಹೀಗಾಗದಂತೆ ಎಚ್ಚರಿಕೆತೆಗೆದುಕೊಳ್ಳುವದು ಅವಶ್ಯ.

ವಿಷವಾಯು ಪ್ರಯೋಗವಾದಾಗ ವಾಯುವು ಬಾಗಿಲು ಮೂಲಕ ಒಳಗೆ ಬರದಂತೆ ಬಾಗಿಲಿಗೆ ದಪ್ಪವಾದ ಪಡವೆಯನ್ನು ಇಳಿಬಿಟ್ಟಿರಿ. ವಿಷವಾಯುಪ್ರಯೋಗವಾದಾಗ ಈ ಪಡದೆಯನ್ನು ನೀರಿನಲ್ಲಿ ತೊಯ್ಯಿಸಬೇಕೆಂದು ಈ ಮೊದಲೇ ಹೇಳಿದೆ.

ಈ ರೀತಿ ಬಾಗಿಲುಗಳನ್ನು ಮುಚ್ಚಿ ಮೇಲೆ ಹೇಳಿದಷ್ಟು ದೊಡ್ಡವಿರುವ ಟ್ರೆಂಚುಗಳಲ್ಲಿ, ಮೇಲೆ ಹೇಳಿದ ಲೆಕ್ಕಕ್ಕೆ ತಕ್ಕಂತೆ ಜನರು ಕುಳಿತಲ್ಲಿ—ಅವರು ಮೂರು ತಾಸುಗಳವರೆಗೆ ಹೊರಗಿನ ಹವೆಯ ಸಹಾಯವಿಲ್ಲದೆ ಕುಳಿತಿರಲು ಆಗುವದೆಂದು ಕಂಡುಬಂದಿದೆ. ಅದರಿಂದ ವಿಷವಾಯುಗಳಿಂದಲೂ ಟ್ರೆಂಚುಗಳಲ್ಲಿ ಉತ್ತಮ ಸಂರಕ್ಷಣೆಯಾಗುವದು.

ಎಚ್ಚರಿಕೆಗಳು:—

i ಮೇಲೆ ಹೇಳಿದಂತೆ ಟ್ರೆಂಚು ಹತ್ತರವಿದ್ದ ಮನೆ ಗಿಡಗಳಿಂದ ದೂರವಾಗಿರಲಿ.

ii ಟ್ರೆಂಚಿನಲ್ಲಿ ತೇವು ಆಡದಂತೆ ಎಚ್ಚರಿಕೆ ವಹಿಸಿ. ಹೊರಗಿನಿಂದ ನೀರೂ ಬರದಂತೆ ನೋಡಿಕೊಳ್ಳಬೇಕು.

iii ಟ್ರೆಂಚಿನ ಗೋಡೆಗಳು ಭದ್ರವಾಗಿರಲಿ. ಇಲ್ಲದಿದ್ದರೆ ಅದು ಕುಸಿಯುವದು.

iv ಕುಸಿಯುವದನ್ನು ತಪ್ಪಿಸುವದಕ್ಕೆ ಇನ್ನೊಂದು ಉಪಾಯವುಂಟು ನಿಮ್ಮ ಟ್ರೆಂಚಿನಿಂದ ಐದಾರು ಫೂಟು ದೂರದಲ್ಲಿ ಸುತ್ತಲೂ ಎರಡು ಫೂಟು ಅಗಲ ಮೂರು ಫೂಟು ತಗ್ಗು ಇರುವ ಒಂದು ಕಾಲುವೆಯನ್ನು ತೋಡಿರಿ. ಒಂದು ವೇಳೆ ಭೂಮಿಯಲ್ಲಿ ಕಂಪನಗಳಾದರೆ ಈ ಎರಡನೇ ಕಾಲುವೆ ಮೊದಲು ಕುಸಿದು ನಿಮ್ಮ ಟ್ರೆಂಚು ಸುರಕ್ಷಿತವಾಗಿರುವದು.

ಒಟ್ಟಿನಲ್ಲಿ

ಒಟ್ಟಿನಲ್ಲಿ ಬಾಂಬು ದಾಳಿಗಳಿಂದ ಉತ್ತಮ ರಕ್ಷಣೋಪಾಯಗಳಾದ ಇಂತಹ ಶೆಲ್ಟರುಗಳನ್ನು ಪ್ರತಿಯೊಬ್ಬರೂ ಕಟ್ಟಿಕೊಳ್ಳಬೇಕೆಂದು ಒತ್ತಿ ಹೇಳುವ ಅವಶ್ಯಕತೆಯಿಲ್ಲ. ಸರಕಾರದವರು ಕಟ್ಟಿಸಬಹುದಾದ ಸಾರ್ವಜನಿಕ ಆಶ್ರಯಗಳ ಕಡೆಗೆ ನೋಡುತ್ತ ಕೂಡದೆ ಅನುಕೂಲವಿದ್ದವರೆಲ್ಲರೂ ಈ ಹೊತ್ತಿನಿಂದಲೇ ಮೇಲೆ ಹೇಳಿದ ಶೆಲ್ಟರುಗಳಲ್ಲಿ ತಮತಮಗೆ ಅನುಕೂಲವಾದದ್ದನ್ನು ಕಟ್ಟಲು ಸುರುವು ಮಾಡಬೇಕು. ಇದಕ್ಕೆ ಖರ್ಚೂ ಹೆಚ್ಚು ತಗಲುವದಿಲ್ಲ; ವೇಳೆಯೂ ಬಹಳ ಬೇಡ. ವಿರಾಮಕಾಲದಲ್ಲಿ ಕೆಲಸ ಮಾಡಿದರೂ ೧೫ ದಿವಸಗಳಲ್ಲಿ ಟ್ರೆಂಚು ತಯಾರಾಗುವದು. ಜಾಗೆಯ ಅನುಕೂಲವಿಲ್ಲದಿದ್ದವರು ನೆರೆಹೊರೆಯವರೊಂದಿಗೆ ವ್ಯವಸ್ಥೆ ಮಾಡಿಕೊಳ್ಳಬೇಕು. ಒಂದೇ ಕಡೆಗೆ ವಾಸಿಸುವ ಎರಡು ಮೂರು ಕುಟುಂಬಗಳು ಎಲ್ಲರಿಗೂ ಅನುಕೂಲವಾಗುವಂತೆ ಒಂದು ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ಚಾಳಗಳಲ್ಲಿದ್ದವರೂ ಇದೇ ರೀತಿ ವ್ಯವಸ್ಥೆ ಮಾಡಿಕೊಳ್ಳಬೇಕು. ಆದರೆ ಒಂದೇ ಟ್ರೆಂಚಿನಲ್ಲಿ ಎಲ್ಲರೂ ಮುಕುರುವದಕ್ಕಿಂತ ಬೇರೆ ಬೇರೆ ಟ್ರೆಂಚುಗಳನ್ನು ಮಾಡುವದರಿಂದ ಎಲ್ಲರೀತಿಯಿಂದಲೂ ಒಳ್ಳೆಯದು. ಇದರಿಂದ ಅನವಶ್ಯಕ ಗೊಂದಲ ತಪ್ಪುವದಲ್ಲದೆ ಒಂದು ಟ್ರೆಂಚಿನ ಮೇಲೆ ನೇರವಾಗಿ ಬಾಂಬು ಬಿದ್ದರೆ ಉಳಿದ ಟ್ರೆಂಚಿನವರಾದರೂ ಸುರಕ್ಷಿತರಾಗಿರುವರಷ್ಟೇ. ಈ ದೃಷ್ಟಿಯಿಂದಾದರೂ ವ್ಯವಸ್ಥೆ ಮಾಡಿಕೊಳ್ಳಬೇಕು.

ಶೆಲ್ಟರು ಸೇರುವಾಗ್ಗೆ ಅವಶ್ಯವಾಗಿ ತೆಗೆದುಕೊಳ್ಳಬೇಕಾದ ಸಾಧನಗಳು:—

ಕೆಲವು ತಿಂಡಿ ಸಾಮಾನುಗಳು; ನೀರು; ಮಕ್ಕಳಿಗೆ ಹಾಲು ಮುಂತಾದವುಗಳು; ಮುಖವಾಡಗಳು ಇದ್ದರೆ; ಬೆಂಕಿ ಹೊತ್ತಿಸುವ ಸಾಧನಗಳು; ಮೇಣಬತ್ತಿ ಕಡ್ಡೀ ಪೆಟ್ಟಿಗೆ; ಒಂದು ಟಾರ್ಚು; ಬೆಂ ನೊಂ.ಸುವ ಸಾಧನಗಳು; ಒಂದು ಕೊಡಲಿ; ಸಲಾಕೆ ಶೆಲ್ಟರು ಕುಸಿದ ಅಗೆಯುವದಕ್ಕೆ; ಪ್ರಥಮಚಿಕಿತ್ಸೆಯ ಪೆಟ್ಟಿಗೆ ಒಂದು ಇದ್ದರೆ.

ಆದರೆ ಇವೆಲ್ಲವುಗಳನ್ನೂ ಒಯ್ದು ಹಾಕಿ ಒಂದು ದೊಡ್ಡ ಗುಡ್ಡೆಯನ್ನು ಮಾಡಬೇಡಿ. ಇವೆಲ್ಲವುಗಳನ್ನು ಇಡುವಂತೆ ಮೊದಲೇ ವ್ಯವಸ್ಥೆ ಇರಬೇಕು. ತಕ್ಕಷ್ಟು ಸ್ಥಳವೂ ಇರಬೇಕು.